
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 14 ಮಾರ್ಚ್30 - ಏಪ್ರಿಲ್ 5, 1998 ರೂ.2.00



ಕಾಮ್ರೇಡ್ ಇ.ಎಂ.ಎಸ್. ಲಾಲ್‌ಸಲಾಮ್

ಸ್ಥಿರತೆ ನೀಡಲು ಬಿ.ಜೆ.ಪಿ.ಗೆ ಖಂಡಿತಾ ಸಾಧ್ಯವಿಲ್ಲ

'ರಾಷ್ಟ್ರೀಯ ಅಜೆಂಡಾ' ವೆಂಬ ಮೋಸದ ಹಿನ್ನೆಲೆಯಲ್ಲಿ ಅಧಿಕಾರ ವಹಿಸಿಕೊಂಡ ವಾಜಪೇಯಿ ಸರಕಾರ ಮೋಸದ ಸಹಾಯದಿಂದಲೇ 'ಉತ್ತಮ ಆಳ್ವಿಕೆ' ನೀಡುವ ತನ್ನ ಭರವಸೆಯನ್ನು 'ಈಡೇರಿಸಲು' ಕಟಿಬದ್ಧವಾದಂತೆ ಕಾಣುತ್ತದೆ. ಕಳೆದ ಒಂದು ವಾರದ ಘಟನೆಗಳು ಒಂದೊಂದಾಗಿ ಬಿ.ಜೆ.ಪಿ. ಬೆಂಬಲಿಗರನ್ನೂ ಆತಂಕಕ್ಕೀಡು ಮಾಡಿವೆ, ಪೇಚಿಗೆ ಸಿಲುಕಿಸಿಟ್ಟಿದೆ. ಜನಾದೇಶವಿಲ್ಲದಿದ್ದರೂ ಬಿ.ಜೆ.ಪಿ.ಗೆ ಸರಕಾರ ರಚಿಸಲು ಅವಕಾಶ ಕೊಡಬೇಕೆಂದು ಬೊಬ್ಬೆ ಹಾಕುತ್ತಿದ್ದವರು, ಹಾಗೆ ಅವಕಾಶ ಕೊಡಲು ಸಿದ್ಧರಿಲ್ಲದ ರಾಜಕಾರಣಿಗಳನ್ನೆಲ್ಲ ಭಸ್ಮಾಸುರರು, ಶಕುನಿಗಳು ಎಂದೆಲ್ಲ ಕೂಗಾಡಿದ ಪತ್ರಿಕಾ ಸಂಪಾದಕರುಗಳು, ಪತ್ರಕರ್ತರೂ ಈ ಘಟನೆಗಳ ನಂತರ ದನಿ ಬದಲಿಸಿದ್ದಾರೆ.

ಬಿ.ಜೆ.ಪಿ. ಇತರ ರಾಜಕೀಯ ಪಕ್ಷಗಳಂತಲ್ಲ. ಆದ್ದರಿಂದ ಒಂದು ಸ್ಪಷ್ಟ ಜನಾದೇಶ ಪಡೆಯಲಾರದ ಅದರ ನೇತೃತ್ವದ ಸರಕಾರ ರಚಿಸಲು ಅವಕಾಶ ನೀಡುವುದು ದೇಶದ, ಜನತೆಯ, ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಅಪಾಯಕಾರಿ ಎಂಬ ಸಂಯುಕ್ತರಂಗದ, ಅದರಲ್ಲೂ ಎಡಪಕ್ಷಗಳ ನಿಲುವಿನ ಹಿನ್ನೆಲೆಯಲ್ಲಿದ್ದ ವಸ್ತುನಿಷ್ಠ ವಿಶ್ಲೇಷಣೆ ಈಗಲಾದರೂ ಇವರೆಲ್ಲರಿಗೆ ಅರ್ಥವಾಗಿದೆಯೋ ಗೊತ್ತಿಲ್ಲ. ಆದರೆ ಬಿ.ಜೆ.ಪಿ.ಯ ಮಾತು ಮತ್ತು ಕೃತಿಯ ನಡುವೆ ಅಪಾರ ಅಂತರವಿದೆ ಎಂಬ ಬಗ್ಗೆಯಂತೂ ಜ್ಞಾನೋದಯವಾದಂತೆ ಕಾಣುತ್ತಿದೆ.

"ಹೇಗಾದರೂ ಮಾಡಿ ಸಂವಿಧಾನದಲ್ಲಾಗಲಿ ತಪ್ಪುವಿಧಾನದಲ್ಲಾಗಲಿ ಒಬ್ಬರನ್ನೊಬ್ಬರು ಕೆಳಗೆಳೆದು ಹಾಕುವಲ್ಲಿನ ಹುಚ್ಚು ಸ್ಪರ್ಧೆ ಭಾರತದ ಪ್ರತಿಷ್ಠೆಗೆ ಕುಂದು ತಂದಿದೆ. ..... ನನ್ನ ಸರ್ಕಾರ ಸಹಕಾರ ಮತ್ತು ಸಮ್ಮಿಶ್ರತೆಯನ್ನು ಕಟ್ಟುವಂತಹ ವಾತಾವರಣ ನಿರ್ಮಿಸಲು ಬದ್ಧವಾಗಿದೆ" ಎಂದು ಪ್ರಧಾನ ಮಂತ್ರಿಗಳು ಕಳೆದ ಭಾನುವಾರ ದೇಶವನ್ನುದ್ದೇಶಿಸಿ ಹೇಳಿದ ಮಾತುಗಳು, ನಂತರ ರಾಷ್ಟ್ರಪತಿಗಳ ಭಾಷಣದ ಮೂಲಕ ಸಂಸತ್ತಿನಲ್ಲಿ ಸಾರಿದ "ಸರ್ವ ಸಮ್ಮತಿ" "ಸಂಘರ್ಷದ ಸ್ಥಾನದಲ್ಲಿ ಸಂಧಾನ-ಒಡಂಬಡಿಕೆ" ಇತ್ಯಾದಿ ಪದಗುಚ್ಛಗಳು ಕೇವಲ ಕುತಂತ್ರ, ಹೇಗಾದರೂ ಮಾಡಿ ಅಧಿಕಾರಕ್ಕೆ ಅಂಟಿಕೊಳ್ಳುವ ಬಿ.ಜೆ.ಪಿ.ಯ ಕೂಟದ ನಿಜ ಉದ್ದೇಶವನ್ನು ಅಡಗಿಸಿಡುವ ಪರದೆಗಳು ಮಾತ್ರ ಎಂದು ಬಹಳ ಬೇಗನೇ ಬಯಲಾಯಿತು. ಒಂದೆಡೆ ಆ ಮಾತುಗಳು ಹೊರಬರುತ್ತಿದ್ದ ವೇಳೆಯಲ್ಲಿಯೇ ಇನ್ನೊಂದೆಡೆ, ದಿಲ್ಲಿಯಲ್ಲಿ ಮಾತ್ರವಲ್ಲ, ಶಿಮ್ಲಾ, ಲಕ್ನೌಗಳಲ್ಲಿ ಬಯಲಾಯಿತು.

ಲೋಕಸಭಾ ಸ್ಪೀಕರ್ ಸ್ಥಾನ ಆಳುವ ಕೂಟಕ್ಕೆ ದೊರೆಯಬೇಕು ಎಂದು ಆರಂಭದಲ್ಲಿ ವಾದಿಸಿದ ಬಿ.ಜೆ.ಪಿ. ಅದು ಸಾಧ್ಯವಿಲ್ಲ ಎಂದು ಅರಿತಾಗ 'ಸರ್ವಸಮ್ಮತಿ"ಯ ಮಾತನಾಡುತ್ತಾ ಸಂಗ್ಮಾರವರ ಉಮೇದುವಾರಿಕೆಯನ್ನು ಒಪ್ಪುವ ನಾಟಕವಾಡುತ್ತಾ ತೆರೆ-ಮರೆಯಲ್ಲಿ ತೆಲುಗು ದೇಶಂನೊಂದಿಗೆ 'ವ್ಯವಹಾರ' ಕುದುರಿಸಿ 'ಸಮಾನ ದೂರ ನಿಲ್ಲುವ ಮಾತನಾಡುತ್ತಿದ್ದ' ತೆಲುಗು ದೇಶಂನ ಶ್ರೀಯುತ ಜಿ.ಎಂ.ಸಿ. ಬಾಲಯೋಗಿಯವರನ್ನು 'ಸರ್ವಸಮ್ಮತ" ಅಭ್ಯರ್ಥಿಯೆಂದು ಕೊನೆಗಳಿಗೆಯಲ್ಲಿ ಮುಂದಿಟ್ಟಿತು. ಸರ್ವಸಮ್ಮತಿಯಿಲ್ಲದಿದ್ದರೆ ತಾನು ಅಭ್ಯರ್ಥಿಯಾಗಲಾರೆ ಎಂದು ಸಾರಿದ್ದ ಸಂಗ್ಮಾರವರು ಸ್ಪರ್ಧಿಸಲೇ ಬೇಕಾದಂತಹ ಸ್ಥಿತಿ ಉಂಟುಮಾಡಿತು. 'ಸರ್ವಸಮ್ಮತಿ"ಯ ಯಾವ ನೀತಿಯ ಪ್ರಕಾರ ವಾಜಪೇಯಿ ಸರಕಾರ ಇಂತಹ ಕೃತ್ಯಕ್ಕಿಳಿಯಿತು ಎಂದು ಅವರ ಬೆಂಬಲಿಗರೂ ಪ್ರಶ್ನಿಸುವಂತಾಗಿದೆ.

ಬಂಗಾಳ, ಒರಿಸ್ಸಾಗಳಲ್ಲಿ ಭಾರೀ ಅನಾಹುತ ಮಾಡಿದ ಬಿರುಗಾಳಿ ಸಂತ್ರಸ್ತ ಪ್ರದೇಶಗಳ ಭೇಟಿಗೆ ಸಂಬಂಧಪಟ್ಟಂತೆ ಸಂಸತ್ತಿನಲ್ಲಿ ಪ್ರತಿಪಕ್ಷಗಳ ಸಭಾತ್ಯಾಗದ ನಂತರವೇ ಸರ್ವಪಕ್ಷ ನಿಯೋಗದ ನಿರ್ಧಾರ ವಾಜಪೇಯಿ ಸರ್ಕಾರದ 'ಸರ್ವಸಮ್ಮತಿ'ಯ ಅಳಿದುಳಿದ ಪರದೆಯನ್ನೂ ಚಿಂದಿ ಮಾಡಿದ್ದರೆ, 'ವಾಜಪೇಯಿ ಸಂಪುಟದಲ್ಲಿ ಸ್ಥಾನಗಳಿಗೇನು ಕೊರತೆಯಿಲ್ಲ' ಎನ್ನುತ್ತಾ ವಿಶ್ವಾಸಮತಗಳಿಸಲು ಲೋಕಸಭಾ ಸದಸ್ಯರಿಗೆ ಆಮಿಷ ಹಾಗೂ ಬಿ.ಎಸ್.ಪಿ. ಸದಸ್ಯರೊಬ್ಬರಿಗೆ ಗೈರುಹಾಜರಾಗಲು 5 ಕೋಟಿ ರೂ.ಗಳ ಆಮಿಷ ನೀಡಲಾಯಿತೆನ್ನುವ ಆಪಾದನೆಕೇಳಬಂತು. ಬಿಜೆಪಿ ನೇತೃತ್ವದ ಸರಕಾರ ವಿಶ್ವಾಸಮತ ಪಡೆಯಲು ಮುಂದಾದದ್ದು ಈ ಹಿನ್ನೆಲೆಯಲ್ಲಿ.

ಇಂತಹ ಸಂದರ್ಭದಲ್ಲಿ "ದುರದೃಷ್ಟವಶಾತ್, ಸಂಯುಕ್ತರಂಗವನ್ನು ಅಸ್ತವ್ಯಸ್ತಗೊಳಿಸುವ ಬಿ.ಜೆ.ಪಿ.ಯ ಭಾರೀ ಪ್ರಯತ್ನಕ್ಕೆ ಯಶಸ್ಸು ದೊರಕಿದೆ. ತೆಲುಗು ದೇಶಂನ ಮುಖಂಡ ಚಂದ್ರಬಾಬು ನಾಯ್ಡುರವರು ಸಂಯುಕ್ತರಂಗವನ್ನು ಅಸ್ತವ್ಯಸ್ತಗೊಳಿಸುವ ಅಸ್ತ್ರವಾಗಿ ತನ್ನನ್ನು ಬಳಸಿಕೊಳ್ಳಲು ಅವಕಾಶ ನೀಡಿದ್ದಾರೆ" ಎಂದು ಸಿ.ಪಿ.ಐ(ಎಂ)ನ ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ಖೇದ ವ್ಯಕ್ತಪಡಿಸಿದ್ದಾರೆ. ಯಾವ ರಂಗವನ್ನು ಕಟ್ಟಲು ತಾವೇ ನೆರವಾಗಿದ್ದರೋ ಅದನ್ನು ತಾನು ಮಾತ್ರ ಬಿಡುತ್ತಿಲ್ಲ ಎಂದು ತೋರಿಸಿಕೊಳ್ಳಲು ಅವರು ನ್ಯಾಶನಲ್ ಕಾನ್ಫರೆನ್ಸ್ ಹಾಗೂ ಎ.ಜಿ.ಪಿ. ಮೇಲೆ ಪ್ರಭಾವ ಬೀರುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅವರೀಗ ಹೊಸ ರಂಗ ಸ್ಥಾಪಿಸಿಕೊಂಡು ಬಿ.ಜೆ.ಪಿ.ಗೆ 'ಪ್ರಶ್ನೆ-ಆಧಾರಿತ' ಬೆಂಬಲ" ನೀಡುತ್ತಾರಂತೆ. ಇದು ಬಿ.ಜೆ.ಪಿ.ಗೆ ನೆರವಾಗಲು ಸಾಧನವಾಗಬಲ್ಲದು ಎಂದು ನಾಯ್ಡುರವರು ಭಾವಿಸದಂತಿದೆ ಎನ್ನುತ್ತಾರೆ ಸುರ್ಜಿತ್. ಆದರೆ ಇವೆಲ್ಲಾ ಪ್ರಯತ್ನಗಳು ಸಂಯುಕ್ತ ರಂಗವನ್ನು ದುರ್ಬಲ ಗೊಳಿಸುವುದಿಲ್ಲ. ಅವಸಾನಗೊಳ್ಳುವ ಪ್ರಶ್ನೆಯೇ ಇಲ್ಲ. ಏಕೆಂದರೆ ಅದರ ಅಗತ್ಯ ಇನ್ನೂ ಇದೆ ಎಂದಿರುವ ಸುರ್ಜಿತ್‌ರವರು "ಸ್ಥಿರತೆ ನೀಡಲು ಬಿಜೆಪಿಗೆ ಸಾಧ್ಯವಿಲ್ಲ. 'ರಾಷ್ಟ್ರೀಯ ಅಜೆಂಡಾ' ಏನೇ ಘೋಷಿಸಿರಲಿ, ತನ್ನ ಪ್ರಣಾಳಿಕೆಯಲ್ಲಿ ವಿವರಿಸಿದ ಅಡಗಿಸಿಟ್ಟ ಅಜೆಂಡಾವನ್ನೇ ಬಿಜೆಪಿ ಅನುಸರಿಸುತ್ತದೆ. ಮುಂಬರುವ ದಿನಗಳಲ್ಲಿ ಬಿ.ಜೆ.ಪಿ.ಗೆ ನೀಡಿದ ಸಚಿವ ಖಾತೆಗಳನ್ನು ದೇಶದ ಧರ್ಮನಿರಪೇಕ್ಷ ಚೌಕಟ್ಟನ್ನು ದುರ್ಬಲಗೊಳಿಸಲು ಬಳಸುತ್ತದೆ. ಸಾಮಾಜಿಕ ಹೋರಾಟಗಳು ಹಾಗೂ ಆಂದೋಲನಗಳ ಮೂಲಕ ಈ ಪ್ರಯತ್ನಗಳನ್ನು ಪ್ರತಿರೋಧಿಸಬೇಕು" ಎಂದು ಸುರ್ಜಿತ್ ಕರೆ ನೀಡಿದ್ದಾರೆ.

ಬಿ.ಜೆ.ಪಿ. ಆಳ್ವಿಕೆ ಅವರು ಕಂಡಂತೆ

ಹೊರಗೊಂದು ಮಾಡುತ್ತಲೇ ಒಳಗೊಳಗೆ ಕುತಂತ್ರವು ಭಾರತೀಯ ಜನತಾ ಪಕ್ಷವ ವಿಶ್ವಾಸಕ್ಕೆ ಅರ್ಹವಾಗಿಲ್ಲ ಎಂದು ಜನ ಭಾವಿಸಲು ಅಸ್ಪದ ಕೊಟ್ಟಂತಾಗಿದೆ.

- ಸಂಯುಕ್ತ ಕರ್ನಾಟಕ 26-3-98

ಭಾರತೀಯ ಜನತಾ ಪಕ್ಷದ ಇತ್ತೀಚಿನ ವರ್ತನೆ, ಒಟ್ಟಾರೆ ಅಭಿಪ್ರಾಯವನ್ನು ಗೌರವಿಸುವ ಭರವಸೆಯನ್ನು ಮೂಡಿಸೀತೇ ಎನ್ನುವುದೇ ಈಗಿನ ಮುಖ್ಯ ಪ್ರಶ್ನೆ

- ಕನ್ನಡ ಪ್ರಭ, 26-3-98

ಖಂಡಿತಾ ಹೀಗಾದ್ದು ರಚನಾತ್ಮಕ ರಾಜಕೀಯಕ್ಕೆ ಸಹಾಯಕವಾಗುವುದಿಲ್ಲ (ಹೊಸ ಲೋಕ ಸಭಾಧ್ಯಕ್ಷರು) ಉತ್ತರ ಪ್ರದೇಶದ ವಿಧಾನಸಭಾಧ್ಯಕ್ಷರಂತೆ ಘನತೆಮೀರಿ ವರ್ತಿಸದಿರುವುದು ಬಹಳ ಮುಖ್ಯ.

- ಇಂಡಿಯನ್ ಎಕ್ಸ್‌ಪ್ರೆಸ್, 25-3-98

ಶಿಮ್ಲಾದಲ್ಲಿ ಬಿ.ಜೆ.ಪಿ.-ಹಿಮಾಚಲ ವಿಕಾಸ್ ಕಾಂಗ್ರೆಸ್‌ನ ಸಮಿಶ್ರ ಸರಕಾರ ಪ್ರತಿಜ್ಞೆ ಸ್ವೀಕರಿಸಿರುವುದು ಒಳ್ಳೆಯ ಆಡಳಿತದ ಪ್ರತಿಯೊಂದು ನೀತಿಯನ್ನೂ ಅಪಹಾಸ್ಯಕ್ಕೀಡು ಮಾಡಿರುವ "ಸಹಕಾರ ಮತ್ತು ಒಡಂಬಡಿಕೆಯ" ಒಂದು ಉದಾಹರಣೆ

- ಟೈಂಸ್ ಆಫ್ ಇಂಡಿಯಾ 25-3-98

ಲೋಕಸಭಾಧ್ಯಕ್ಷರ ಸ್ಥಾನದ ನಾಟಕದಲ್ಲಿ ದೊಡ್ಡ ಹೊಡೆತ ತಿಂದದ್ದು ಸಂಯುಕ್ತ ರಂಗವಲ್ಲ, ಪ್ರಧಾನ ಮಂತ್ರಿ ವಾಜಪೇಯಿಯವರು ಘೋಷಿಸುವುದಾಗಿ ಹೇಳಿದ ಸರ್ವಸಮ್ಮತಿಯ ಭಾವನೆ.

- ಟೈಂಸ್ ಆಫ್ ಇಂಡಿಯಾ 26-3-98

ಬಿ.ಜೆ.ಪಿ. ಬೆಂಬಲಿತ ತೆಲುಗುದೇಶಂ ಅಭ್ಯರ್ಥಿಯ 12ನೇ ಲೋಕಸಭೆಯ ಅಧ್ಯಕ್ಷರಾಗಿ ಚುನಾವಣೆ ಕುಟಿಲ ರಾಜಕೀಯದ ಅತ್ಯಂತ ಅಸಹ್ಯ ಚರಮ ಬಿಂದು. ಮೊದಲಿನಿಂದಲೇ ಪ್ರಧಾನಿ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಹೇಳಿಕೊಂಡು ಬಂದ ಸರ್ವ ಸಮ್ಮತಿಯ ಭಾವಕ್ಕೆ ವ್ಯತಿರಿಕ್ತವಾದದ್ದು

- ದಿ ಹಿಂದೂ, 25.3.98

ಜನತಾದಳದ ಮುಖಂಡರು ಪಾಠ ಕಲಿತಿಲ್ಲ

ಮಾರ್ಚ್ 26ರಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಪರವಾಗಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ಸೂರ್ಯನಾರಾಯಣ ರಾವ್, ಜಿ.ವಿ.ಶ್ರೀರಾಮರೆಡ್ಡಿ ಹಾಗೂ ಎಸ್.ವೈ.ಗುರುಶಾಂತ್ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಅಲ್ಲಿ ಬಿಡುಗಡೆ ಮಾಡಲಾದ ಹೇಳಿಕೆಯನ್ನು ಇಲ್ಲಿ ಕೊಡಲಾಗಿದೆ.

ಉದಾರೀಕರಣದ ಹೊಸ ಆರ್ಥಿಕ ನೀತಿಗಳನ್ನು ತೀವ್ರವಾಗಿ ಜಾರಿಗೊಳಿಸಿದ ರಾಜ್ಯಗಳಲ್ಲೆಲ್ಲಾ ಬೆಲೆ ಏರಿಕೆ, ನಿರುದ್ಯೋಗದ ಹೆಚ್ಚಳ, ದಿವಾಳಿಯಂಚಿಗೆ ಸಾಗುತ್ತಿರುವ ಕೃಷಿ, ಅನಭಿವೃದ್ಧಿ ಮುಂತಾಗಿ ಸಂಕಷ್ಟಗಳಿಂದಾಗಿ ಜನತೆಯು ಆಯಾ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ ಪಕ್ಷಗಳ ವಿರುದ್ಧ ಮತ ನೀಡಿದ್ದಾರೆ. ಈ ಆರ್ಥಿಕ ನೀತಿಗಳ ಧಾಳಿಯಿಂದ ಜನತೆಯನ್ನು ರಕ್ಷಿಸಲು ಕ್ರಮ ವಹಿಸಿದ ಎಡರಂಗಗಳ ಸರ್ಕಾರಗಳನ್ನು, ಪಕ್ಷಗಳನ್ನು ಬೆಂಬಲಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿಯೂ ಇತರೆ ರಾಜ್ಯಗಳಲ್ಲಿನಂತೆ ಜನತೆಯು ತೀವ್ರವಾಗಿ ಪ್ರತಿಕ್ರಯಿಸಿದ್ದಾರೆ. ಜನತಾದಳ ಈಗ ಅನುಸರಿಸುತ್ತಿರುವ ನೀತಿಗಳನ್ನು ಪೂರ್ಣವಾಗಿ ಮಾರ್ಪಡಿಸಿಕೊಂಡು ಜನಗಳಿಗೆ ಪರಿಹಾರ ಕ್ರಮ ಕೈಗೊಂಡರೆ ಮಾತ್ರ ಅವರನ್ನು ಆಧರಿಸಬಲ್ಲರು.

ಆದರೆ ಜನತಾದಳ ಈ ತರಹದ ಪಾಠವನ್ನು ಕಲಿತಿಲ್ಲ ಎಂಬುದನ್ನು ಅದೇ ಹಾನಿಕಾರಕ ಹಾದಿಯಲ್ಲಿಯೇ ಸಾಗುತ್ತಿರುವುದನ್ನು ಅದರ ಮುಖಂಡರು ಘಂಟಾಘೋಷವಾಗಿ ಸಾರುತ್ತಿದ್ದಾರೆ. ರಾಜ್ಯ ಸರ್ಕಾರದ ಕಾರ್ಯಸೂಚಿಯಾಗಿರುವ ರಾಜ್ಯಪಾಲರ ಭಾಷಣದಲ್ಲಿ ಕಿಂಚಿತ್ತೂ ಜನರ ಹಿತ ರಕ್ಷಿಸುವ ಹಾಗೂ ಅಭಿವೃದ್ಧಿಯ ಹೊಸ ಯೋಜನೆಗಳನ್ನು ಒಳಗೊಂಡಿರುವ ಯಾವ ಅಂಶಗಳೂ ಇಲ್ಲದೇ ದಿವ್ಯ ನಿರ್ಲಕ್ಷತನದ ಪರಮಾವಧಿ ಕಂಡಿದೆ. ಮಾತ್ರವಲ್ಲ ಹಣಕಾಸು ಸಚಿವರು ಮಂಡಿಸಿದ ಬಜೆಟ್ ಸಹ ನೊಂದ ಜನತೆಗೆ ಗಾಯದ ಮೇಲೆ ಬರೆ ಎಳೆಯುವಂತೆ ಹೊಸ ತೆರಿಗೆಗಳು, ಸಾಮಾನ್ಯ ಜನರು ಬಳಸುವ ವಸ್ತುಗಳ ಬೆಲೆ ಏರಿಕೆ, ಕೊರತೆಯ ಆಯ-ವ್ಯಯ, ಉದ್ಯೋಗಿಗಳ ನೇಮಕಾತಿ ನಿರ್ಬಂಧ, ಉದ್ಯೋಗ ರಹಿತ ಬೆಳವಣಿಗೆಗೆ ಒತ್ತು ನೀಡಿರುವುದು, ಅಭಿವೃದ್ಧಿ ಎಂದರೆ ವಿದೇಶಿ ಬಂಡವಾಳದ ಮೇಲೆ ಪೂರ್ಣ ಅವಲಂಬನೆ ಎಂಬುದು ಮುಂತಾದ ಅಂಶಗಳನ್ನು ಒಳಗೊಂಡು ವಿಶ್ವಬ್ಯಾಂಕಿನ ಶರತ್ತುಗಳ ತಾಳಕ್ಕೆ ಕುಣಿಯುವ ದಿಕ್ಕಿನಲ್ಲಿ ಸಾಗಿದೆ. ನೀರಾವರಿ ಪ್ರದೇಶದ ರೈತರ ಮೇಲೆ ಬೆಟರ್‌ಮೆಂಟ್ ಶುಲ್ಕ ವಿಧಿಸಲು ನಿರ್ಧರಿಸಿ ಸಚಿವ ಸಂಪುಟದ ಸಹ ಸಮಿತಿಯನ್ನು ರಚಿಸಿದೆ. ಈ ಹಿಂದೆ ಗುಂಡೂರಾಯರ ಸರ್ಕಾರ ಇದೇ ರೀತಿ ಶುಲ್ಕವನ್ನು ರೈತರ ಮೇಲೆ ಹೇರಲು ತೊಡಗಿದಾಗ ನರಗುಂದ, ನವಲಗುಂದದಲ್ಲಿ ರೈತರ ಬಂಡಾಯ ಅಸ್ಫೋಟಗೊಂಡದ್ದನ್ನು ಜನತಾದಳ ಮರೆತಿದೆ. 1983-85 ರ ಅವಧಿಯ ಆಡಳಿತ ಜನಪರ ಅಂಶಗಳನ್ನಾದರೂ ಕಲಿಯಬೇಕಿತ್ತು. ಅಲ್ಲದೇ ಬೀದರ್, ಗುಲ್ಬರ್ಗಾಗಳಲ್ಲಿ ಬೆಳೆ ಹಾನಿ, ಬರದಿಂದ ಪೀಡಿತ ರೈತರು ತತ್ತರಿಸುತ್ತಿರುವಾಗ ಜನತಾದಳದ ಸರ್ಕಾರದ ಕ್ರಮಗಳು ನಿರ್ಲಕ್ಷ್ಯತನದ್ದಾಗಿವೆ. ದಿವಾಳಿಕೋರ ಆರ್ಥಿಕ ನೀತಿ ಹಾಗೂ ಕೋಮುವಾದಿ ಶಕ್ತಿಗಳು ಕಾಲಕಾಲಕ್ಕೆ ಒಡ್ಡುತ್ತಬಂದ ಸವಾಲುಗಳಿಗೆ, ರಾಜಕೀಯ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸದೇ ಜನತಾದಳ ತನ್ನ ರಾಜಕೀಯ ನಿಷ್ಕ್ರಿಯತೆಯನ್ನು ತೋರಿಸಿದೆ. ಇದನ್ನೇ ಬಿಜೆಪಿ-ಲೋಕಶಕ್ತಿಗಳು ಬಳಸಿವೆ.

ಇಂತಹ ವಸ್ತು ಸ್ಥಿತಿಯ ಎದುರಿನಲ್ಲಿ ಜನತಾದಳವು ಅನುಭವದಿಂದ ಪಾಠ ಕಲಿಯಲು ತಯಾರಿಲ್ಲ ಎಂಬುದು ಇತ್ತೀಚಿಗಿನ ಅದರ ಕ್ರಮಗಳು ತೋರಿಸುತ್ತಿವೆ.

ಜನತೆಯ ಅತೃಪ್ತಿಯ ಲಾಭ ಪಡೆಯಲು ಹವಣಿಸುವ ಕೋಮುವಾದಿ ಬಿಜೆಪಿಯ ಯತ್ನಗಳನ್ನು ತಡೆಗಟ್ಟಿ ಜನತೆಯ ನೈಜ ಹಿತರಕ್ಷಣೆಗಾಗಿ ರಾಜ್ಯದ ಸಮಾನ ಮನಸ್ಕ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಿ ಕಾರ್ಯವೆಸಗಬೇಕೆಂದು ಸಿಪಿಐ(ಎಂ) ಕರೆ ನೀಡುತ್ತದೆ.

ಕಾಂ.ಇಎಂಎಸ್‌ರವರಿಗೆ ಶ್ರದ್ಧಾಂಜಲಿ: ಇತ್ತೀಚೆಗೆ ನಮ್ಮನಗಲಿದ ಕಾಂ. ಇ.ಎಂ.ಎಸ್. ನಂಬೂದರಿಪ್ಪಾಡ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಲು ಇದೇ ಏಪ್ರಿಲ್ 4 ರಂದು ಬೆಂಗಳೂರು ನಗರದ ಟೌನ್‌ಹಾಲ್‌ನಲ್ಲಿ ಸಭೆಯನ್ನು ಕರೆಯಲಾಗಿದೆ. ನಾಡಿನ ವಿವಿಧ ರಾಜಕೀಯ ಪಕ್ಷದ ಮುಖಂಡರು, ವಿವಿಧ ವಿಭಾಗಗಳ ಗಣ್ಯರು ಮಾತನಾಡಲಿದ್ದು, ರಾಜ್ಯದ ವಿವಿಧಕಡೆಗಳಿಂದಲೂ ಪ್ರತಿನಿಧಿಗಳು ಭಾಗವಹಿಸುವರು. ಕಾಂ. ಇ.ಎಂ.ಎಸ್.ರವರ ಕೃತಿಗಳು, ಫೋಟೋಗಳು ಮುಂತಾದ ಪ್ರದರ್ಶನ ಸಹ ವ್ಯವಸ್ಥೆಗೊಳಿಸಲಾಗಿದೆ.



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ –೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಎರಡನೇ ಮಹಾಯುದ್ಧ ಮುಗಿಯುತ್ತಿದ್ದಂತೆ ದೇಶಾದ್ಯಂತ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಸೈನಿಕರ ಒಂದು ದೊಡ್ಡ ಉತ್ಕ್ರಾಂತಿಯೇ ಭುಗಿಲೆದ್ದಿತು. ಆಗಸ್ಟ್ 1945 ರಲ್ಲಿ ವಾರಣಾಸಿಯಲ್ಲಿ 17 ಪ್ರದರ್ಶನಕಾರರನ್ನು ಗುಂಡಿಟ್ಟು ಕೊಲ್ಲಲಾಯಿತು. 2000 ಮಂದಿ ಗಾಯಗೊಂಡರು. ಮುಂಬೈಯಲ್ಲಿ ಸೆಪ್ಟೆಂಬರ್‌ನಲ್ಲಿ ಕಾರ್ಮಿಕರ ಮುಷ್ಕರದ ಸಮಯದಲ್ಲಿ ಬಂಡಾಯದ ವಾತಾವರಣವೇ ಏರ್ಪಟ್ಟಿತು. ಕೆಲವೆಡೆ ಹೀಗೆ ಭುಗಿಲೆದ್ದ ಜನಗಳ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಗಳು ಪ್ರತಿಗಾಮಿ ರಾಜಕಾರಣಿಗಳಿಂದಾಗಿ ಹಿಂದು-ಮುಸ್ಲಿಂ ತಿಕ್ಕಾಟದ ರೂಪವನ್ನು ಪಡೆದರೂ ಒಟ್ಟಾರೆಯಾಗಿ ಜಾತಿ-ಧರ್ಮದ ಭೇದ ಭಾವನೆಗಳಿಲ್ಲದೆ ಜನಗಳೆಲ್ಲಾ ಈ ಉತ್ಕ್ರಾಂತಿಯಲ್ಲಿ ಭಾಗವಹಿಸಿದರು.



ಕಲ್ಕತ್ತೆಯಲ್ಲಿ ಕಾರ್ಮಿಕರ ಬೃಹತ್ ಪ್ರದರ್ಶನ

ಈಗಿನ ಹೋರಾಟಗಳಿಗೂ ಹಿಂದೆ ನಡೆದ ಹೋರಾಟಗಳಿಗೂ ಇದ್ದ ಒಂದು ವ್ಯತ್ಯಾಸವೆಂದರೆ ಈ ಬಾರಿ ಹೋರಾಟನಿರತ ದುಡಿಯುವ ಜನಗಳ ಸಂಘಟನೆಗಳ ಪ್ರಭಾವ ಎದ್ದುಕಾಣುತ್ತಿತ್ತು. ಕ್ವಿಟ್ ಇಂಡಿಯಾ ಹೋರಾಟದ ಸಮಯದಲ್ಲಿ ಕಾಂಗ್ರೆಸ್ಸಿಗೆ ಸವಾಲು ಹಾಕಿ ಒಂದು ಕ್ರಾಂತಿಕಾರಿ ಸಾಮೂಹಿಕ ಪಕ್ಷವಾಗಿ ಬೆಳೆದ ಕಮ್ಯುನಿಸ್ಟ್ ಪಕ್ಷ, ಕ್ವಿಟ್ ಇಂಡಿಯಾ ಹೋರಾಟಕ್ಕೆ ಸಂಘಟಿತ ನೇತೃತ್ವ ನೀಡಿದ ಸೋಶಲಿಸ್ಟರು ಮತ್ತು ಇತರ ಎಡಪಂಥೀಯರು ಈ ಹೋರಾಟಗಳಿಗೆ ಈಗ ನೇತೃತ್ವ ನೀಡಿದರು. ಕಮ್ಯುನಿಸ್ಟರು ಬಿಟ್ಟು ಇತರರು ಕಾಂಗ್ರೆಸ್ಸಿನ ಬಲಪಂಥೀಯ ಮುಖಂಡತ್ವದ ಪ್ರಭಾವದಲ್ಲಿದ್ದರೂ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ವಿರುದ್ಧ ಯಾವುದೇ ರಾಜಿಯಿಲ್ಲದೆ ಹೋರಾಟದ ಸಮಯವೀಗ ಬಂದಿದೆ ಎಂದು ಭಾವಿಸಿದ್ದರು.

1945 ರ ಕೊನೆಯ ವೇಳೆಗೆ ನಡೆದ ಎರಡು ಘಟನೆಗಳು ಈ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಕ್ಕೆ ಬಿರುಗಾಳಿಯ ರೂಪಕೊಟ್ಟವು ಎನ್ನಬಹುದು. ಜಪಾನಿನ ಶರಣಾಗತಿಯಿಂದಾಗಿ ಸುಮಾರು 20000 ಸೈನಿಕರು ಹಾಗೂ ಸೇನಾಧಿಕಾರಿಗಳಾಗಿದ್ದ ಆಝಾದ್ ಹಿಂದ್ ಸೇನೆಯ ಸೈನಿಕರು ಬ್ರಿಟಿಶರ ಬಂಧಿಗಳಾದರು. ಈ ಸೈನಿಕರು ಬ್ರಿಟಿಶರಿಗೆ ವಿಧೇಯರಾಗಿ ತಮ್ಮ ಕರ್ತವ್ಯ ನೆರವೇರಿಸಲಿಲ್ಲವಾದ್ದರಿಂದ ಅವರ ವಿರುದ್ಧ ದೇಶದ್ರೋಹದ ಆಪಾದನೆ ಹಾಕಿ ವಿಚಾರಣೆ ನಡೆಸಲು ಬ್ರಿಟಿಷರು ನಿರ್ಧರಿಸಿದರು. ಮೂವರು **ಆಝಾದ್ ಹಿಂದ್ ಸೇನೆಯ** ಪ್ರಮುಖರಾದ **ಕರ್ನಲ್ ಶಾನವಾಜ್, ಕ್ಯಾಪ್ಟನ್ ಢಿಲ್ಲೋನ್** ಹಾಗೂ **ಕ್ಯಾಪ್ಟನ್ ಸಹಗಲ್** ವಿರುದ್ಧ ವಿಚಾರಣೆ ನಡೆಸಿ ದೀರ್ಘಕಾಲದ ಶಿಕ್ಷೆ ವಿಧಿಸಿದ ಸುದ್ದಿ ಕೇಳಿದ ತಕ್ಷಣವೇ ದೇಶಾದ್ಯಂತ ಪ್ರತಿಭಟನೆಯ ಅಲೆಗಳೇ ಎದ್ದವು. ಸರಕಾರ ಅದನ್ನು ದಮನ ಮಾಡಲು ಮುಂದಾದರೂ ಜನ ಲೆಕ್ಕಿಸದೆ ತಮ್ಮ ಪ್ರತಿಭಟನೆ ಮುಂದುವರಿಸಿದರು. ಕಲ್ಕತ್ತೆಯಲ್ಲಿ **ರಾಮೇಶ್ವರ್ ಬ್ಯಾನರ್ಜಿ** ಎಂಬ ವಿದ್ಯಾರ್ಥಿ ಪೋಲೀಸರ ಗುಂಡಿಗೆ ಬಲಿಯಾದ.



ಮರುದಿನ ಆ ನಗರ ಹಿಂದೆಂದೂ ಕಾಣದಂತಹ ಹರತಾಳವನ್ನು ಕಂಡಿತು. ಕಾರ್ಮಿಕರು ಸಾರ್ವತ್ರಿಕ ಮುಷ್ಕರ ನಡೆಸಿದರು. ಮುಂಬೈ, ಕಲ್ಕತ್ತಾ, ಮಧುರಾ, ದಿಲ್ಲಿ, ಮೇರಠ್, ಪೇಶಾವರ್ ಇತ್ಯಾದಿ ಹಲವೆಡೆ ಮತಪ್ರದರ್ಶನಗಳು ನಡೆದವು. ಮುಂಬೈಯಲ್ಲಿ 23 ಜನ, ಕಲ್ಕತ್ತೆಯಲ್ಲಿ 40 ಜನ ಪೋಲೀಸ್ ಗುಂಡುಗಳಿಗೆ ಬಲಿಯಾದರು. ಜನ ರಸ್ತೆ ತಡೆಗಳನ್ನು ನಿರ್ಮಿಸಿ ಕಾಂಗ್ರೆಸ್, ಮುಸ್ಲಿಂಲೀಗ್ ಹಾಗೂ ಕಮ್ಯುನಿಸ್ಟ್ ಬಾವುಟಗಳನ್ನು ಕಟ್ಟಿದರು. ನವಂಬರ್ 29 ರಂದು ಇಡೀ ದಿನ ರಾತ್ರಿ ವಿದ್ಯಾರ್ಥಿಗಳು ಧರಣಿ ಕೂತರು. ಅವರೊಂದಿಗೆ ಕೂತಿದ್ದ ಕಾಂಗ್ರೆಸ್‌ನ ಹಿರಿಯ ಮಹಿಳಾ ಮುಖಂಡರಾದ ಜ್ಯೋತಿರ್ಮಯಿ ಗಂಗೂಲಿ ಮರುದಿನ ಬೆಳಿಗ್ಗೆ ಕಾರ್ ಅಪಘಾತದಲ್ಲಿ ಸತ್ತರು.

ಈ ಹೋರಾಟ ಎಷ್ಟೊಂದು ಸ್ಫೂರ್ತಿದಾಯಕವಾಗಿತ್ತೆಂದರೆ ಖ್ಯಾತ ಬಂಗಾಳಿಕವಿ ನರೇಂದ್ರನಾಥ್ ಚಕ್ರವರ್ತಿ ಒಂದು ಕವಿತೆ ಬರೆದರೆ ಖ್ಯಾತ ಕಾದಂಬರಿಕಾರ ಮಾಣಿಕ್ ಬಂದೋಪಾಧ್ಯಾಯ **'ಚಿಹ್ನಾ'** ಕಾದಂಬರಿ ಬರೆದರು. ತೇಜ್ ಬಹದ್ದೂರ್ ಸಪ್ರು, ಜವಾಹರಲಾಲ್ ನೆಹ್ರೂ ಮುಂತಾದವರು ಆಝಾದ್ ಹಿಂದ್ ಸೇನೆಯ ಬಂಧಿಗಳ ಕಾನೂನು ರಕ್ಷಣೆಗೆ ಮುಂದಾದರು.

ಡಿಸೆಂಬರ್1, 1946 ರಂದು ಬ್ರಿಟಿಶ್ ಸೇನಾಧಿಪತಿ **ಫೀಲ್ಡ್ ಮಾರ್ಷಲ್ ಆಚಿನ್‌ಲೇಕ್** ಒಂದು ಗುಪ್ತ ವರದಿ ನೀಡಿದರು. ಅದರಲ್ಲಿ 'ಮುಂದಿನ ವಸಂತಕಾಲದಲ್ಲಿ 1942 ರ ಆಗಸ್ಟ್ ಬಂಡಾಯವನ್ನು ಸಂಪೂರ್ಣವಾಗಿ ಮೀರಿಸುವಂತಹ ಒಂದು ಸಾಮೂಹಿಕ ಕ್ರಾಂತಿ ನಡೆಯಲಿದೆ' ಎಂದು ಹೇಳಲಾಗಿತ್ತಂತೆ. ಉತ್ತರ ಪ್ರದೇಶ, ಬಿಹಾರ ಮತ್ತು ಬಂಗಾಳ ಈ ಬಿರುಗಾಳಿಯ ಕೇಂದ್ರವಾಗಲಿದೆ ಎಂದೂ ಎಚ್ಚರಿಸಲಾಗಿತ್ತು.



ಮುಂಬೈಯಲ್ಲಿ ಆಝಾದ್ ಹಿಂದ್ ಸೈನಿಕರ ವಿಚಾರಣೆಯ ವಿರುದ್ಧ ಪ್ರತಿಭಟನೆ

ಫೆಬ್ರವರಿ 10, 1946 ರಂದು ದಿಲ್ಲಿ ಕೋಟೆಯಲ್ಲಿ ಆಝಾದ್ ಹಿಂದ್ ಸೇನೆಯ **ಕ್ಯಾಪ್ಟನ್ ರಶೀದ್ ಅಲಿ**ಯ ವಿಚಾರಣೆ ಆರಂಭಿಸಿದಾಗ ಮತ್ತೆ ಪ್ರತಿಭಟನೆ ಭುಗಿಲೆದ್ದಿತು. ಕಲ್ಕತ್ತೆಯ ವಿದ್ಯಾರ್ಥಿಗಳು ಸಾರ್ವತ್ರಿಕ ಮುಷ್ಕರ ನಡೆಸಿ ನಿಷೇಧಿತ ಡಾಲ್‌ಹೌಸಿ ಸ್ಕ್ವೇರ್‌ಗೆ ಮೆರವಣಿಗೆ ತೆಗೆದರು. ಫೆಬ್ರವರಿ 11 ಹಾಗೂ 12 ರಂದು ಕಲ್ಕತ್ತೆಯಲ್ಲಿ ಜನ ಒಗ್ಗಟ್ಟಿನಿಂದ ಬಂಡೆದ್ದರು. ಟ್ರಾಮ್, ಬಸ್, ರಿಕ್ಷಾ, ರೈಲ್ವೇ ಎಲ್ಲಾ ಸ್ತಬ್ಧಗೊಂಡವು. ಮಿಲಿಟರಿ ವಾಹನಗಳಿಗೆ ಜನ ಬೆಂಕಿ ಹಚ್ಚಿದರು. ಫೆಬ್ರವರಿ 11 ರಂದು 10 ಲಕ್ಷ ಜನರ ಮೆರವಣಿಗೆ ನಡೆಯಿತು. ಮುಸ್ಲಿಂ ಮುಖಂಡ ಸುಹ್ರವರ್ದಿ ಹಾಗೂ ಗಾಂಧಿವಾದಿ ಮುಖಂಡ ಸತೀಶ್ ದಾಸ್‌ಗುಪ್ತಾ ನೇತೃತ್ವ ನೀಡಿದರು. 'ಈ ಹೋರಾಟದಲ್ಲಿ ಅತ್ಯಂತ ಅಪಾಯಕಾರಿ ಪಾತ್ರ ಕಮ್ಯುನಿಸ್ಟರದ್ದು. ಅವರ ಉದ್ದೇಶ ಸಶಸ್ತ್ರ ಕ್ರಾಂತಿ' ಎಂದು ಕಲ್ಕತ್ತೆಯ ಪೋಲೀಸ್ ಕಮಿಷನರ್ ಗುಪ್ತ ವರದಿ ನೀಡಿದ. 'ಬಂಡಾಯ! ಎಲ್ಲೆಲ್ಲೂ ಬಂಡಾಯ! ನಾನದರ ದಿನಚರಿ ಬರೆಯುತ್ತಿದ್ದೇನೆ' ಎಂದು ಹಾಡಿದರು ಕವಿ ಸುಕಾಂತ್ ಭಟ್ಟಾಚಾರ್ಯ.

ಈ ಅವಧಿಯ ಇನ್ನೊಂದು ಘಟನೆಯೆಂದರೆ ಜಪಾನೀ ಶರಣಾಗತಿಯ ನಂತರ ಅದರ ಆಕ್ರಮಣಕ್ಕೊಳಗಾದ ದೇಶಗಳನ್ನು ಸಂಪೂರ್ಣವಾಗಿ ವಿಮೋಚನೆಗೊಳಿಸುವ ನೆವದಲ್ಲಿ ಇಂಡೋಚೈನಾ ಹಾಗೂ ಇಂಡೋನೇಶ್ಯಾಕ್ಕೆ ಭಾರತೀಯ ಪಡೆಗಳನ್ನು ಕಳಿಸುವ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ನಿರ್ಧಾರಕ್ಕೆ ವ್ಯಕ್ತಗೊಂಡ ಜನತೆಯ ಪ್ರತಿಭಟನೆ. ಈ ಎಲ್ಲಾ ದೇಶಗಳಲ್ಲಿ ಜಪಾನೀ ಆಕ್ರಮಣವಾದಾಗ ಪಲಾಯನ ಮಾಡಿದ ಸಾಮ್ರಾಜ್ಯಶಾಹಿ ಆಳರಸರ ಜಾಗದಲ್ಲಿ ಜನ ಆಗಲೇ ತಮ್ಮ ರಾಷ್ಟ್ರೀಯ ಕ್ರಾಂತಿಕಾರಿ ಸರಕಾರಗಳನ್ನು ರಚಿಸಿಕೊಂಡಿದ್ದರು. ಇಂಡೋಚೈನಾದಲ್ಲಿ ಹೋಚಿಮಿನ್ ಮತ್ತಿತರ ಅವರ ಕಮ್ಯುನಿಸ್ಟ್ ಸಂಗಾತಿಗಳು, ಇಂಡೋನೇಶ್ಯಾದಲ್ಲಿ ಡಾ.ಸುಹಾರ್ತೊ, ಬರ್ಮಾದಲ್ಲಿ ಆಂಗ್‌ಸಾಂಗ್‌ರಂತಹ ಕಮ್ಯುನಿಸ್ಟೇತರ ರಾಷ್ಟ್ರೀಯವಾದಿಗಳು ಕ್ರಾಂತಿಕಾರಿ ಸರಕಾರಗಳ ನೇತೃತ್ವ ವಹಿಸಿದ್ದರು. ಬ್ರಿಟಿಶ್ ಉದ್ದೇಶವಿದ್ದದ್ದು ಭಾರತೀಯ ಪಡೆಗಳನ್ನು ಬಳಸಿ ಈ ಕ್ರಾಂತಿಕಾರಿ ಸರಕಾರಗಳನ್ನು ದಮನ ಮಾಡಿ ಬರ್ಮಾ, ಮಲಯ, ಸಿಂಗಾಪೂರ್‌ಗಳಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಯ ಇಂಡೋಚೈನಾದಲ್ಲಿ ಫ್ರೆಂಚರ ಹಾಗೂ ಇಂಡೋನೇಶ್ಯಾದಲ್ಲಿ ಡಚ್ಚರ ಪ್ರಾಬಲ್ಯವನ್ನು ಮತ್ತೆ ಸ್ಥಾಪಿಸುವುದು.

ಇದರ ವಿರುದ್ಧ ದೇಶಾದ್ಯಂತ ಮತಪ್ರದರ್ಶನಗಳು ನಡೆದವು. ಮುಂಬೈ, ಕಲ್ಕತ್ತಾಗಳಲ್ಲಿ ಬಂದರು ಕೆಲಸಗಾರರು ಇಂಡೋನೇಶ್ಯಾದಲ್ಲಿನ ಸೈನ್ಯ ಪಡೆಗಳಿಗೆ ಮಿಲಿಟರಿ ಹಾಗೂ ಆಹಾರ ಪೂರೈಕೆಯನ್ನು ಹಡಗುಗಳಿಗೆ ಲೋಡ್ ಮಾಡಲು ನಿರಾಕರಿಸಿದರು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮುಖಂಡರು ಬಹಿರಂಗವಾಗಿಯೇ ಸರಕಾರದ ಈ ನಿರ್ಣಯಗಳನ್ನು ವಿರೋಧಿಸಿದರು. ಅಕ್ಟೋಬರ್ 25 ರಂದು 'ದಕ್ಷಿಣ-ಪೂರ್ವ ಏಶ್ಯಾ ದಿನ' ವನ್ನು ಆಚರಿಸಲಾಯಿತು. ಭಾರತದಿಂದ ಬ್ರಿಟಿಶರನ್ನು ಮಾತ್ರವಲ್ಲ, ಇಡೀ ಏಶ್ಯಾದಿಂದ ಎಲ್ಲಾ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಹೊರಹಾಕಲು ಹೋರಾಡುತ್ತಿದ್ದೇವೆ ಎಂದು ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಈ ಮೂಲಕ ಸಾರಿದರು.

(ಮುಂದುವರಿಯುವುದು)



ಹಣಕಾಸು ಖಾತೆ ಮತ್ತು ಯೋಜನಾ ಆಯೋಗಕ್ಕೆ ಆಪ್ತರು

ಕೇಂದ್ರ ಸರ್ಕಾರದ ಹಣಕಾಸು ಇಲಾಖೆ ಕೊನೆಗೂ ಯಶವಂತ ಸಿನ್ಹಾ ಅವರಿಗೆ ಸೇರಿದೆ. ಈತ ಹಿಂದೆ ಚಂದ್ರಶೇಖರ್ ಅವರ ಅಲ್ಪಕಾಲದ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿದ್ದು ನಂತರ ಬಿಜೆಪಿ ಸೇರಿದವರು.

ಮೊದಲು ವಾಜಪೇಯಿಯವರು ಹಣಕಾಸು ಖಾತೆಯನ್ನು ತಾವೇ ಇಟ್ಟುಕೊಳ್ಳುವುದಾಗಿ ಹೇಳಿದರು. ಕೆಲವು ದಿನಗಳ ನಂತರ ತಮ್ಮ ನಂಬುಗಸ್ಥ ಜಸ್ವಂತ್ ಸಿಂಗರಿಗೆ ಈ ಖಾತೆಯನ್ನು ವಹಿಸಿಕೊಡಬೇಕೆಂಬುದು ಅವರ ಹುನ್ನಾರವಾಗಿತ್ತು. ಆದರೆ ಎಲ್.ಕೆ. ಅಡ್ವಾನಿಯವರಿಗೆ ಇದು ಇಷ್ಟವಿರಲಿಲ್ಲವಂತೆ. ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ನಮಗೆ ಒಬ್ಬ ಪೂರ್ಣ ಪ್ರಮಾಣದ ಹಣಕಾಸು ಮಂತ್ರಿಗಳ ಅವಶ್ಯಕತೆ ಇದೆ ಎಂದು ಒತ್ತಡ ಹೇರಿದರಂತೆ. ಈ ಒತ್ತಡಕ್ಕೆ ಮಣಿದು ವಾಜಪೇಯಿ ಯಶವಂತ ಸಿನ್ಹಾ ಅವರಿಗೆ ಹಣಕಾಸು ಖಾತೆ ವಹಿಸಿದರು.

ಮಂತ್ರಿಗಳಿಗೆ ಖಾತೆ ವಹಿಸಿಕೊಡುವ ಹಿಂದೆ ದೊಡ್ಡ ನಾಟಕವೇ ನಡೆಯಿತು. ಯಶವಂತ್ ಸಿನ್ಹಾ ಅವರ ಹೆಸರನ್ನು ಆರ್. ಎಸ್. ಎಸ್ ಅನುಮೋದಿಸಿತು. ಆದ್ದರಿಂದಲೇ ಅವರಿಗೆ ಆ ಖಾತೆ ದೊರೆಯಿತು ಎನ್ನಲಾಗುತ್ತಿದೆ. ಹಾಗೆ ನೋಡಿದರೆ ಒಟ್ಟಾರೆ ಬಿಜೆಪಿ ಸರ್ಕಾರದ ಮಂತ್ರಿಗಳ ಮತ್ತು ಅವರ ಖಾತೆಗಳ ಬಗ್ಗೆ ಆರ್. ಎಸ್. ಎಸ್ ನಿರ್ಧರಿಸಿತು ಎಂದೂ ಹೇಳಲಾಗುತ್ತಿದೆ.

ಆರೆಸ್ಸೆಸ್ ತಾನು ಹಿಂದಿನಿಂದ ಸರ್ಕಾರದ ಮೇಲೆ ಹತೋಟಿ ಇಟ್ಟುಕೊಂಡಿಲ್ಲ ಬದಲಿಗೆ ತನ್ನದು ಮಾರ್ಗದರ್ಶನದ ಕೆಲಸ ಮಾತ್ರ ಎಂದಿದೆ. ಆದರೆ ಬಿಜೆಪಿ ಸರ್ಕಾರದ ಸ್ವರೂಪವನ್ನು ನಿರ್ಧರಿಸಿರುವಲ್ಲಿ ಆರೆಸ್ಸೆಸ್ ಮುಖ್ಯ ಪಾತ್ರ ವಹಿಸಿದೆ ಎಂಬುದು ಸ್ಪಷ್ಟ.

ಹೀಗೆ ಹಣಕಾಸು ಖಾತೆ ಜಸ್ವಂತ್ ಸಿಂಗರಿಗೆ ಹೋಗುವ ಬದಲು ಯಶವಂತ ಸಿನ್ಹಾ ಅವರಿಗೆ ಹೋದದ್ದರಿಂದ ವಾಜಪೇಯಿ ಅವರಿಗೆ ತಮ್ಮ ಆಪ್ತರಿಗೆ ದ್ರೋಹ ಮಾಡಿದ ದುಃಖ ಉಂಟಾಗಿ ಜಸ್ವಂತ್ ಸಿಂಗರನ್ನು ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ ನೇಮಿಸಿಕೊಂಡಿದ್ದಾರೆ.

ಅಧಿಕಾರಕ್ಕೆ ಬಂದ ಮೇಲೆ ಬಿಜೆಪಿಗೆ ವಿದೇಶೀ ವಿಮೆ ಬೇಕು

ನಾಳೆ ಅಧಿಕಾರ ಹೋದರೆ ತಮಗೆ ವಿಮೆ ಇರಬೇಕೆಂಬ ಹಂಬಲವೆ ಇದು? ಈ ಹಿಂದೆ ವಿಮಾ ವಲಯದ ಉದಾರೀಕರಣದ ಅಂದರೆ ವಿದೇಶಿಯ ಕಂಪನಿಗಳಿಗೆ ಭಾರತದ ವಿಮಾ ವಲಯ ತೆರೆಯುವ ಸಿದ್ಧತೆಯ -ಮಸೂದೆ ಲೋಕಸಭೆಯಲ್ಲಿ ಮಂಡಿಸಲ್ಪಟ್ಟಾಗ ಅದನ್ನು ಭಾಜಪ ವಿರೋಧಿಸಿತು. ಅದು ಆಗ. ವಿರೋಧ ಪಕ್ಷದಲ್ಲಿದ್ದಾಗ. ಆಡಳಿತ ಪಕ್ಷ ಏನು ಮಾಡಿದರೂ ವಿರೋಧಿಸುತ್ತೇನೆಂಬ ನಿಲುವಿರಬೇಕು. ವಿಮಾ ವಲಯದ ಉದಾರೀಕರಣದ ಬಗ್ಗೆ ಮೂಲಭೂತ ವಿರೋಧವಿಲ್ಲದಿದ್ದರೂ ಸರ್ಕಾರದ ನಿಲುವನ್ನು ವಿರೋಧಿಸುವುದು ಅವರ ಪದ್ಧತಿ.

ನಂತರದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿಯೂ ಸಹ ಬಿಜೆಪಿ ವಿಮಾ ವಲಯದ ಉದಾರೀಕರಣದ ವಿರುದ್ಧವೇ ಇದ್ದಂತೆ ತೋರಿಸಿಕೊಂಡಿತು.

ಈಗ ಅಧಿಕಾರಕ್ಕೆ ಬರುತ್ತಲೇ ಬಿಜೆಪಿಯ ರಾಗ ಬದಲಾಗಿದೆ. ಈಗ ವಿದೇಶೀಯರಿಗೆ ವಿಮಾ ವಲಯವನ್ನು ತೆರೆಯಲು ಅದು ಸಿದ್ಧವಾಗಿದೆ. ನಾವು ನಮ್ಮ ಪ್ರಣಾಳಿಕೆ ಸಿದ್ಧಪಡಿಸುವಾಗ ಕೆಲವು ವಿದೇಶೀ ಕಂಪನಿಗಳು ಒತ್ತಡ ಹೇರುತ್ತಿದ್ದವು. ಆದ್ದರಿಂದಲೇ ಈ ಕಂಪನಿಗಳಿಗೆ ನಾವು ಪೂರ್ತಿ ವಿರೋಧ ವ್ಯಕ್ತಪಡಿಸಿದ್ದು. ಆದರೆ ವಿದೇಶಿಯರು ಅಲ್ಪ ಪ್ರಮಾಣದ ಮಾಲಿಕತ್ವ ಹೊಂದಿದರೆ ತಮ್ಮ ಅಭ್ಯಂತರವೇನಿಲ್ಲ ಎಂದಿದ್ದಾರೆ ಬಿಜೆಪಿಯ ಸಿದ್ಧಾಂತಿಗಳು.

ಹೀಗೆ ವಿದೇಶೀ ವಿಮಾ ಕಂಪನಿಗಳನ್ನು ದೇಶದೊಳಕ್ಕೆ ಬಿಡುವುದಾದರೆ ಯಾವ ರೀತಿಯಲ್ಲಿ ಬಿಡಬೇಕು ಎಂದಿತ್ಯಾದಿ ವಿಚಾರಗಳ ಚರ್ಚೆ ಬಿಜೆಪಿ ವರಿಷ್ಠರು ಮತ್ತು ಭಾರತದ ಉದ್ಯಮ ಪತಿಗಳ ನಡುವೆ ಆಗಲೇ ನಡೆಯುತ್ತಿದೆಯಂತೆ.

ಅಲ್ಲದೆ ಹಿಂದಿನ ಸಂಸತ್ತಿನ ಸ್ಥಾಯಿ ಸಮಿತಿಯೊಂದು ನೀಡಿದ ವರದಿಯನ್ನು ಪರಿಶೀಲಿಸಲಾಗುತ್ತಿದೆಯಂತೆ. ಹೇಗೇ ಇರಲಿ ಅಧಿಕಾರಕ್ಕೆ ಬರುವ ಮೊದಲು ವಿರೋಧಿಸಿದ ಈ ವಿದೇಶೀ ವಿಮಾ ಕಂಪನಿಗಳ ಆಗಮನವನ್ನು ಈಗ ಅಧಿಕಾರಕ್ಕೆ ಬಂದ ಮೇಲೆ ಆಗಗೊಡುವ ಹುನ್ನಾರ ಬಿಜೆಪಿಯದು. ಅಧಿಕಾರದಲ್ಲಿರದಿದ್ದಾಗ ಒಂದು ನೀತಿಯಾದರೆ ಅಧಿಕಾರಕ್ಕೆ ಬಂದ ಮೇಲೆ ಇನ್ನೊಂದು.

ಇವುಗಳಲ್ಲಿ ಯಾವುದು ಮುಖವಾಡ? ಯಾವುದು ನಿಜಮುಖ?.

ಬಿಜೆಪಿ ಸರ್ಕಾರಕ್ಕೆ ಉದ್ಯಮ ಪತಿಗಳ ಸ್ವಾಗತ

ಬಿಜೆಪಿ ಯಾವ ವರ್ಗಕ್ಕೆ ಅನುಕೂಲ ಮಾಡಿಕೊಡುವ ಪಕ್ಷ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಹೋದರೆ ಬಿಜೆಪಿಯ ನಿಜವಾದ ಗುಣ ಸ್ಪಷ್ಟವಾಗಿ ಗೊತ್ತಾಗುತ್ತದೆ. ಬಿಜೆಪಿ ನೇತೃತ್ವದ ಸರ್ಕಾರ ಆಢಳಿತಕ್ಕೆ ಬರುತ್ತಿರುವುದನ್ನು ಉದ್ಯಮಪತಿಗಳು ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರ ಆಢಳಿತಕ್ಕೆ ಬರುವುದರಿಂದ ದೇಶದಲ್ಲಿ ಸ್ಥಿರತೆ ಉಂಟಾಗುತ್ತದೆ. ಸ್ಥಿರತೆ ಇರುವುದರಿಂದ ಆರ್ಥಿಕ ಬೆಳವಣಿಗೆ ಉಂಟಾಗುತ್ತದೆ ಎಂಬ ಆಶಯವನ್ನು ಈ ಉದ್ಯಮಪತಿಗಳು ವ್ಯಕ್ತ ಪಡಿಸಿದ್ದಾರೆ.

ಬಿಜೆಪಿಯ ಸ್ವದೇಶಿ ನೀತಿ ಭಾರತೀಯ ಉದ್ದಿಮೆಗಳಿಗೆ ರಕ್ಷಣೆ ನೀಡುವುದರಿಂದ ಅವು ವಿದೇಶೀ ಕಂಪನಿಗಳಿಂದ ಸ್ಪರ್ಧೆಯನ್ನು ಎದುರಿಸುವುದು ಸಾಧ್ಯವಾಗುತ್ತದೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಹೊಸ ಸರ್ಕಾರಕ್ಕೆ ಎಲ್ಲ ತರಹದ ಸಹಕಾರವನ್ನು ನೀಡುವ ಬಗ್ಗೆಯೂ ಈ ಉದ್ಯಮ ಪತಿಗಳು ಮಾತನಾಡಿದ್ದಾರೆ. ಈ ಎಲ್ಲ ಮಾತುಗಳ ಜೊತೆಗೇ ಹೊಸ ಸರ್ಕಾರ ಆರ್ಥಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಬೇಡಿಕೆ ಹೆಚ್ಚಲು ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಪಡಿಸಿದ್ದಾರೆ. ಜೊತೆಗೆ ಅಸಮಾನ ಸ್ಪರ್ಧೆಯನ್ನು ಹೋಗಲಾಡಿಸಿ ಉದ್ದಿಮೆಗಳ ಆರೋಗ್ಯ ಪೂರ್ಣ ಬೆಳವಣಿಗೆಗೆ ಅನುಕೂಲ ಮಾಡಿಕೊಡಬೇಕೆಂದು ಅವರು ಒತ್ತಾಯ ಮಾಡಿದ್ದಾರೆ.

ಇವೆಲ್ಲವೂ ಉದ್ಯಮಪತಿಗಳಿಗೆ ಅಂದರೆ ಬಂಡವಾಳಿಗರಿಗೆ ಅನುಕೂಲ ಮಾಡಿ ಕೊಡುವ ಮಾತುಗಳೇ ಸರಿ. ಬಂಡವಾಳಿಗರು ತಮಗೆ ಲಾಭವಾಗುವುದನ್ನೇ ಕೇಳುತ್ತಾರೆ. ಅವರಿಗೆ ಲಾಭವಾಗದ್ದನ್ನು ಅವರೇಕೆ ಕೇಳಿಯಾರು. ಆದರೆ ಬಿಜೆಪಿ ಎಂಬ ಪಕ್ಷ ಈ ಬಂಡವಾಳಿಗರ ಹಿತಾಸಕ್ತಿಗಳನ್ನು ಮಾತ್ರ ತಾನು ಕಾಯುತ್ತೇನೆ ಎಂಬಂತೆ ನಡೆದುಕೊಳ್ಳುತ್ತಿಲ್ಲವೆ? ಉದಾರೀ ಕರಣಕ್ಕೆ ತನ್ನ ವಿರೋಧವಿದೆ ಎಂದೆಲ್ಲ ಹೇಳುತ್ತಿದ್ದ ಬಿಜೆಪಿ ಈಗ ತನ್ನ ನಿಜಗುಣವನ್ನು ಹೊರಗೆಡವುತ್ತಿದೆಯೇ

ರಾಷ್ಟ್ರೀಯ ಅಜೆಂಡಾ ಎಂದರೆ ಉದಾರೀಕರಣದ ಅಜೆಂಡಾ

ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಸೇರಿ ರಾಷ್ಟ್ರೀಯ ಅಜೆಂಡಾ ಎಂಬ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಿವೆ. ಬರೀ ಟೊಳ್ಳಾಗಿರುವ ಈ ರಾಷ್ಟ್ರೀಯ ಅಜೆಂಡಾದಲ್ಲಿ ಏನೇನೂ ಇಲ್ಲವೆಂದರೂ ತಪ್ಪಾಗಲಾರದು. ಬಿಜೆಪಿಯ ಮುಖ್ಯ ವಿಷಯಗಳನ್ನೆಲ್ಲ ಬಿಟ್ಟು ಈ ರಾಷ್ಟ್ರೀಯ ಅಜೆಂಡಾ ಇದೆ.

ಈ ಅಜೆಂಡಾ ಅಂತರ್ರಚನಾ ಸೌಕರ್ಯಗಳ ಅಭಿವೃದ್ಧಿ (ಅದರಲ್ಲೂ ವಿದ್ಯುತ್ ಮತ್ತು ಇಂಧನ)ಗೆ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ಅದು ಹೇಳಿಕೊಂಡಿದೆ. ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲಾಗುವುದು ಎಂದು ಈ ಅಜೆಂಡಾ ಹೇಳಿದರೂ ಅದಕ್ಕೆ ಹಣ ಎಲ್ಲಿಂದ ಬರುತ್ತದೆ ಎಂಬುದನ್ನು ಅದು ಹೇಳುವುದಿಲ್ಲ.


ಮುಂದಿನ ಒಂದು ದಶಕದಲ್ಲಿ ದೇಶದ ಕೃಷಿ ಉತ್ಪಾದನೆ ದ್ವಿಗುಣವಾಗುವಂತೆ ಮಾಡುವುದಾಗಿ ಅದು ಹೇಳಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಸತತವಾಗಿ ಮಳೆ ಚೆನ್ನಾಗಿ ಆದರೂ ಕೃಷಿಯ ಬೆಳವಣಿಗೆ ಕೆಳ ಮಟ್ಟದಲ್ಲೇ ಇದೆ. ಕೃಷಿಯ ಎಲ್ಲಾ ಸಮಸ್ಯೆಗಳು ಪರಿಹಾರ ಕಾಣದೆ ಬೆಳೆಯುತ್ತಲೇ ಹೋಗಿವೆ. ಉದಾರೀಕರಣ ವೆಂಬುದು ಕೃಷಿಯ ಬೆನ್ನೆಲುಬನ್ನೇ ಮುರಿದು ಹಾಕುವ ಪ್ರಯತ್ನ ಮಾಡಿದೆ. ಹೀಗಿರುವಾಗ ಉದಾರೀ ಕರಣದ ಕ್ರಮಗಳನ್ನು ತಿರುವು ಮುರುವು ಮಾಡಿದರೆ ಕೃಷಿಯಲ್ಲಿ ಬೆಳವಣಿಗೆ ಸಾಧ್ಯವಾದೀತು. ಇದಕ್ಕೆ ಬದಲು 'ಅಜೆಂಡಾ' ಕೃಷಿವಲಯಕ್ಕೆ ಯೋಜನಾ ವೆಚ್ಚವನ್ನು ಶೇ 60ಕ್ಕೆ ಹೆಚ್ಚಿಸಿ ಕೃಷಿ ವಲಯದಲ್ಲಿ ಬೆಳವಣಿಗೆ ಉಂಟು ಮಾಡುವ ಮಾತನಾಡಿದೆ.

ಇದಲ್ಲದೆ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವುದು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುಚ್ಚುವುದು ಇತ್ಯಾದಿಗಳನ್ನು ಸಮಯದ ಗುರಿ ಹಾಕಿಕೊಂಡು ಮಾಡುವುದಾಗಿ ಅದು ಹೇಳಿದೆ.

ಇವುಗಳನ್ನು ಬಿಟ್ಟರೆ ಬೇರೆ ಏನನ್ನೂ ಹೇಳದ ಈ ಅಜೆಂಡಾ ದೇಶವನ್ನು ಆರ್ಥಿಕವಾಗಿ ಇನ್ನೂ ಹಿಂದಕ್ಕೊಯ್ಯುತ್ತದೆ ಎಂಬ ಬಗ್ಗೆ ಸಂದೇಹ ವಿರಲು ಸಾಧ್ಯವೆ?

ಅಗಲಿದ ನೆಚ್ಚಿನ ಕ್ರಾಂತಿಕಾರಿಗೆ ಶ್ರದ್ಧಾಂಜಲಿ

ಮಾರ್ಚ್ 19 ರಂದು ನಿಧನರಾದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಅಂತರ್ರಾಷ್ಟ್ರೀಯ ಖ್ಯಾತಿಯ ಮಾರ್ಕ್ಸ್‌ವಾದಿ ಚಿಂತಕ ಕಾಂ. ಇಎಂಎಸ್ ನಂಬೂದರಿಪಾಡ್‌ರವರಿಗೆ ರಾಜ್ಯಾದ್ಯಂತ ದುಡಿಯುವ ಜನರು, ಪ್ರಜಾಪ್ರಭುತ್ವ ವಾದಿ ಜನವಿಭಾಗಗಳು ಶ್ರದ್ಧಾಂಜಲಿ ಅರ್ಪಿಸುತ್ತಿದ್ದಾರೆ. 'ಐಕ್ಯರಂಗ'ಕ್ಕೆ ಬಂದಿರುವ ವರದಿಗಳನ್ನು ಈ ಮುಂದೆ ಕೊಡಲಾಗಿದೆ.



ಧಾರವಾಡ

ಸಿಪಿಐ(ಎಂ)ನ ಧಾರವಾಡ ಜಿಲ್ಲಾ ಕಾರ್ಯದರ್ಶಿಗಳಾದ ನಿತ್ಯಾನಂದ ಸ್ವಾಮಿ, ಜಿಲ್ಲಾ ಸಮಿತಿಯ ಸದಸ್ಯರಾದ ಸಿ.ಆರ್.ಭಟ್, ಡಿ.ಜೆ.ಗೊಂದಕರ್, ಆರ್.ಎಚ್.ಆಯೀ, ವಿಮಾ ನೌಕರರ ಸಂಘದ ಉಪಾಧ್ಯಕ್ಷರಾದ ಆರ್.ಬಿ.ಬಂಡಿವಾಡ, ಟೆಲಿಕಾಂ ನೌಕರರ ಸಂಘದ ಅಧ್ಯಕ್ಷರಾದ ಎಂ.ಸದಾನಂದ, ಬಂಡಾಯ ಸಾಹಿತಿ ಜಗದೀಶ್ ಮಂಗಳೂರು ಮಠ, ಸಮುದಾಯದ ಕಾರ್ಯದರ್ಶಿ ಬಿ.ಐ. ಈಳಿಗೇರ ಇಎಂಎಸ್ ಭಾರತದ ಸ್ವಾತಂತ್ರ್ಯದ ಹೋರಾಟಕ್ಕೆ ಮತ್ತು ಕಮ್ಯುನಿಸ್ಟ್ ಆಂದೋಲನಕ್ಕೆ ಕಳೆದ ಏಳೆಂಟು ದಶಕಗಳ ಕಾಲ ನೀಡಿದ ಅಪೂರ್ವ ಕೊಡುಗೆಯನ್ನು ನೆನಪಿಸಿಕೊಟ್ಟರು.

ಇ.ಎಂ.ಎಸ್. ಸಮಾಜ ಸುಧಾರಕರಾಗಿ, ಸಾಹಿತಿಗಳಾಗಿ, ಪತ್ರಿಕಾಕರ್ತರಾಗಿ, ಇತಿಹಾಸಕಾರರಾಗಿ, ರಾಜಕೀಯ ಧುರೀಣರಾಗಿ ಉದಾತ್ತ ಚಿಂತನೆಯ ಹಾಗೂ ಸರಳ ಜೀವನದ ಆದರ್ಶ ಕಮ್ಯುನಿಸ್ಟರಾಗಿ ಭಾರತದ ಯುಗಪುರುಷರಾಗಿ, ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಇತಿಹಾಸದ ನಿರ್ಣಾಯಕ ಕಾಲಘಟ್ಟಗಳಲ್ಲಿ ನೀಡಿದ ಮಾರ್ಗದರ್ಶನಗಳು, ಪ್ರಕಟಿಸಿದ ಅಪಾರ ಸಾಹಿತ್ಯ ಸಾಗರ, ಭಾರತವನ್ನು ಒಂದು ಶೋಷಣಾರಹಿತ ಪ್ರಜಾಸತ್ತಾತ್ಮಕ ಸಮಾಜವಾದಿ ಸಮಾಜ ನಿರ್ಮಾಣ ಮಾಡುವತ್ತ ಶ್ರಮಿಸಲು ಮುಂದಿನ ಪೀಳಿಗೆಯ ಜನರಿಗೆ ಸ್ಫೂರ್ತಿ ಹಾಗೂ ದಾರಿದೀಪವಾಗಲಿದೆ ಎಂದು ಸಭೆಯಲ್ಲಿ ತಿಳಿಸಿ ಹೇಳಲಾಯಿತು. ಕೇರಳದಲ್ಲಿ ಸಿಪಿಐ(ಎಂ) ನ ಮೂಲಕ ಇಎಂಎಸ್ ಅವರ ಸಾಧನೆಗಳಲ್ಲಿ ಕ್ರಾಂತಿಕಾರಕ ಭೂಸುಧಾರಣೆ, ಪಂಚಾಯತ್ ರಾಜ್ಯ ಮತ್ತು ಸಂಪೂರ್ಣ ಸಾಕ್ಷರತೆ ಗಮನಾರ್ಹವಾದವುಗಳಾಗಿದ್ದು, ದೇಶಕ್ಕೆ ಮಾದರಿಯಾಗಿವೆ ಎಂದು ಸಭೆಯಲ್ಲಿ ನೆನಪಿಸಲಾಯಿತು.

ಕಾರವಾರ


ಸಿ.ಪಿ.ಐ.(ಎಂ) ಕಾರವಾರ ಶಾಖೆಯು ತುರ್ತು ಸಭೆ ನಡೆಸಿ 2 ನಿಮಿಷ ಮೌನ ಆಚರಿಸಿ ಸಂತಾಪ ಸೂಚಿಸಿತು. ಕಾರ್ಯ ದರ್ಶಿ ಬಿ.ಎಲ್.ನಾಯ್ಕ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸುತ್ತಾ ಸ್ವಾತಂತ್ರ ಹೋರಾಟಗಾರ ಕೇರಳದ ಇತಿಹಾಸದ ಅವಿಭಾಜ್ಯ ಅಂಗವಾದ ಇ.ಎಂ.ಎಸ್ ರವರು ಸಾಮಾಜಿಕ ನ್ಯಾಯ, ಜಾತ್ಯಾತೀತತೆ, ಪ್ರಜಾಪ್ರಭುತ್ವ ಮತ್ತು ಒಕ್ಕೂಟವಾದದ ಗಟ್ಟಿ ಸ್ತಂಭದಂತೆ ಇದ್ದಂತವರು, ಶ್ರಮಿಕ ವರ್ಗದ ಅಭ್ಯುದಯಕ್ಕಾಗಿ ಹೋರಾಡಿದ ಮಹಾನ್ ಹೋರಾಟಗಾರರಾದ ಇ.ಎಂ.ಎಸ್ ನಿಧನದಿಂದ ದೇಶಕ್ಕೆ ಮತ್ತು ಪಕ್ಷಕ್ಕೆ ತುಂಬಾ ನಷ್ಟವಾಗಿದೆ ಎಂದರು.

ಪಕ್ಷದ ರಾಜ್ಯ ಸಮಿತಿ ಸದಸ್ಯ ಹಾಗೂ ಯುವಜನ ಫೆಡರೇಶನ್ ರಾಜ್ಯ ಸಮಿತಿ ಅಧ್ಯಕ್ಷರಾದ ಶಾಂತಾರಾಮ ನಾಯಕ್ ಮಾತನಾಡಿ ತಮ್ಮ ಪ್ರಗತಿಪರ ಚಿಂತನೆಯಿಂದ ಇಡೀ ಯುವಜನ ಸಮುದಾಯಕ್ಕೆ ಮಾರ್ಗದರ್ಶಕರಾದ ಇ.ಎಂ.ಎಸ್. ನಿಧನ ದೇಶದ ಪ್ರಜಾಸತ್ತಾತ್ಮಕ ಚಳುವಳಿಗೆ ಹಾಗೂ ಕ್ರಾಂತಿಕಾರಿ ಚಳುವಳಿಗೆ ಆದ ದೊಡ್ಡ ನಷ್ಟ ಎಂದು ಶೋಕ ವ್ಯಕ್ತ ಪಡಿಸಿದರು.

ಎಲ್.ಐ.ಸಿ. ನೌಕರರ ಸಂಘದ ಕಾರವಾರ ಶಾಖೆಯ ಅಧ್ಯಕ್ಷರಾದ ಪಿ.ಆರ್.ನಾಯ್ಕ, ಎಸ್.ಎಫ್.ಐ ಜಿಲ್ಲಾ ಅಧ್ಯಕ್ಷೆ ಯಮುನಾ ಗಾಂವ್ಕರ್ ಮಾತನಾಡಿದರು.

ದಾಂಡೇಲಿ

ನಗರದಲ್ಲಿ ಕಾಂ|| ಇ.ಎಂ.ಎಸ್. ರವರ ಭಾವ ಚಿತ್ರವನ್ನು ಹಿಡಿದು ಮೌನ ಮೆರವಣಿಗೆ ನಡೆಸಿ




ಸಾಯಂಕಾಲ 4 ಘಂಟೆಗೆ ಜಿಲ್ಲಾ ಕಛೇರಿ ಎದುರಿನಲ್ಲಿ 1 ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಾ|| ಟಿ.ಎಸ್. ನಾಯ್ಕ ಪುಲಕರ ಭೀಮರಾವ್ ಎಂ.ಬಿ.ನಾಯಕ ಮಾಧವ- ಜಿಲ್ಲಾಸಮಿತಿ ಸದಸ್ಯರು ನೇತೃತ್ವವಹಿಸಿದ್ದರು. ನಗರ ಸಭೆ ಅಧ್ಯಕ್ಷತೆ ಸಾವರ ಸೌದಾಗರ ಜನತಾದಳ ಮುಖಂಡ ಬಿ.ಎಸ್ ಅಕ್ಕಿ ಮುಂತಾದವರು ಹಾಜರಿದ್ದರು. ನೂರಾರು ಸಂಖ್ಯೆಯಲ್ಲಿ ಕಾರ್ಮಿಕರು, ಸಾರ್ವಜನಿಕರು ಭಾಗವಹಿಸಿದ್ದರು.

ಹೊನ್ನಾವರ

ಭಾವಪೂರ್ಣ ಶ್ರದ್ದಾಂಜಲಿ ಸಭೆಯನ್ನು ನಡೆಸಲಾಯಿತು. ಜಿಲ್ಲಾ ಸಮಿತಿ ಸದಸ್ಯರಾದ ತಿಲಕಗೌಡ ಸುಭಾಶಕೊಪ್ಪೀಕರ ಮುಂತಾದವರು ಭಾಗವಹಿಸಿದ್ದರು.

ಅಂಕೋಲಾ

ವಿನಾಯಕ್ ಟೈಲ್ಸ್‌ನಲ್ಲಿ 4 ಘಂಟೆಗೆ ಶ್ರದ್ಧಾಂಜಲಿ ಸಭೆ ನಡೆಸಲಾಯಿತು. ಪ್ರಭಾಕರ ನಾಯ್ಕ, ದಾಮೋದರ ನಾಯ್ಕ ಮೋಹನ ನಾಯ್ಕ ಮುಂತಾದವರು ಪಾಲ್ಗೊಂಡಿದ್ದರು.



ಶಿರಸಿ

ಶಿರಸಿ ಪಕ್ಷದ ಕಛೇರಿಯಲ್ಲಿ ಶ್ರದ್ದಾಂಜಲಿ ಸಭೆ ನಡೆಯಿತು. ಶ್ರದ್ಧಾಂಜಲಿ ನಿರ್ಣಯವನ್ನು ಕಾಂ|| ಸಿ.ಆರ್. ಶಾನಭಾಗ್ ಮಂಡಿಸಿದರು. ಶಾಖಾ ಕಾರ್ಯದರ್ಶಿ ಪಿ.ಜಿ. ಮಶಾಲ್ದಿ 'ಚಿಂತನ'ದ ವಿಠ್ಠಲ ಭಂಡಾರಿ, ಕಿರಣ ಭಟ್, ಸಿ.ಎನ್. ಹೆಗಡೆ ವಿಮಾ ನೌಕರರ ಸಂಘದ ಮುಖಂಡರು ಭಾಗವಹಿಸಿದ್ದರು.

ಬಂಗಾರ ಪೇಟೆ

ದಿನಾಂಕ 20ರಂದು ಆಂಡರ್‌ಸನ್ ಪೇಟೆಯ ಪಕ್ಷದ ಬಂಗಾರ ಪೇಟೆ ತಾಲೂಕು ಸಮಿತಿ ಕಛೇರಿಯ ಆವರಣದಲ್ಲಿ ನೂರಾರು ಮಂದಿ ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಶ್ರದ್ಧಾಂಜಲಿ ಅರ್ಪಿಸಲು ಸೇರಿದ್ದರು. ಕಾಂ|| ಇ.ಎಂ.ಎಸ್ ರವರ ಭಾವಚಿತ್ರವನ್ನು ಕೆಂಪು ಸಮವಸ್ತ್ರಧಾರಿ ಸಂಗಾತಿಯೊಬ್ಬರು ಹಿಡಿದುಕೊಂಡು ಅವರ ಹಿಂದೆ ಪಕ್ಷದ ಬಾವುಟವನ್ನು ಅರ್ಧಕ್ಕೆ ಹಾರಿಸಿ ಹಿಡಿದು ಕೊಂಡ ಸಂಗಾತಿ ಹಿಂದೆ ನೂರಾರು ಮಂದಿ ಮೌನ ಮೆರವಣಿಗೆ ಹೊರಟು ಆ್ಯಂಡರ್‌ಸನ್ ಪೇಟೆ ಮೈಸೂರು ಮೈನ್ಸ್ ಪ್ರದೇಶದಲ್ಲಿ ಸಂಚರಿಸಿ ಶ್ರದ್ಧಾಂಜಲಿ ಸಭೆ ನಡೆಯುವ ಬಸ್ ನಿಲ್ದಾಣದ ಬಳಿಯ ವೇದಿಕೆಯ ಹತ್ತಿರ ಬಂದು ಸೇರಿದರು.

ಪಕ್ಷದ ತಾಲೂಕು ಸಮಿತಿ ಕಾರ್ಯದರ್ಶಿ ಮಾಜೀ ಶಾಸಕ ಕಾಂ|| ಟಿ. ಎಸ್. ಮಣಿ ಯವರು ಅಧ್ಯಕ್ಷತೆ ವಹಿಸಿದ್ದರು. ಈ ಸಭೆಯನ್ನು ಆ್ಯಂಡರ್‌ಸನ್ ಪೇಟೆಯ ಶಾಖಾ ಕಾರ್ಯ ದರ್ಶಿ ಕಾಂ|| ದಶರಥ್ ರವರು ಸ್ವಾಗತಿಸಿದರು. ದೇಶದ ರಾಜಕೀಯ ಪರಿಸ್ಥಿತಿ ಗೊಂದಲಗೊಂಡಿರುವ ಈ ಕಾಲಘಟ್ಟದಲ್ಲಿ ಕಾಂ|| ಇ.ಎಂ.ಎಸ್ ರವರು ನಮ್ಮನ್ನು ಅಗಲಿರುವುದು ತುಂಬಲಾರದ ನಷ್ಟವೆಂದು ಕಾಂ|| ಮಣಿ ಹೇಳಿದರು.

ಕಾಂ||ಇ.ಎಂ.ಎಸ್ ದೇಶದ ಎಡಪಂಥೀಯ ಚಳುವಳಿಗೆ ನೀಡಿದ ಕೊಡುಗೆಯ ಬಗ್ಗೆ ಬಿ.ಇ.ಎಂ.ಎಸ್ ಕಾರ್ಮಿಕ ಮುಖಂಡ ಕಾಂ|| ವೀರ ಕರುಪ್ಪಯ್ಯನವರು ಮಾತನಾಡಿದರು. ನಂತರ ಡಿ.ವೈ.ಎಫ್.ಐ.ನ ತಾಲೂಕು ಸಮಿತಿ ಕಾರ್ಯದರ್ಶಿ ಕಾಂ|| ಎ.ಆರ್. ಬಾಬು ರವರು ಇ.ಎಂ.ಎಸ್ ಹೇಗೆ ತಮ್ಮ ಜೀವನವನ್ನೇ ಜನತೆಗಾಗಿ, ಪಕ್ಷಕ್ಕಾಗಿ ಮುಡುಪಾಗಿಟ್ಟರೆಂಬುದನ್ನು ಸ್ಮರಿಸಿದರು. ನಂತರ ಪಕ್ಷದ ಕೋಲಾರ ಜಿಲ್ಲಾ ಸಮಿತಿ ಸದಸ್ಯರಾದ ಕಾಂ|| ಪಿ.ಶ್ರೀನಿವಾಸ್‌ರವರು ಮಾತನಾಡಿ ಕೇರಳದ ಶಿಕ್ಷಣ ರಂಗದ ಸಾಧನೆ, ಪ್ರಗತಿಪರ ಭೂಸುಧಾರಣೆ ಮುಂತಾದುವುದರಲ್ಲಿ ಕಾಂ|| ಇ.ಎಂ.ಎಸ್ ಕೊಡುಗೆ ಇಡೀ ದೇಶಕ್ಕೆ ಮಾದರಿಯಾಗಿರುವಂತಾದ್ದೆಂಬುದನ್ನು ತಿಳಿಸಿ ಅವರು ಸ್ವಾತಂತ್ರ್ಯ ಹೋರಾಟ ಮೊದಲ್ಗೊಂಡು ನಡೆಸಿದ ಹೋರಾಟಗಳ ಪರಂಪರೆಯೇ ಇಂದು ದೇಶದ ಎಡಪಂಥೀಯ ಚಳುವಳಿಗೆ ದಿಕ್ಸೂಚಿಯಾಗಿದೆ ಎಂದರು.

ನಂತರ ಸ್ಥಳೀಯ ಜನತಾದಳದ ಹಿರಿಯ ಮುಖಂಡ ಶ್ರೀಯುತ ಎ.ಪಿ.ಸ್ವಾಮಿಯವರು ಮಾತಾಡಿ ತಮಿಳು ನಾಡಿನಲ್ಲಿ ಕಾಮರಾಜರು ಹೇಗೋ ಹಾಗೆಯೇ ಕೇರಳದಲ್ಲಿ ಇ.ಎಂ.ಎಸ್ ತ್ಯಾಗದ ಪ್ರತೀಕವೆಂದರು. ಅತೀ ಉನ್ನತಕುಲ ಮತ್ತು ಆಗರ್ಭ ಶ್ರೀಮಂತರ ಮನೆತನದಲ್ಲಿ ಹುಟ್ಟಿದ ಇ.ಎಂ.ಎಸ್ ದೇಶದ ಬಡಜನತೆಗಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಿ ಸಾಮಾನ್ಯನ ಬದುಕನ್ನು ಕೊನೆಯವರೆಗೂ ಬದುಕಿದ ಮಹಾ ಮೇಧಾವಿ ಎಂದು ಬಣ್ಣಿಸಿದರು.

ಸ್ಥಳೀಯ ಡಿ.ಎಂ.ಕೆ ಪಕ್ಷದ ಮುಖಂಡ ಶ್ರೀಯುತ ಕೆ. ಕರುಣಾ ನಿಧಿಯವರು ಮಾತಾಡಿ ಸಾಮಾಜಿಕ ಅನ್ಯಾಯಗಳಾದ ಜಾತಿ ಪದ್ಧತಿ ಅಸ್ಪೃಶ್ಯತೆ, ವಿಧವಾ ವಿವಾಹಗಳ ಬಗ್ಗೆ ಹೋರಾಡಿದ ಮಹಾಚೇತನ ಇ.ಎಂ.ಎಸ್ ಎಂದರು.

ಸ್ಥಳೀಯ ಪುರಸಭಾ ಅಧ್ಯಕ್ಷ, ಮಾಜೀ ಶಾಸಕ ಅಣ್ಣಾ.ಡಿ.ಎಂ.ಕೆ ಪಕ್ಷದ ಎಂ. ಭಕ್ತವತ್ಸಲಂ ರವರು ಇ.ಎಂ.ಎಸ್. ರವರಂತಹ ತ್ಯಾಗಮಯಿಗಳು ವಿರಳ, ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾದರೂ ಇತರ ಎಲ್ಲಾ ವಿರೋಧಪಕ್ಷಗಳ ಜನರೂ ಗೌರವಿಸುವಂತಹ, ಯಾವುದೇ ಒಂದು ಕಪ್ಪು ಚುಕ್ಕೆಯನ್ನೂ ಎತ್ತಿತೋರಿಸಲು ಸಾಧ್ಯವಾಗದಂತಹ ವ್ಯಕ್ತಿತ್ವ ಎಂದರು.

ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಹಾಗೂ ಬಿ.ಇ.ಎಂ.ಎಲ್ ಕಾರ್ಮಿಕ ಮುಖಂಡ ಕಾಂ|| ಡಿ. ಅರ್ಜುನನ್‌ರವರು ಮಾತಾಡಿ ಇ.ಎಂ.ಎಸ್ ಒಂದು ಬತ್ತದ ಚೇತನ, ಇವರು ಇಂದು ನಮ್ಮನ್ನು ಅಗಲಿದರೂ ಅವರು ಬರೆದಿರುವ ನೂರಾರು ಪುಸ್ತಕಗಳಲ್ಲಿ ಇಂದಿಗೂ ಎಂದೆಂದಿಗೂ ನಮ್ಮೊಡನೆ ಇರುತ್ತಾರೆ ಎಂದರು. ಭಾರತದ ವಿಭಜನೆಯಲ್ಲಿ ಬಿತ್ತಲ್ಪಟ್ಟ ಕೋಮುವಾದದ ಅಪಾಯದ ಬಗ್ಗೆ ಗಾಂಧೀಜಿಯವರು ಆತಂಕ ಗೊಂಡಂತೆ ಕಾಂ|| ಇ.ಎಂ.ಎಸ್ ರವರೂ ಕೂಡಾ ಈ ಅಪಾಯದ ಬಗ್ಗೆ ಜನತೆಗೆ ಎಚ್ಚರಿಕೆ ನೀಡಿದ್ದರು. ಈ ಶಕ್ತಿಗಳು ಇಂದು ಅಪಾಯಕಾರಿ ರೀತಿಯಲ್ಲಿ ತಲೆ ಎತ್ತಿವೆ. ರಾಜಕೀಯ ಕ್ಷೇತ್ರ ಮಾತ್ರವಲ್ಲದೆ ಸೈದ್ಧಾಂತಿಕ, ಕಲೆ ಸಾಹಿತ್ಯ ಕ್ಷೇತ್ರಗಳಲ್ಲೂ ಒಂದು ಪರ್ಯಾಯವನ್ನು ತೋರಿಸಿ ಕೊಟ್ಟಂತಹ ಮುತ್ಸದ್ದಿ ಈ ಇ.ಎಂ.ಎಸ್ ಎಂದರು.

ಸಿ.ಐ.ಟಿಯು ಸಂಘದ ಕಾರ್ಯದರ್ಶಿ ಕಾಂ|| ಎಸ್ ಸವರಿದಾಸ್ ರವರು ಇಎಂಎಸ್ ಕರ್ನಾಟಕದಲ್ಲಿ ಪಕ್ಷವನ್ನು ಎಡ ಚಳುವಳಿಯನ್ನು ಕಟ್ಟಲು ನೀಡಿದ ಮಾರ್ಗದರ್ಶನದ ಬಗ್ಗೆ ಮಾತಾಡಿ ಸಾಹಿತ್ಯ ಕ್ಷೇತ್ರದಲ್ಲಿ ಅವರು ನೀಡಿದ ಕೊಡುಗೆಯನ್ನು ಸ್ಮರಿಸಿದರು. ಬಿಜಿಎಂಎಲ್ ಕಾರ್ಮಿಕ ಸಂಘದ ಮುಖಂಡ ಹಾಗೂ ಪಕ್ಷದ ತಾಲೂಕು ಸದಸ್ಯ ಕಾಂ|| ರಾಮಸ್ವಾಮಿಯವರು ಇ.ಎಂ.ಎಸ್ ಕೊಡುಗೆಯನ್ನು ಸ್ಮರಿಸಿದರು.

ಕೊನೆಯಲ್ಲಿ ಸ್ಥಳೀಯ ವಕೀಲರಾದ ಶ್ರೀ ಎಸ್. ಬಾಲನ್‌ರವರು ಮಾತಾಡಿ ಅವರೊಂದು ಅದಮ್ಯ ಚೇತನ ಅವರು ಮೈಮನ- ನಡೆನುಡಿಗಳಲ್ಲೂ ಮಾರ್ಕ್ಸ್‌ವಾದಿಯಾಗಿದ್ದರೆಂದರು ಶ್ರೀಬಾಲನ್ ರವರು ಧನ್ಯವಾದ ಅರ್ಪಿಸಿದರು.

ಮೈಸೂರು

ಮಾರ್ಚ್19 ರಂದು ಮೈಸೂರಿನಲ್ಲಿ ಸಂತಾಪ ಸಭೆಯನ್ನು ನಡೆಸಲಾಯಿತು. ಪಕ್ಷದ ಸದಸ್ಯರು, ಹಿತೈಷಿಗಳು ಸೇರಿದ ಸಭೆಯಲ್ಲಿ ಕಾಂ|| ಇ.ಎಂ.ಎಸ್ ರವರ ಆರು ದಶಕಗಳ ಕಾಲದ ರಾಜಕೀಯ ಜೀವನದ ಸಾಧನೆಗಳನ್ನು ಮತ್ತು ಮಾರ್ಕ್ಸ್‌ವಾದವನ್ನು ಈ ದೇಶದ ಪರಿಸ್ಥಿತಿಗೆ ಅನ್ವಯಿಸಿಕೊಂಡು ಹೋರಾಟಗಳನ್ನು ರೂಪಿಸುವುದರಲ್ಲಿ ಅವರ ಕೊಡುಗೆಯನ್ನು ನೆನಸಿಕೊಳ್ಳಲಾಯಿತು. ಅವರ ಸರಳ ಜೀವನ, ಅವರ ಪ್ರಜ್ಞೆ ಅವರ ಪ್ರತಿಭೆ ಮಾರ್ಕ್ಸ್‌ವಾದದ ಅನುಷ್ಠಾನ ಚತುರತೆಯನ್ನು ಮೆಚ್ಚಲಾಯಿತು. ಅವರ ಬಹುಮುಖ ಪ್ರತಿಭೆಯಿಂದ ದೇಶದ ಹಾಗೂ ಜಗತ್ತಿನ ರಾಜಕೀಯದ ಮೇಲೆ ಅಪಾರ ಪ್ರಭಾವ ಬೀರಿದರು. ಅವರ ನಿಧನದಿಂದ ದೇಶಕ್ಕೆ ಹಾಗೂ ಪಕ್ಷಕ್ಕೆ ಆಗಿರುವ ನಷ್ಟವನ್ನು ಭರಿಸುವ ಮಾರ್ಗವೆಂದರೆ ಸಮಾಜದ ಅನಿಷ್ಟಗಳನ್ನು ತೊಡೆದು ಹಾಕಿ ಸಮತಾ ಸಮಾಜದ ಸ್ಥಾಪನೆಗೆ ಶ್ರಮಿಸುವುದೇ ಆಗಿದೆ ಎಂದರು. ಅವರಿಗೆ ಗೌರವ ಸಲ್ಲಿಸಲು ಎರಡು ನಿಮಿಷ ಮೌನವನ್ನಾಚರಿಸಲಾಯಿತು.

ಹರಿಹರ

ಹರಿಹರ ನಗರದ ನಿವೇಶನರಹಿತರ ಸಂಘದ ಆಶ್ರಯದಲ್ಲಿ ದಿನಾಂಕ: 20 ರಂದು ಸಂತಾಪ ಸೂಚಕ ಸಭೆ ಏರ್ಪಟ್ಟಿತು. ಕಾಂ|| ಹೆಚ್.ಬಿ. ಕೊಟ್ರೇಶ್ವರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಕಾಂ|| ರುದ್ರಪ್ಪ ಮೋಟೆ ಬೆನ್ನೂರ. ಕಾಂ||ಕೆ.ಜಿ.ರೇವಣಸಿದ್ದಪ್ಪನವರು ಮಾತನಾಡಿದರು.

ಜನತಾ ಪ್ರಜಾ ಪ್ರಭುತ್ವ ಚಳುವಳಿಯನ್ನು ಮುಂದುವರಿಸುವುದರೊಂದಿಗೆ, ಅಗಲಿದ ಮಹಾನಾಯಕನ ಬಯಕೆ ಈಡೇರಲು ಬಡ ರೈತರ ಕಾರ್ಮಿಕರ ಹೋರಾಟವನ್ನು ಮುಂದುವರಿಸಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು.

ಈ ಮೊದಲು ಬೆಳಗ್ಗೆ ಕಾಂ|| ನಂಬೂದರಿಪಾದರ ಮರಣದ ವಾರ್ತೆಯನ್ನು ತಿಳಿದ ಕೂಡಲೆ, ನಗರ ಘಟಕದ ಸದಸ್ಯರು ಸ್ಥಳಿಯ ಪಾರ್ಟೀ ಕಚೇರಿ ಮೇಲಿನ ಧ್ವಜವನ್ನು ಅರ್ಧಕ್ಕೆ ಇಳಿಸಿ ತಕ್ಷಣ ಪಾರ್ಟಿಸದಸ್ಯರು ಕಚೇರಿಯಲ್ಲಿ ಸಭೆ ಸೇರಿ, ಅಗಲಿದ ಮಹಾನಾಯಕರಿಗೆ ನಮನ ಸಲ್ಲಿಸಿದರು.

ಬೆಳಗಾವಿ

ಮಾರ್ಚ್ 20 ರಂದು ರಾಮದುರ್ಗದಲ್ಲಿ ಸಂತಾಪ ಸೂಚಕ ಸಭೆ ನಡೆಯಿತು. ಪಕ್ಷದ ಕಾರ್ಯಕರ್ತರು, ಹಿತೈಷಿಗಳು, ಕಾರ್ಮಿಕರು ಹಾಗೂ ವಿದ್ಯಾರ್ಥಿ ಯುವಜನರು ಈ ಸಭೆಯಲ್ಲಿ ಪಾಲ್ಗೊಂಡು ಶ್ರದ್ಧಾಂಜಲಿ ಸಲ್ಲಿಸಿದರು.

ಸಭೆಯನ್ನುದ್ದೇಶಿಸಿ ಪಕ್ಷದ ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ವಿ.ಪಿ.ಕುಲಕರ್ಣಿ ಹಾಗೂ ಗೈಬು ಜೈನ್‌ಖಾನ ಮಾತನಾಡಿ ಇ.ಎಂ.ಎಸ್. ಸಾರ್ಥಕ ಬದುಕಿನ ವಿವರ ನೀಡಿದರು. ದೇಶದದುಡಿಯುವ ಜನರ ಏಳ್ಗೆಗಾಗಿ ಅನವರತ ಶ್ರಮಿಸಿದ ಇ.ಎಂ.ಎಸ್.ರ ನಿಧನ ಎಡ ಚಳುವಳಿಗೆ ಅತೀವ ಆಘಾತವಾಗಿದೆ. ಕಮ್ಯುನಿಸ್ಟ್ ಪಕ್ಷದ ಉಜ್ವಲ ಪರಂಪರೆಯನ್ನು ಎತ್ತಿ ಹಿಡಿದ, ಕ್ರಾಂತಿಕಾರರ ಕಣ್ಮಣಿಯಾಗಿದ್ದ ಇ.ಎಂ.ಎಸ್. ಕನಸನ್ನು ನನಸಾಗಿಸಲು ಮುಂದುವರೆದರೆ ಮಾತ್ರ ಇ.ಎಂ.ಎಸ್.ರಿಗೆ ಸೂಕ್ತ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆ ಎಂದು ವಿ.ಪಿ.ಕುಲಕರ್ಣಿ ತಿಳಿಸಿದರು.

ಇಂಡಾಲ್ ಕಾರ್ಮಿಕರು ಮಾರ್ಚ್ 20 ರಂದು ಗೇಟ್ ಮೀಟಿಂಗ್ ನಡೆಸಿ ಸಂತಾಪ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಭೆಯನ್ನುದ್ದೇಶಿಸಿ ಇಂಡಲ್ ಕಾರ್ಮಿಕ ಮುಖಂಡರಾದ ಶ್ರೀ ರಜಾಕ ಬಿಸ್ತಿ ಹಾಗೂ ಬಾಬು ಗಸ್ತಿ ಮಾತನಾಡಿ ಶೋಕ ವ್ಯಕ್ತಪಡಿಸಿದರು.

ಚಿಂತಾಮಣಿ


ಕೋಲಾರ ಜಿಲ್ಲೆಯ ಚಿಂತಾಮಣಿ ಪ್ರವಾಸಿ ಮಂದಿರದಲ್ಲಿ ಸೇರಿದ ಸಭೆಯು ಎರಡು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಕಾಂ|| ಇ.ಎಂ.ಎಸ್ ರವರ ಕುರಿತು ಸಭೆಯಲ್ಲಿ ಮಾತನಾಡಿದ ಡಾ|| ರಾಮಚಂದ್ರ ಗೌಡರು ಇವರ ಸಾವು ಬರೀ ಎಡಪಂಥಿಯರಿಗೆ ಆದ ನಷ್ಟ ಮಾತ್ರವಲ್ಲ ದೇಶದ ಎಲ್ಲಾ ಜಾತ್ಯಾತೀತ ಶಕ್ತಿಗಳಿಗೆ ಉಂಟಾಗಿರುವ ಭಾರೀ ನಷ್ಟವೆಂದರು. ಅತ್ಯಂತ ಕಠಿಣ ದಿನಗಳಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಮುನ್ನಡೆಸಿದ ಕಾಂ|| ಇ.ಎಂ.ಎಸ್.ದೇಶದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಕುರಿತು ಆಳವಾದ ತಿಳುವಳಿಕೆಯನ್ನು ಹೊಂದಿದವರಾಗಿದ್ದು ಕೋಮುವಾದದ ವಿರುದ್ಧ ಸ್ಪಷ್ಟ, ದೃಢವಾದ ಸೈದ್ಧಾಂತಿಕ ಹೋರಾಟ ನಡೆಸಿದವರಲ್ಲಿ ಅತಿಗಣ್ಯರೆಂದರು.

ಸಭೆಯಲ್ಲಿ ಮಾತನಾಡಿದ ಕಮ್ಯೂನಿಸ್ಟ್ ಪಕ್ಷದ ಮುಖಂಡರಾದ ಜಿ.ಸಿ. ಬಯ್ಯಾ ರೆಡ್ಡಿ, ಸಿ.ಗೋಪಿನಾಥ್ ಕಾಂ|| ಇಂ.ಎಂ.ಎಸ್ ನಂಬಿದ್ದ ಮಾರ್ಕ್ಸ್‌ವಾದಿ ಸಿದ್ಧಾಂತದ ಆಧಾರದಲ್ಲಿ ನಾವು ಹೋರಾಟ ಮುನ್ನಡೆಸುವುದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿಯೆಂದರು.

ತಮ್ಮ ಕೊನೆಯ ಉಸಿರು ಬಿಡುವ ಕೆಲವು ನಿಮಿಷಗಳ ಮುಂದೆ, ದೇಶದ ಸದ್ಯದ ಪರಿಸ್ಥಿತಿಯಲ್ಲಿ ಕೋಮುವಾದ ಅಪಾಯದಿಂದ ದೇಶವನ್ನು ರಕ್ಷಿಸಲು ಇರುವ ಮಾರ್ಗಗಳ ಕುರಿತು ತಮ್ಮ ನೆಚ್ಚಿನ ದೇಶಾಭಿಮಾನಿ ಪತ್ರಿಕೆಗೆ ಲೇಖನವನ್ನು ಬರೆದಿದ್ದರು. ಹೀಗೆ ಇಡೀ ಕೊನೆ ಉಸಿರು ಇರುವ ತನಕ ದೇಶದ ಐಕ್ಯತೆ ಸಮಗ್ರತೆ ಸಮಾನತೆಗಾಗಿ ಹೋರಾಟ ನಡೆಸಿದ ಈ ಮಹಾನ್ ನಾಯಕನ ವಿಚಾರಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರಸ್ತುತವೆಂದರು.

6 ನೇ ಪುಟ ನೋಡಿ



ಮಹಾನ್ ಕ್ರಾಂತಿಕಾರಿಗೆ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ

ಕಾಮ್ರೇಡ್ ಇಎಂಎಸ್‌ರವರ ನಿಧನದ ಸುದ್ದಿ ತಲುಪಿದ ಕೂಡಲೇ ಮಾರ್ಚ್ 19, 1998 ರಂದು ಪೊಲಿಟ್‌ಬ್ಯೂರೋ ಹೊರಡಿಸಿದ ಪತ್ರಿಕಾ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.



1957 ರಲ್ಲಿ ಕೇರಳದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ



1967 ರಲ್ಲಿ ಮುಖ್ಯಮಂತ್ರಿಯಾದಾಗ ರಾಜ್ಯಪಾಲರು ಹಾಗೂ ಸಂಪುಟದ ಸಹಯೋಗಿಗಳೊಂದಿಗೆ



1967 ರಲ್ಲಿ ಮದುರೈನಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋದ ಇತರ ಸದಸ್ಯರೊಂದಿಗೆ



ಮಾವೋಜೆಡೊಂಗ್ ರನ್ನು ಭೇಟಿಯಾದಾಗ

ಭಾರತ ಕಮ್ಯುನಿಸ್ಟ್ ಆಂದೋಲನದ ಅಗ್ರಗಣ್ಯ ಮುಂದಾಳು ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಸ್ಥಾಪಕ ಮುಂದಾಳುಗಳಲ್ಲಿ ಒಬ್ಬರಾದ ಕಾಮ್ರೇಡ್ ಇ.ಎಂ.ಎಸ್. ನಂಬೂದರಿಪಾಡ್‌ರವರು ನಿಧನರಾದರೆಂದು ಅತ್ಯಂತ ಆಳವಾದ ದುಃಖದಿಂದ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಪ್ರಕಟಿಸುತ್ತಿದೆ. ಅವರು ಮಾರ್ಚ್ 19, 1998 ರಂದು ತಿರುವನಂತಪುರದ ಒಂದು ಆಸ್ಪತ್ರೆಯಲ್ಲಿ ವೈರಲ್ ನ್ಯೂಮೋನಿಯಾದಿಂದ ನಿಧನರಾದರು. ಅವರಿಗೆ 89 ವರ್ಷವಾಗಿತ್ತು.

ತನ್ನ ಸುಮಾರು ಏಳು ದಶಕಗಳ ಸಾರ್ವಜನಿಕ ಜೀವನ ಮತ್ತು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಇ.ಎಂ.ಎಸ್. ನಂಬೂದರಿಪ್ಪಾಡ್‌ರವರು ದೇಶದ ಪ್ರಗತಿಶೀಲ ಹಾಗೂ ಕಾರ್ಮಿಕ ವರ್ಗದ ಆಂದೋಲನದ ಮೇಲೆ ಒಂದು ಅಚ್ಚಳಿಯದ ಗುರುತು ಬಿಟ್ಟು ಹೋಗಿದ್ದಾರೆ. ಒಬ್ಬ ಯುವಕರಾಗಿ ಅವರು ಜಾತಿಯ ವಿರುದ್ಧ ಸಾಮಾಜಿಕ ಸುಧಾರಣಾ ಆಂದೋಲನದಲ್ಲಿ ಸಕ್ರಿಯರಾದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು 1931 ರಲ್ಲಿ ಕಾಲೇಜು ಬಿಟ್ಟ ಅವರು ಸತ್ಯಾಗ್ರಹ ಆಂದೋಲನದಲ್ಲಿ ಜೈಲು ಶಿಕ್ಷೆ ಅನುಭವಿಸಿದರು. ಅಂದಿನಿಂದ ಅವರು ಕಾಂಗ್ರೆಸ್ ಆಂದೋಲನದಲ್ಲಿ ಒಂದು ಮಹತ್ವದ ಪಾತ್ರ ವಹಿಸಿದರು. ಕೇರಳದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪಕರಲ್ಲೊಬ್ಬರಾದರು. 1934 ರಲ್ಲಿ ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಅಖಿಲ ಭಾರತ ಜಂಟಿ ಕಾರ್ಯದರ್ಶಿಗಳಾದರು. ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕಾಂಗ್ರೆಸ್‌ಗೆ ನೇತೃತ್ವ ನೀಡುತ್ತಿದ್ದ ಈ ಅವಧಿಯಲ್ಲಿಯೇ ಮಾರ್ಕ್ಸ್‌ವಾದದ ಸಂಪರ್ಕಕ್ಕೆ ಬಂದರು. 1936 ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ಗುಂಪಿನ ಐವರಲ್ಲಿ ಇವರೊಬ್ಬರಾಗಿದ್ದರು. ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟ ಹಾಗೂ ಪಾಳೆಯಗಾರಿ-ವಿರೋಧಿ ಹೋರಾಟದ ಎರಡು ತೊರೆಗಳು ಒಂದಾದುದರ ಪ್ರತಿನಿಧಿಯಾಗಿದ್ದರು ಇಎಂಎಸ್ ನಂಬೂದರಿಪ್ಪಾಡ್. ಇದು ಕೇರಳದಲ್ಲಿ ಒಂದು ಬಲಿಷ್ಠ ಕಮ್ಯುನಿಸ್ಟ್ ಆಂದೋಲನವನ್ನು ಬೆಳೆಸಲು ಅಡಿಗಲ್ಲಾಯಿತು. ಅವರು ಕೇರಳ ಒಂದು ಏಕೀಕೃತ ಭಾಷಾವಾರು ರಾಜ್ಯವಾಗಿ ರಚನೆಗೊಳ್ಳಲು ಕಾರಣವಾದ 'ಐಕ್ಯಕೇರಳ' ಆಂದೋಲನದ ಪ್ರಧಾನ ಪ್ರತಿಪಾದಕರಲ್ಲಿ ಒಬ್ಬರಾಗಿದ್ದರು.

ಇ.ಎಂ.ಎಸ್. ನಂಬೂದರಿಪ್ಪಾಡ್ 1939 ರಲ್ಲಿ ಮೊದಲಿಗೆ ಮದ್ರಾಸ್ ಪ್ರಾಂತೀಯ ಶಾಸನಸಭೆಗೆ ಚುನಾಯಿತರಾದರು. ಆಗಷ್ಟೇ ಹುಟ್ಟಿದ್ದ ಕಮ್ಯುನಿಸ್ಟ್ ಪಕ್ಷದ ಒಬ್ಬ ಮಹತ್ವದ ಮುಖಂಡರಾಗಿ ಅವರು ತಮ್ಮ ಆಸ್ತಿಯಿಂದ ಬಂದ ಹಣವನ್ನೆಲ್ಲಾ ಪಕ್ಷಕ್ಕೆ ದಾನವಾಗಿ ನೀಡಿದರು. ಪಕ್ಷವನ್ನು ಕಟ್ಟುವಲ್ಲಿ ಅವರು 1939-42 ಹಾಗೂ 1948-50 ರ ನಿರ್ಣಾಯಕ ಅವಧಿಗಳಲ್ಲಿ ಭೂಗತರಾದರು. 1941 ರಲ್ಲಿ ಅವರು ಭಾರತ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು. ಡಿಸೆಂಬರ್ 1930 ರಂದು ಅವರು ಸಿಪಿಐನ ಪೊಲಿಟ್‌ಬ್ಯೂರೋದ ಸದಸ್ಯರಾದರು. ನಂತರ ಸಿಪಿಐನ ಕಾರ್ಯದರ್ಶಿ ಮಂಡಳಿಯ ಸದಸ್ಯರಾದರು. 1962 ರಲ್ಲಿ ಅವರು ಅವಿಭಜಿತ ಸಿಪಿಐನ ಪ್ರಧಾನ ಕಾರ್ಯದರ್ಶಿಯಾದರು.

1957 ರಲ್ಲಿ ಕೇರಳ ರಾಜ್ಯ ರಚನೆಗೊಂಡ ನಂತರದ ಮೊದಲ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಬಹುಮತ ಪಡೆಯಿತು. ಇ.ಎಂ.ಎಸ್. ನಂಬೂದರಿಪ್ಪಾಡ್ ಭಾರತದ ಮೊದಲ ಕಮ್ಯುನಿಸ್ಟ್ ಮಂತ್ರಿಮಂಡಳದ ಮುಖ್ಯಮಂತ್ರಿಗಳಾದರು. 1959 ರಲ್ಲಿ ಪ್ರಜಾಪ್ರಭುತ್ವ -ವಿರೋಧಿ ರೀತಿಯಲ್ಲಿ ವಜಾ ಆಗುವವರೆಗೆ ಹೊಸ ಹಾದಿ ಹಾಕಿಕೊಟ್ಟ ಭೂಸುಧಾರಣೆ ಶಾಸನ ಹಾಗು ಇತರ ಪ್ರಜಾಸತ್ತಾತ್ಮಕ ಕ್ರಮಗಳನ್ನು ಆರಂಭಿಸಿದ್ದು ಇ.ಎಂ.ಎಸ್. ಮಂತ್ರಿಮಂಡಳವೇ. 1967 ರಲ್ಲಿ ಮತ್ತೊಮ್ಮೆ ಅವರು ಮುಖ್ಯಮಂತ್ರಿಯಾದರು. 1969 ರ ವರೆಗೆ ಅವರು ಸಂಯುಕ್ತ ರಂಗ ಮಂತ್ರಿಮಂಡಳದ ಮುಖ್ಯಸ್ಥರಾಗಿದ್ದರು.

ಇ.ಎಂ.ಎಸ್. ಸಿಪಿಐ(ಎಂ)ನ್ನು ಸ್ಥಾಪಿಸಿದ ಅವಿಭಜಿತ ಪಕ್ಷದ ನಾಯಕರ ಗುಂಪಿನಲ್ಲಿ ಸೇರಿದ್ದು 1964 ರಲ್ಲಿ ನಡೆದ ಪಕ್ಷದ ಏಳನೇ ಮಹಾಧಿವೇಶನದಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಹಾಗೂ ಪೊಲಿಟ್‌ಬ್ಯೂರೋಗೆ ಆಯ್ಕೆಗೊಂಡರು. ಕೊನೆಯವರೆಗೂ ಅವರು ಈ ಸ್ಥಾನಗಳಿಂದ ಸೇವೆ ಸಲ್ಲಿಸಿದರು.

ಇ.ಎಂ.ಎಸ್. ನಂಬೂದರಿಪ್ಪಾಡ್ 1977 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದರು. 1992 ರಲ್ಲಿ ನಡೆದ 14ನೇ ಮಹಾಧಿವೇಶನದಲ್ಲಿ ಅನಾರೋಗ್ಯದ ಕಾರಣ ಆ ಸ್ಥಾನವನ್ನು ಬಿಡುವವರೆಗೂ ಅವರು ಮುಂದುವರಿದು ಪಕ್ಷಕ್ಕೆ ನೇತೃತ್ವ ನೀಡಿದರು. ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಧರ್ಮನಿರಪೇಕ್ಷ ಶಕ್ತಿಗಳನ್ನು ಒಟ್ಟುಗೂಡಿಸುವಲ್ಲಿ ಅವರ ಮುಖಂಡತ್ವ ಅಮೂಲ್ಯ.

ಇ.ಎಂ.ಎಸ್. ಒಬ್ಬ ಪ್ರತಿಭಾವಂತ ಮಾರ್ಕ್ಸ್‌ವಾದಿ ಸಿದ್ಧಾಂತವೇತ್ತ. ಅವರು ಭಾರತೀಯ ಸಮಾಜಕ್ಕೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಅನ್ವಯಿಸುವಲ್ಲಿ ಹಾಗೂ ಭಾರತೀಯ ಕ್ರಾಂತಿಯ ರಣನೀತಿ ಹಾಗೂ ಕಾರ್ಯತಂತ್ರ ರೂಪಿಸುವಲ್ಲಿ ಬಹುಮುಖ್ಯ ಕೊಡುಗೆಗಳನ್ನು ನೀಡಿದರು. ಅವರ ಅಸಂಖ್ಯಾತ ಲೇಖನಗಳಲ್ಲಿ ಮಾರ್ಕ್ಸ್‌ವಾದಿ ಸಿದ್ಧಾಂತದ ತಾರ್ಕಿಕತೆಯ ತತ್ವವನ್ನು ಸಂಪೂರ್ಣವಾಗಿ ಕರಗತ ಮಾಡಿಕೊಂಡ ಒಂದು ಮೌಲಿಕ ಹಾಗೂ ಸೃಜನಾತ್ಮಕ ಮನಸ್ಸಿನ ಛಾಪು ಕಾಣುತ್ತದೆ. ಭೂ ಸಂಬಂಧಗಳು, ಕೇರಳ, ಸಮಾಜ ಮತ್ತು ರಾಜಕೀಯ ಹಾಗೂ ಮಾರ್ಕ್ಸ್‌ವಾದಿ ಇತಿಹಾಸ, ವಾಣಿಜ್ಯ ಮತ್ತು ಇತಿಹಾಸ ಕುರಿತಾದ ಅವರ ಲೇಖನಗಳು ಅವರನ್ನು ದೇಶದ ಹಾಗೂ ವಿಶ್ವದ ಒಬ್ಬ ಅತ್ಯಂತ ಪ್ರಭಾವಶಾಲಿ ಕಮ್ಯುನಿಸ್ಟ್ ಚಿಂತಕರನ್ನಾಗಿ ಮಾಡಿವೆ.

ಇ.ಎಂ.ಎಸ್. ನಂಬೂದರಿಪ್ಪಾಡ್‌ರವರದ್ದು ಒಂದು ಅಪರೂಪದ ಉದಾಹರಣೆ. ಒಂದು ಸಾಂಪ್ರದಾಯಿಕ ಭೂಮಾಲಕ ಕುಟುಂಬದಿಂದ ಬಂದ ಅವರು ಕ್ರಾಂತಿಕಾರಿ ಆಂದೋಲನದ ಅಗ್ರಗಣ್ಯ ಮುಂದಾಳುವಾಗಿ ಬೆಳೆದರು. ಅವರು ಮೂರು ವರ್ಷ ಜೈಲುಗಳಲ್ಲಿ ಹಾಗೂ ಆರುವರ್ಷ ಭೂಗತರಾಗಿ ಕಳೆದರು. ಅವರದ್ದು ತ್ಯಾಗಮಯವಾದ ಸರಳವಾದ ಜೀವನ. ದೇಶಾದ್ಯಂತ ಸಾವಿರಾರು ಕಮ್ಯುನಿಸ್ಟರಲ್ಲಿ ಸ್ಫೂರ್ತಿ ತುಂಬಿದ ಮಾದರಿಯನ್ನು ಅವರು ಹಾಕಿಕೊಟ್ಟವರು.

ಕೇರಳದಲ್ಲಿ ಅವರು ತಮ್ಮ ಜೀವನಕಾಲದಲ್ಲಿ ಒಂದು ಐತಿಹ್ಯವೇ ಆಗಿಬಿಟ್ಟಿದ್ದರು. ಅಲ್ಲಿಯ ಎಲ್ಲಾ ಜನವಿಭಾಗಗಳ ಆದರಾಭಿಮಾನಗಳನ್ನು ಅವರು ಗಳಿಸಿದ್ದರು. ತನ್ನ ಜೀವನದ ಕೊನೆಯವರೆಗೂ ಆರೋಗ್ಯ ಚೆನ್ನಾಗಿಲ್ಲದಿದ್ದರೂ, ಇಎಂಎಸ್ ಲೇಖನಗಳನ್ನು ಬರೆಯುವ ಹಾಗೂ ಪಕ್ಷಕ್ಕೆ ಮಾರ್ಗದರ್ಶನ ನೀಡುವ ತನ್ನ ದೈನಂದಿನ ಕೆಲಸವನ್ನು ಬಿಡಲಿಲ್ಲ.

ಸಿಪಿಐ(ಎಂ), ಎಡ ಆಂದೋಲನ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಒಂದು ಭಾರೀ ದುಃಖದಾಯಕ ನಷ್ಟವಾಗಿದೆ. ಸಾರ್ವಜನಿಕ ಜೀವನದಲ್ಲಿ ಸಮಗ್ರತೆ ಹಾಗೂ ಉನ್ನತ ಮಟ್ಟವನ್ನು ಬಯಸುವ ಎಲ್ಲರಿಗೂ ಈಗ ಅವರ ಗೈರು ಹಾಜರಿ ಎದ್ದು ಕಾಣುತ್ತದೆ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಮಹಾನ್ ಕ್ರಾಂತಿಕಾರಿಗೆ ತನ್ನ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತ ತನ್ನ ಜೀವನಾದ್ಯಂತ ಅವರು ನಡೆಸಿದ ಕ್ರಾಂತಿಕಾರಿ ಕೆಲಸಗಳನ್ನು ಮುಂದೊಯ್ಯುವ ಪ್ರತಿಜ್ಞೆ ಮಾಡುತ್ತದೆ. ಅವರ ಪತ್ನಿ, ಪುತ್ರರು, ಪುತ್ರಿಯರು ಹಾಗೂ ಅವರ ಕುಟುಂಬದ ಇತರ ಸದಸ್ಯರಿಗೆ ಪೊಲಿಟ್‌ಬ್ಯೂರೋ ತನ್ನ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಮಾರ್ಚ್ 20,
ತಿರುವನಂತಪುರ ಸಚಿವಾಲಯ ಕ
ಸುತ್ತಲೂ ಜನಸಾಗರ. ಎರಡು
ಒಟ್ಟಾಗಿ ನಾಲ್ಕೇ
ಮುಖ್ಯಮಂತ್ರಿಗಳಾಗಿ ಈ ಕಟ್ಟಡ
ಕಾರ್ಯನಿರ್ವಹಿಸಿದ್ದರೂ ಆ
ವರ್ಷ ಕೇರಳದ ರಾಜಕೀ
ಸಂಪೂರ್ಣ ಹೊಸ ದಿಕ್ಕನ್ನು
ವರ್ಷಗಳು. ಮಾರ್ಚ್ 20
ಅವರ ಅಂತಿಮ ದರ್ಶನಕ್ಕೆ
ಜನಸಾಗರವೇ ಅದಕ್ಕೆ ಸಾಕ್ಷಿಯಾ

■ "ನನಗೆ ಸದಾ ಈ ಬೃಹತ್ ಕ
ಬಗ್ಗೆ ಅದೇಕೋ ತಿಳಿಯದ ಭಯ
ಸ್ವಾತಂತ್ರ್ಯದ ನಂತರವೂ
ಮುಂದುವರಿಯಿತು. 1957
ಇ.ಎಂ.ಎಸ್. ಈ ಕಟ್ಟ
ಮಾಲಕನಾದ ಮೇಲಷ್ಟೇ ನನ್ನ ಈ
ಮಾಯವಾಯಿತು. ಏಕೆಂದು
ಈಗಲೂ ಅರ್ಥವಾಗುತ್ತಿಲ್ಲ' ಎಂದು
ಹಿರೀ ವಯಸ್ಸಿನ ದುಡಿಮೆಗಾರ.


■ "ನನ್ನ 73 ವರ್ಷಗಳ ಜೀವ
ಮಸೀದಿಗೆ ಹೋಗಿ ನಮಾಜು ಮಾ
ಶುಕ್ರವಾರ ಇದೊಂದೇ. ಈ ಸಣ್ಣ
ಅಲ್ಲಾ ಮಾಫಿ ಮಾಡು
ನಮ್ಮಂತವರಿಗೆ ಇಷ್ಟೊಂದು ಮಾಡಿ
ಮನುಷ್ಯನಿಗೆ ನಾವೇನು ಹಿಂತಿರು
ಸಾಧ್ಯ' - ಇದು ಇ.ಎಂ.ಎಸ್.
ಕೊನೆಯ ಬಾರಿಗೆ ನೋ
ಕೊನೆಯಿಲ್ಲದಂತೆ ಸಾಗಿದ್ದ ಸಾ
ನಿಂತಿದ್ದ ಇನ್ನೊಬ್ಬ ಹಿರಿಯನ ಉ

■ "ಒಬ್ಬ ಮುಂದಾಳುವಾಗಿ
ಕಾರ್ಮಿಕ ವರ್ಗ ತನ್ನ ಸ್ಥಾನಮಾ
ಬಗ್ಗೆ ಹೆಮ್ಮೆ ಪಡುವಂತೆ ಮಾಡಿ
ಕಮ್ಯುನಿಸ್ಟರಾಗಿ ಅವರು ಬೋ
ಆದರ್ಶಗಳನ್ನು ಪಾಲಿಸಿದರು. ಕಾ
ಇ.ಎಂ.ಎಸ್. ಎಂದೆಂದಿಗೂ
ಕೇರಳಿಯನ ಮನದಲ್ಲಿ ಬದುಕಿರು
ಅವರಿಗೆಂದೂ ಸಾವಿಲ್ಲ" ಇ.ಎಂ.
ರವರನ್ನು ಕೊನೆಯಬಾ
ನೋಡಲೆಂದೇ ದೂರದ
ಮಂಗಾಡಿನಿಂದ ಧಾವಿಸಿ ಬಂದ
ಕೃಷಿ ಕಾರ್ಮಿಕ ಸಂಘ
ಉದ್ಗಾರವಿದು.

■ "ನಾನು ಅವರ ಲೇಖನಗ
ನಿಯಮಿತವಾಗೇನೂ ಓದುತ್ತಿಲ್ಲ.
ಪಕ್ಷದ ಹಿತೈಷಿಯಷ್ಟೆ. ಆದರೆ
ನೆನಪು ನನ್ನ ಮನದಾಳದಲ್ಲಿ ತಂದೆ
ದೃಢವಾಗಿ ಬೇರು ಬಿಟ್ಟಿದೆ. ಶ್ರ
ಬೆವರಿನ ಘನತೆಯನ್ನು
ಸಾಮೂಹಿಕ ಮುಂದಾಳು ಅ
ಎಂದಾಗ ಸಿದ್ಧಾರ್ಥನ ದನಿ ನಡು

■ "ಮಾರ್ಕ್ಸ್‌ವಾದ ಸತ್ತಿತು,
ದೂರವೇ ಹೋಯಿತು ಎಂದು
ಹೇಳುತ್ತಿದ್ದರು. ಆದರೆ ಕಾ
ಇ.ಎಂ.ಎಸ್. ನಮಗೆ ಭ

ತಮ್ಮ ನೆಚ್ಚಿನ ಕ್ರಾಂತಿಕಾರಿ ಮ
ತಡೆಯಲಾ



ಕಾಮ್ರೇಡ್ ಇ.ಎಂ.ಎಸ್. ಲಾಲ್‌ಸಲಾಮ್


ಕೊಟ್ಟರು. ಅವರ ಬರವಣಿಗೆಗಳು, ಭಾಷಣಗಳು ಮಾರ್ಕ್ಸ್‌ವಾದವನ್ನು ಜೀವಂತ ವಾಸ್ತವವನ್ನಾಗಿ ಮಾಡಿದವು, ನಮ್ಮನ್ನು ರಕ್ಷಿಸಿದವು. ನಮ್ಮ ಬದುಕಿಗೊಂದು ಅರ್ಥ ನೀಡಿದವು" - ಇದು ಚಿರನಿದ್ರೆಯಲ್ಲಿ ಮಲಗಿದ್ದ ಇ.ಎಂ.ಎಸ್. ರನ್ನು ನೋಡಿಕೊಂಡು ದರ್ಬಾರ್ ಹಾಲಿನಿಂದ ಹೊರಬಂದು ಬಿಕ್ಕಿ-ಬಿಕ್ಕಿ ಅಳಲಾರಂಭಿಸಿದ ಡಿವೈಎಫ್‌ಐ ಕಾರ್ಯಕರ್ತರ ಗುಂಪಿ ನಲ್ಲಿದ್ದ ಒಬ್ಬ ಯುವಕನ ಅಭಿಪ್ರಾಯ.

"ಇಂತಹ ವ್ಯಕ್ತಿಗಳು ಯಾವಾಗಲೊಮ್ಮೆಯಷ್ಟೇ ಕಾಣಸಿಗುತ್ತಾರೆ. ದೇವರ ದಯ, ಅವರಿಗೆ ಶಾಂತಿಯುತ ವಾದ ಸಾವು ಬಂತು' ಇ.ಎಂ.ಎಸ್. ರ ಅಂತಿಮದರ್ಶನ ಮಾಡಿ ಹೊರಬಂದ ಒಬ್ಬ ಬಡ ವೃದ್ಧೆ ಕಣ್ಣು ಮುಚ್ಚಿಕೊಂಡು ಕೈ ಮುಗಿದು ಹೇಳಿದಳು.

ಥೈಕಾಡ್ ಚಿತಾಗಾರದತ್ತ ಇ.ಎಂ.ಎಸ್. ಶರೀರವನ್ನು ಒಯ್ಯಬೇಕಿತ್ತು.

ಅವರ ದರ್ಶನಕ್ಕಾಗಿ ಕಾಯುತ್ತಿದ್ದ ಜನಗಳ ಸಂಖ್ಯೆ ಅಪಾರವಾಗಿದ್ದುದರಿಂದ ಬಹಳಷ್ಟು ವಿಳಂಬವಾಯಿತು. ಕೊನೆಗೆ ಉಪಾಯವಿಲ್ಲದೆ ದರ್ಬಾರ್‌ಹಾಲ್ ನೊಳಗೆ ಪ್ರವೇಶವನ್ನು ನಿಲ್ಲಿಸಬೇಕಾಗಿ ಬಂತು.

ಪಕ್ಷದ ರಾಜ್ಯ ಸಮಿತಿಯ ಕಚೇರಿ ಯಿರುವ ಎಕೆಜಿ ಭವನದಿಂದ ಇಎಂಎಸ್‌ರವರ ಪಾರ್ಥಿವ ಶರೀರವನ್ನು ಬೆಳಿಗ್ಗೆ 11 ಗಂಟೆಗೆ ವಿಧಾನಮಂಡಲದ ಕಲಾಪ ನಡೆಯುವ ಸೆಕ್ರೆಟಾರಿಯಾಟ್‌ನ ದರ್ಬಾರ್ ಹಾಲಿಗೆ ಮೆರವಣಿಗೆಯಲ್ಲಿ ಒಯ್ಯಲಾಯಿತು. ಹೂಗಳಿಂದ ಅಲಂಕರಿಸಿದ್ದ ವಾಹನದಲ್ಲಿ ಇಎಂಎಸ್ ರವರ ಪಾರ್ಥಿವ ಶರೀರದೊಂದಿಗೆ ಮುಖ್ಯಮಂತ್ರಿ ನಾಯನಾರ್, ಅಚ್ಯುತಾನಂದನ್, ಎಸ್.ರಾಮಚಂದ್ರನ್ ಪಿಳ್ಳೆ,



ಅಗಲಿದ ಸಂಗಾತಿಗೆ ಅಂತಿಮ ನಮನ ನೀಡುತ್ತಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿ ಕಾಂ. ಬರ್ಧನ್

ಯಾತ್ರೆಯು ಸಾಗುತ್ತಿದ್ದಾಗ ರಸ್ತೆಯ ಇಕ್ಕೆಲಗಳಲ್ಲಿ ನಿಂತು ಸಾವಿರಾರು ಜನ ತಮ್ಮ ಕೊನೆಯ ನಮನ ಅರ್ಪಿಸುತ್ತಿದ್ದರು. ಸುಮಾರು ಒಂದೂವರೆ ಗಂಟೆಯ ಪಯಣದ ನಂತರ ಮೆರವಣಿಗೆ ಥೈಕಾಡ್ ವಿದ್ಯುತ್ ಚಿತಾಗಾರ ತಲುಪಿತು.

ಅಲಂಕೃತ ವಾಹನದಲ್ಲಿ ಅಂತಿಮ ಪಯಣ-ಇಕ್ಕೆಲದಲ್ಲೂ ನೆರೆದಿರುವ ಜನಸಾಗರ



"ನಮ್ಮಂತ ಬಡವರು ಒಂದು ಮನೆಯಲ್ಲಿ ಬದುಕಲು ಸಾಧ್ಯವಾದದ್ದು ಈ ಮಹಾನ್ ಪುರುಷನಿಂದಾಗಿ ಎಂದು ನನ್ನ ತಂದೆ ಯಾವಾಗಲೂ ಹೇಳುತ್ತಿದ್ದರು. ಅವರ ಕಾಲು ಊನವಾಗಿದೆ. ಆದ್ದರಿಂದ ಎಂದೂ ಇಎಂಎಸ್‌ರನ್ನು ನೋಡಲಾಗಲಿಲ್ಲ. ಆದ್ದರಿಂದ ನಮಗೆ ಬದುಕಲು ಜೀವನ ಕೊಟ್ಟ ಈ ವ್ಯಕ್ತಿಯ ದೇಹವನ್ನಾದರೂ ನೋಡಿ ಬಾ ಎಂದು ಪಾಲಕ್ಕಾಡ್‌ನಿಂದ ಇಲ್ಲಿಗೆ ಕಳಿಸಿದರು' ಎನ್ನುತ್ತಾ ಒಬ್ಬ ಯುವಕ ಅಳುತ್ತಿದ್ದ. ಏಕೆಂದರೆ ಇ.ಎಂಎಸ್ ರ ಪಾರ್ಥಿವ ಶರೀರವನ್ನು ನೋಡಲೂ ಅವನಿಗಾಗಲಿಲ್ಲ. ಸಂಜೆ 4 ಗಂಟೆಗೆ ಮೊದಲೇ ದರ್ಬಾರ್ ಹಾಲ್‌ನಿಂದ

...ಅಂತಿಮ ಬಾರಿಗೆ ನೋಡಿ ದುಃಖ ...ರ್ಮಿಕ ಮಹಿಳೆಯರು



ರಾಜ್ಯಕಾರ್ಯದರ್ಶಿ ಚಡಾಯನ್ ಗೋವಿಂದನ್ ಇದ್ದರು. ವಾಹನದ ಹಿಂದೆ ಮಂತ್ರಿಗಳು, ಶಾಸಕರೊಂದಿಗೆ ಜನಸಾಗರದ ಮೆರವಣಿಗೆ ದರ್ಬಾರ್ ಹಾಲ್ ತಲುಪಿತು. ಅಲ್ಲಿ ಲಕ್ಷಾಂತರ ಜನ ಇಎಂಎಸ್‌ರ ಅಂತಿಮ ದರ್ಶನಕ್ಕೆ ಆಗಲೇ ಸಾಲುಗಟ್ಟಿ ಕಾದಿದ್ದರು. ಹಿಂದಿನ ದಿನ ಅವರ ಸಾವಿನ ಸುದ್ದಿ ತಿಳಿದಕೂಡಲೇ ಸಿಕ್ಕ ಬಸ್ಸು, ರೈಲು, ಬೇರಾವುದೇ ವಾಹನ ಹತ್ತಿ ರಾಜ್ಯದ ಮೂಲೆ-ಮೂಲೆಗಳಿಂದ ಬಂದಿದ್ದವರು ಅವರು. ಸುಡುಬಿಸಿಲನ್ನು ಲೆಕ್ಕಿಸದೆ ಕಾದಿದ್ದ ಅವರಿಗೆ ಸ್ವಲ್ಪವಾದರೂ ತಂಪೀಯಲು ಕಾರ್ಪೋರೇಷನ್ ವ್ಯವಸ್ಥೆ ಮಾಡಿದ್ದ ನೀರಿನ ಟ್ಯಾಂಕುಗಳಿಂದ ಕುಡಿಯುವ ನೀರನ್ನು ಯುವಜನ ತಂಡಗಳು ಹಂಚುತ್ತಿದ್ದುದು ಕಂಡು ಬಂತು.

ಸಂಜೆ ನಾಲ್ಕೂವರೆ ಗಂಟೆಯ ವೇಳೆಗೆ ಅಗಲಿದ ಮುಂದಾಳುವಿನ ಅಂತಿಮ ಪಯಣ ಆರಂಭವಾಯಿತು. ಮೊದಲಿಗೆ ಇಎಂಎಸ್‌ರ ವಯಸ್ಸನ್ನು ಬಿಂಬಿಸುವ 89 ಕೆಂಪು ಸ್ವಯಂ ಸೇವಕರ ಶಿಸ್ತಿನ ತಂಡ, ಹಿಂದೆ ಇದ್ದ ವಿಶೇಷ ವಾಹನದಲ್ಲಿ ಕೆಂಬಾವುಟವನ್ನು ಹೊದಿಸಿದ ಇಎಂಎಸ್ ಶರೀರವನ್ನು ಸಿಪಿಐ(ಎಂ)ನ ಹಿರಿಯ ಮುಖಂಡರು ಹೊತ್ತು ತಂದು ಇಟ್ಟಾಗ 'ಇಎಂಎಸ್ ಅಮರರು' ಎಂಬ ಘೋಷಣೆ ಗಗನ ಮುಟ್ಟಿತು. ಅಂತಿಮ

ನಗರ ಪೋಲೀಸ್ ಪಡೆಯ ಸಶಸ್ತ್ರ ರಿಝರ್ವ್ ಬಟಾಲಿಯನ್ ವಿಶೇಷ ದಳ ಬಂದೂಕುಗಳನ್ನು ತಲೆಕೆಳಕಾಗಿ ಹಿಡಿದು ಗೌರವ ಸಲ್ಲಿಸಿತು. ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರುತ್ತಿದ್ದಂತೆ ಸಾವಿರಾರು ಕಡೆಗಳಿಂದ ಹೊಮ್ಮಿದ 'ಇಎಂಎಸ್ ಲಾಲ್ ಸಲಾಮ್' ಘೋಷಣೆಗಳ ನಡುವೆ ಇಎಂಎಸ್ ರ ಶರೀರವನ್ನು ಚಿತಾಗಾರದ ವಿದ್ಯುತ್ ಚೇಂಬರಿನೊಳಗೆ ಇಡಲಾಯಿತು. ಇಎಂಎಸ್ ಶರೀರ ಕಣ್ಮರೆಯಾಯಿತು.

"ಇ.ಎಂ.ಎಸ್. ಸ್ಫೂರ್ತಿ ಸದಾ ಇರುತ್ತದೆ" - ಸುರ್ಜಿತ್

ಇಎಂಎಸ್‌ರವರ ನಿಧನ ದೇಶಕ್ಕೆ ವಿಶೇಷವಾಗಿ ಎಡ ಆಂದೋಲನಕ್ಕೆ ದೊಡ್ಡ ನಷ್ಟವಾದರೂ, ಅವರ ಜೀವನ ಮತ್ತು ಬೋಧನೆಗಳು ಸದಾ ಕಾರ್ಮಿಕ ವರ್ಗಕ್ಕೆ ಸ್ಫೂರ್ತಿ ನೀಡುತ್ತಿರುತ್ತವೆ ಎಂದು ಮಾರ್ಚ್ 20 ರಂದು ಇಎಂಎಸ್‌ಗೆ ಅಂತಿಮ ವಿದಾಯ ನೀಡುವ ವೇಳೆಗೆ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡುತ್ತಾ ಸುರ್ಜಿತ್ ಹೇಳಿದರು.

"ದೇಶದೆಲ್ಲೆಡೆ ಮನೆಮಾತಾಗಿರುವ ಕೆಲವೇ ಕಮ್ಯುನಿಸ್ಟ್ ಮುಖಂಡರಲ್ಲಿ ಅವರೊಬ್ಬರು' ಎಂದ ಸುರ್ಜಿತ್ 1957 ರಲ್ಲಿ ಭೂಸುಧಾರಣೆಗಳನ್ನು ಆರಂಭಿಸಿ ದೇಶದಲ್ಲಿ ಒಂದು ಹೊಸ ಯುಗವನ್ನೇ ಆರಂಭಿಸಿ ಒಬ್ಬ ರಾಷ್ಟ್ರೀಯ ನೇತಾರ ರಾಗಿದ್ದವರು ಎಂದು ನೆನಪಿಸಿದರು.

ಕೇಂದ್ರ ಸರ್ಕಾರದ ಪರವಾಗಿ ಹಾಗೂ ಬಿಜೆಪಿಯ ಪರವಾಗಿ ಬಂದು ಭಾಗವಹಿಸಿದ ಕೇಂದ್ರ ಗೃಹ ಮಂತ್ರಿ ಮತ್ತು ಬಿಜೆಪಿ ಅಧ್ಯಕ್ಷ ಅಡ್ವಾಣಿಯವರು 'ನಾನು ಇ.ಎಂ.ಎಸ್. ರವರ ಆದರ್ಶವಾದಕ್ಕೆ, ಸಮರ್ಪಣಾ ಭಾವಕ್ಕೆ ಶ್ರದ್ಧಾಂಜಲಿ ಅರ್ಪಿಸಲು ಬಂದಿದ್ದೇನೆ' ಎಂದರು.

ಇ.ಎಂ.ಎಸ್. ಜನಪ್ರಿಯರಾದದ್ದು ಅವರ ಆದರ್ಶವಾದದಿಂದಷ್ಟೇ ಅಲ್ಲ, ಅವರ ಸಿದ್ಧಾಂತದಿಂದಾಗಿ ಎಂದರು ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್ "ನಾವು ಯಾರಿಗಾಗಿ ಕೆಲಸ ಮಾಡುತ್ತಿದ್ದೇವೆ ಏತಕ್ಕಾಗಿ ಕೆಲಸ ಮಾಡುತ್ತಿದ್ದೇವೆ ಎಂಬ ಪ್ರಶ್ನೆಗಳಿಗೆ ಮಾರ್ಗದರ್ಶನ ಸಿಗುವುದು ನಮ್ಮ-ನಮ್ಮ ಸಿದ್ಧಾಂತಗಳಿಂದ" ಎಂದ ಕಾಂ. ಬರ್ಧನ್ ಭೂ ಸುಧಾರಣೆಗಳನ್ನು ವಾಸ್ತವಗೊಳಿಸಿದ್ದು ಇಎಂಎಸ್‌ರ ಸಿದ್ಧಾಂತ ಎಂದರು. ಕೇರಳ ಯಾವ ಸಾಮಾಜಿಕ-ರಾಜಕೀಯ ಬೆಳವಣಿಗೆ ಗಳಿಗಾಗಿ ಹೆಸರಾಗಿದೆಯೋ ಅದು ಕೇವಲ ಇಎಂಎಸ್‌ರ ಆದರ್ಶವಾದದಿಂದಾಗಿ ಅಲ್ಲ, ಅವರು ಅನುಸರಿಸಿದ ಸಿದ್ಧಾಂತದಿಂದಾಗಿ ಎಂದು ಬರ್ಧನ್ ವಿವರಿಸಿದರು.

ಭಾಷಣ ಮಾಡಲು ಎದ್ದು ನಿಂತಾಗ ದುಃಖ ತಡೆಯಲಾರದೆ ಮುಖ್ಯಮಂತ್ರಿ ಇ.ಕೆ.ನಾಯನಾರ್ ಭೂಮಾಲಕರ ಪ್ರಾಬಲ್ಯವಿದ್ದ ರಾಜ್ಯದಲ್ಲಿ ಪಾಳೆಯಗಾರಿ ವ್ಯವಸ್ಥೆಯನ್ನು ಬದಲಿಸುವಲ್ಲಿ ಇಎಂಎಸ್‌ರ ಹೋರಾಟಗಳನ್ನು ನೆನಪಿಸಿಕೊಂಡರು. ಎಲ್.ಡಿ.ಎಫ್. ಸಂಯೋಜಕರಾದ ವಿ.ಎಸ್. ಅಚ್ಯುತಾನಂದನ್, ಕೇರಳದಲ್ಲಿ ಪ್ರತಿ ಪಕ್ಷನಾಯಕ ಎ.ಕೆ.ಆಂಟನಿ ಇ.ಎಂ. ಎಸ್.ರ ಮಹಾನ್ ವ್ಯಕ್ತಿತ್ವವನ್ನು ನೆನಪಿಸಿಕೊಂಡರು.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರ ಪಿಳ್ಳೆ, ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ ಯವರಲ್ಲದೆ, ಕರ್ನಾಟಕವನ್ನು ಪ್ರತಿನಿಧಿಸಿದ ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರ ರಾವ್‌ರನ್ನು ಸೇರಿದಂತೆ ವಿಭಿನ್ನ ರಾಜ್ಯಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.





ಎನ್ನೆ ನೇತಾವೆ, ಎನ್ನೆ ನೇತಾವೆ

ಆಕೆಯ ಹೆಸರು ಪಚಿ 'ಎನ್ನೆ ನೇತಾವೆ, ಎನ್ನೆ ನೇತಾವೆ (ನನ್ನ ಮುಂದಾಳುವೇ) ಎನ್ನುತ್ತಾ ಆಕೆ ಇ.ಎಂ.ಎಸ್. ಪಾರ್ಥಿವ ಶರೀರವನ್ನು ಮುಟ್ಟಿ ಬಿದ್ದು ಬಿದ್ದು ಅಳಲಾ ರಂಭಿಸಿದಳು. ಇ.ಎಂ.ಎಸ್.ರ ಅಂತಿಮ ದರ್ಶನ ನೋಡಲು ಇನ್ನೂ ಬಹಳಷ್ಟು ಜನ ಕಾದಿದ್ದರು. ಸ್ವಯಂಸೇವಕರು ಆಕೆಯನ್ನು ಮುಂದೆ ಹೋಗಲು ಹೇಳಿದರು. ಹೋದಳು, ಮತ್ತೆ ಸಾಲಿನಲ್ಲಿ ನಿಂತು ಬಂದಳು.

ಆಕೆ ತಿರುವನಂತಪುರದ ಪೌರ ಕಾರ್ಮಿಕಳು. ೧೯೫೭ ರಲ್ಲಿ ಇಎಂಎಸ್ ಮುಖ್ಯಮಂತ್ರಿಯಾದಂದಿನಿಂದ ಆಕೆ ತಿರುವನಂತಪುರದಲ್ಲಿ ಹಾಜರಾಗದ ಇಎಂಎಸ್ ಸಭೆಗಳೇ ಇಲ್ಲವಂತೆ. ಇಎಂಎಸ್ ವಿದೇಶ ಯಾತ್ರೆಗೆ ಹೋಗುವಾಗಲೆಲ್ಲಾ ಆಕೆ ಬಂದು ಬೀಳ್ಕೊಡುತ್ತಿದ್ದಳಂತೆ. ಮಾರ್ಚ್ ೨೦ ರಂದು ಕೊನೆಯ ವಿದಾಯ ಹೇಳುವಾಗ ಆಕೆಯ ದುಃಖ ವನ್ನು ಯಾರಾದರೂ ಊಹಿಸಿ ಕೊಳ್ಳಬಹುದು.

ಉತ್ಸಾಹ ಉಕ್ಕಿ ಹರಿದ ವಿಜಯೋತ್ಸವ ರ್‍ಯಾಲಿ

ತ್ರಿಪುರಾದ ಎಡರಂಗ ಸರಕಾರಕ್ಕೆ ದೃಢ ಬೆಂಬಲ ನೀಡುವ ಮೂಲಕ ದೇಶದಲ್ಲಿ ಎಡ-ಪ್ರಜಾಸತ್ತಾತ್ಮಕ-ಜಾತ್ಯಾತೀತ ಶಕ್ತಿಗಳನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಐತಿಹಾಸಿಕ ಪಾತ್ರವನ್ನು ನಿರ್ವಹಿಸಿ.....

ಇದು ತ್ರಿಪುರಾದ ಜನತೆಗೆ ಎಡರಂಗ ನಾಯಕರು ಕೊಟ್ಟಿರುವ ಕರೆ

ಸಂದರ್ಭ: ರಾಜ್ಯದಲ್ಲಿ ಎಡರಂಗಕ್ಕೆ ಮತ್ತೆ ಭಾರೀ ವಿಜಯ ಬಂದ ಪ್ರಯುಕ್ತ ನಡೆದ ಬೃಹತ್ ವಿಜಯೋತ್ಸವ ರ್‍ಯಾಲಿ.

ಮಾರ್ಚ್ 17 ರಂದು ರಾಜಧಾನಿ ಅಗರ್ತಲಾದ ಅಸ್ತಬಲ್ ಮೈದಾನದಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿಬಸು, ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್, ರಾಜ್ಯದ ಎಡರಂಗ ಸಂಚಾಲಕ ಹಾಗೂ ಪಕ್ಷದ ರಾಜ್ಯ ಕಾರ್ಯದರ್ಶಿ ವೈದ್ಯನಾಥ್ ಮಜುಂದಾರ್ ಮಾಜಿ ಮುಖ್ಯಮಂತ್ರಿ ದಶರಥ ದೇವ್ ಹಾಗೂ ಆರ್‌ಎಸ್‌ಪಿ, ಫಾರ್ವರ್ಡ್ ಬ್ಲಾಕ್ ಮತ್ತು ಸಿಪಿಐ ನಾಯಕರು ಭಾಷಣ ಮಾಡಿದರು.

ಕಳೆದ ಐದು ವರ್ಷಗಳಿಂದ ಸ್ಥಾಪಿತ ಹಿತಾಸಕ್ತರು ಎಡರಂಗದ ವಿರುದ್ಧ ಮಾಡುತ್ತಿದ್ದ ವಿಷಪೂರಿತ ಪ್ರಚಾರದ ನಡುವೆಯೂ ಎಲ್ಲಾ ಅಡ್ಡಿ ಆತಂಕಗಳನ್ನು ಎದುರಿಸಿ ಎಡರಂಗ ಗಳಿಸಿದ ವಿಜಯದ ಈ ರ್‍ಯಾಲಿ ರಾಜ್ಯದ ಶಾಂತಿಪ್ರಿಯ ಪ್ರಜಾಸತ್ತಾತ್ಮಕ ಮನೋಭಾವದ ಜನರ ಕ್ರಾಂತಿಕಾರಿ ಸ್ಫೂರ್ತಿಯ ಪರಾಕಾಷ್ಠೆ ಯಂತಿತ್ತು.

ಬಸು ಸಂತಸ

ಈ ಐತಿಹಾಸಿಕ ಸಂದರ್ಭದಲ್ಲಿ ಹಾಜರಿರಲು ತಮಗೆ ತುಂಬಾ ಸಂತೋಷ ವಾಗುತ್ತಿದೆ ಎಂದು ಜ್ಯೋತಿಬಸು ಹೇಳಿದರು. ಜನತೆಯ ಹಿತಾಸಕ್ತಿಗಳನ್ನು ಕಾಯುವ ದಿಸೆಯಲ್ಲಿ ಸಾಮೂಹಿಕ ಚಳುವಳಿಗಳನ್ನು ನಡೆಸುತ್ತಲೇ ಅದರ ಜತೆ ಜತೆಯಲ್ಲೇ ಜನಪರ ಆಡಳಿತ ನೀಡುವಲ್ಲಿ ಮಾದರಿಯನ್ನು ರೂಪಿಸಿರುವ ರಾಜ್ಯಗಳಾಗಿ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ನಮ್ಮ ದೇಶದಲ್ಲಿ ಹೊರಹೊಮ್ಮಿವೆ ಎಂದು ಅವರು ನುಡಿದರು.

ಒಂದು ಸರಳ ಜನ ವಿಭಾಗದ ತಪ್ಪು ತಿಳುವಳಿಕೆ ಹಾಗೂ ಸರಿಯಾದ ಸಂದೇಶವನ್ನು ಜನರಿಗೆ ತಲುಪಿಸುವಲ್ಲಿ ಎಡರಂಗದ ವೈಫಲ್ಯದಿಂದಾಗಿ ಮೂಲಭೂತವಾದಿ ಬಿಜೆಪಿ ಪಶ್ಚಿಮ ಬಂಗಾಳದಲ್ಲಿ ತನ್ನ ಖಾತೆಯನ್ನು ತೆರೆಯಲು ಯಶಸ್ವಿಯಾಗಿದೆ ಎಂದು ಅವರು ಒಪ್ಪಿಕೊಂಡರು.

ಎಡ-ಪ್ರಜಾಸತ್ತಾತ್ಮಕ-ಜಾತ್ಯಾತೀತ ಶಕ್ತಿಗಳ ನಿರೀಕ್ಷೆ ಹುಸಿಯಾಗಿ ಯಾರಿಗೂ ಬಹುಮತ ಸಿಗದ ಲೋಕಸಭೆ ಚುನಾವಣೆ ಫಲಿತಾಂಶಗಳನ್ನು ಪ್ರಸ್ತಾಪಿಸಿದ ಜ್ಯೋತಿಬಸು, ದೇಶದ ಭವಿಷ್ಯವನ್ನು ರೂಪಿಸಲೂ ಬಹುದಾದ ಅಥವಾ ನಾಶಪಡಿಸಲೂ ಬಹುದಾದ ಸಾಮರ್ಥ್ಯವುಳ್ಳ ಜನತೆ, ತಮ್ಮ ನಿಜವಾದ ಮಿತ್ರರಾರು ಶತ್ರುಗಳಾರು ಎಂಬುದನ್ನು ತಮ್ಮ ಸ್ವಂತ ಅನುಭವದಿಂದ ಕಲಿಯಲಿದ್ದಾರೆ ಎಂಬ ಆತ್ಮವಿಶ್ವಾಸ, ಆಶಯವನ್ನು ವ್ಯಕ್ತಪಡಿಸಿದರು.

ರಾಜಿಯಿಲ್ಲ

ಜನಪರ ನೀತಿಗಳ ವಿಚಾರದಲ್ಲಿ ಎಡರಂಗ ಯಾರಿಗೂ ತಲೆಬಾಗುವುದಿಲ್ಲ ಅಥವಾ ರಾಜಿ ಮಾಡಿಕೊಳ್ಳುವುದಿಲ್ಲ, ಸರಕಾರದ ಒಳಗೇ ಇರಲಿ, ಹೊರಗೇ ಇರಲಿ ಅಥವಾ ಸರಕಾರಕ್ಕೆ ಬೆಂಬಲ ನೀಡುವ ಸನ್ನಿವೇಶವಿರಲಿ ದೇಶಾದ್ಯಂತ ಸಾಮೂಹಿಕ ಚಳುವಳಿಗಳನ್ನು ನಡೆಸುವ ತನ್ನ ಕರ್ತವ್ಯವನ್ನು ಎಡರಂಗ ಕೈಬಿಡುವುದಿಲ್ಲ ಎಂದೂ ಬಸು ಘೋಷಿಸಿದರು.

ಎಷ್ಟೇ ಸಂಕಷ್ಟ ಬಂದರೂ ಜನತೆಯೊಂದಿಗೆ, ಜನತೆಗಾಗಿ ಎಡರಂಗ ಸವೆಸ ಬೇಕಾದ ಹಾದಿ ಬೇಕಾದಷ್ಟಿದೆ ಎಂಬುದನ್ನು ಅವರು ನೆನಪಿಸಿದರು.

ಎಡಪಂಥ ವಿರೋಧಿ ಪ್ರಚಾರ ಹಾಗೂ ಪಿತೂರಿಗಳ ಹೊರತಾಗಿಯೂ ನಾಲ್ಕನೇ ಬಾರಿಗೆ ರಾಜ್ಯದ ಎಡರಂಗದಲ್ಲಿ ವಿಶ್ವಾಸವನ್ನು ಪುನಃ ತೋರ್ಪಡಿಸಿದ್ದಕ್ಕಾಗಿ ರಾಜ್ಯದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಜನರನ್ನು ಅಭಿನಂದಿಸಿದರು.

ಪಾಠ ಕಲಿಯಲು ಮನವಿ

ಚುನಾವಣೆ ಬಹಿಷ್ಕಾರದ ಉಗ್ರಗಾಮಿಗಳ ಕರೆಯನ್ನು ತಿರಸ್ಕರಿಸಿದ ಜನತೆಯ ಪ್ರಜಾಸತ್ತಾತ್ಮಕ ಮನೋಭಾವನೆಯನ್ನು ಗಮನಿಸಿ ಉಗ್ರಗಾಮಿಗಳು ಅದರಿಂದ ಪಾಠ ಕಲಿಯಬೇಕು ಎಂದು ಮೂರನೇ ಎಡರಂಗ ಸರಕಾರದ ಮುಖ್ಯಮಂತ್ರಿಯಾಗಿದ್ದ ಹಿರಿಯ ನೇತಾರ ದಶರಥ ದೇವ್ ಹಾದಿತಪ್ಪಿದ ಉಗ್ರಗಾಮಿಗಳಿಗೆ ಕರೆ ಕೊಟ್ಟರು.

ಎಡರಂಗ ಸಂಚಾಲಕ ಹಾಗೂ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ವೈದ್ಯನಾಥ್ ಮಜುಂದಾರ್ ರ್‍ಯಾಲಿಯ ಅಧ್ಯಕ್ಷತೆ ವಹಿಸಿದ್ದರು. ಮೂರನೇ ಎಡರಂಗ ಸರಕಾರದ ಆಡಳಿತದ ಅವಧಿಯುದ್ದಕ್ಕೂ ಕಾಂಗ್ರೆಸ್(ಐ)-ಟಿಯುಜೆಎಸ್-ಟಿಎಸ್‌ವಿ ಕೂಟ ನಡೆಸಿದ ಕುಕೃತ್ಯಗಳನ್ನು ಅವರು ವಿವರಿಸಿದರು. ಇಂಥ ದುಷ್ಟ ಶಕ್ತಿಗಳ ವಿರುದ್ಧ ಇನ್ನಷ್ಟು ಎಚ್ಚರದಿಂದ ಇರುವಂತೆ ಅವರು ರಾಜ್ಯದ ಜನರಿಗೆ ಕರೆ ಕೊಟ್ಟರು.

ತನು-ಮನದ ಕೆಲಸ...

ಜನತೆ ಇಟ್ಟಿರುವ ವಿಶ್ವಾಸಕ್ಕೆ ಅನುಗುಣವಾಗಿ ತನು-ಮನದಿಂದ ಕೆಲಸ ಮಾಡುವೆ-

ದೇಶದ ಕೆಲವೇ ಅತಿ ಕಿರಿಯ ಮುಖ್ಯ ಮಂತ್ರಿಗಳಲ್ಲಿ ಒಬ್ಬರಾದ ಮಾಣಿಕ್ ಸರ್ಕಾರ್ ಹೇಳಿದ ಮಾತಿದು.

ತ್ರಿಪುರಾದ ನಾಲ್ಕನೇ ಎಡರಂಗ ಸರಕಾರದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ತಕ್ಷಣವೇ ರಾಜಭವನದ ಹೊರಗೆ ನೀಡಲಾದ ಸಾರ್ವಜನಿಕ ಸನ್ಮಾನದಲ್ಲಿ ಅವರು ಮಾತನಾಡಿದರು.

ಮೂರನೇ ಎಡರಂಗ ಸರಕಾರ ಆರಂಭಿಸಿದ ಕಾರ್ಯಗಳು ಗುರಿಮುಟ್ಟಲು ಎಲ್ಲಾ ಅಡ್ಡಿ ಆತಂಕಗಳ ನಡುವೆಯೂ ತಮ್ಮ ಸರಕಾರ ಕೆಲಸ ನಿರ್ವಹಿಸಲಿದೆ ಎಂದು ಮುಖ್ಯಮಂತ್ರಿಯಾಗಿ ಮಾಡಿದ ತಮ್ಮ ಪ್ರಥಮ ಭಾಷಣದಲ್ಲಿ ಮಾಣಿಕ್ ಸರ್ಕಾರ್ ಆಶ್ವಾಸನೆ ಕೊಟ್ಟರು.

ಇತ್ತ ರಾಜಭವನದ ಆವರಣದಲ್ಲಿ ಎಡರಂಗ ಸಚಿವ ಸಂಪುಟ ಪ್ರಮಾಣವಚನ ಸ್ವೀಕರಿಸುತ್ತಿದ್ದಾಗ ಅತ್ತ ಭವನದ ಹೊರಗಡೆ ಉತ್ಸಾಹದಿಂದ ತುಂಬಿ ತುಳುಕುತ್ತಿದ್ದ ಸಾವಿರಾರು ಅಭಿಮಾನಿಗಳ ಘೋಷಣೆ ಮುಗಿಲು ಮುಟ್ಟುತ್ತಿತ್ತು.

ಪ್ರಮಾಣವಚನ ಸಮಾರಂಭ ಮುಗಿದ ಮೇಲೆ ನಡೆದ ಸನ್ಮಾನ ಸಮಾರಂಭದಲ್ಲಿ ಮೊದಲು ಎಡರಂಗ ಸಂಚಾಲಕ ವೈದ್ಯನಾಥ ಮಜುಂದಾರ್ ಮಾತನಾಡಿದರು.

ಕಾಂಗ್ರೆಸ್ ಕೂಟದ ಕೊಲೆ ರಾಜಕೀಯ

ಈಚೆಗೆ ತ್ರಿಪುರಾ ವಿಧಾನಸಭೆಗೆ ನಡೆದ ಚುನಾವಣೆಗಳಲ್ಲಿ ಕೇಂದ್ರ ಸ್ಥಾನಗಳಲ್ಲಿ ತನಗೆ ಸಿಕ್ಕದ ವಿಜಯದಿಂದ ತಲೆ ತಿರುಗಿದಂತಾಗಿರುವ ಕಾಂಗ್ರೆಸ್ ಕೂಟ, ಬಂದೂಕು ಹಾಗೂ ಅಪಪ್ರಚಾರದ ಅಬ್ಬರಕ್ಕೆ ಸಿಕ್ಕ ಈ ತಾತ್ಕಾಲಿಕ ಜಯವೇ ಭಾರಿ ಎಂದು ಭಾವಿಸಿ ಇದೀಗ ಸಿಪಿಐ(ಎಂ) ಕಾರ್ಯಕರ್ತರು ಹಾಗೂ ಇತರರನ್ನು ಕೊಲ್ಲುವ ದುಸ್ಸಾಹಸಕ್ಕೆ ಇಳಿದಿದೆ.

ಚುನಾವಣೆ ಮುಗಿದ ಬೆನ್ನಲ್ಲೇ ರಾಜ್ಯದ ನಾನಾ ಭಾಗಗಳಲ್ಲಿ ಕಾಂಗ್ರೆಸ್(ಐ)-ಟಿಯುಜೆಎಸ್-ಟಿಎಸ್‌ವಿ ಕೂಟದವರು ಮಾಡಿದ ಹಲ್ಲೆಗಳಿಗೆ ಸಿಪಿಐ(ಎಂ)ನ ಮೂವರು ಕಾರ್ಯಕರ್ತರು ಬಲಿಯಾಗಿದ್ದಾರೆ. ಎಡರಂಗದ ಅನೇಕ ಬೆಂಬಲಿಗರು ಗಾಯಗೊಂಡಿದ್ದಾರೆ.

ಪಶ್ಚಿಮ ತ್ರಿಪುರಾದ ಬಧರ್‌ಘಾಟ್‌ನಲ್ಲಿ ಮಾರ್ಚ್ 4 ರಂದು ಕಾಂಗ್ರೆಸ್ ಗೂಂಡಾಗಳು ಸಚೀಂದ್ರ ನಾಮದಾಸ್ ಎಂಬ ಕಾರ್ಮಿಕನನ್ನು ಕೊಂದು ಹಾಕಿದರು. ಮಾರ್ಚ್ 7 ರಂದು ಧಲಾಯಿ ಜಿಲ್ಲೆಯ ಶಿಕಾರಿಬಾರಿಯಲ್ಲಿ ಸಚೀಂದ್ರ ರಿಯಾನ್‌ನನ್ನು ಕೊಲ್ಲಲಾಯಿತು. ಎಸ್‌ಎಲ್‌ಎಫ್‌ಟಿಯ ಬೆದರಿಕೆಗೂ ಜಗ್ಗದೆ ಸಿಪಿಐ(ಎಂ) ಪರವಾಗಿ ಕೆಲಸ ಮಾಡಿದ್ದೇ ರಿಯಾನ್‌ನ 'ಅಪರಾಧ'ವಾಗಿದೆ! ಪಶ್ಚಿಮ ತ್ರಿಪುರಾದ ಮಂಡಾಯಿಯಲ್ಲಿ ಮಾರ್ಚ್ 9 ರಂದು ಸಶಸ್ತ್ರ ಉಗ್ರಗಾಮಿಗಳು ಸಿಪಿಐ(ಎಂ) ಕಾರ್ಯಕರ್ತ ಅರುಣ ದೇವವರ್ಮರನ್ನು ಗುಂಡಿಟ್ಟು ಕೊಂದರು.

ಇನ್ನೂ ಅನೇಕ ಪ್ರಕರಣಗಳಲ್ಲಿ ಹಲವಾರು ಜನರು ಗಾಯಗೊಂಡಿದ್ದಾರೆ. ಇವುಲ್ಲರ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡುವ ಕನಿಷ್ಠ ಸೌಜನ್ಯವೂ ಇಲ್ಲದ ಪ್ರಜಾಪ್ರಭುತ್ವ ವಿರೋಧಿ-ಜನವಿರೋಧಿ ಶಕ್ತಿಗಳು ಹರಿಯಬಿಟ್ಟಿರುವ ಕರ್ಮಕಾಂಡದ ಆರಂಭವಷ್ಟೇ ಆಗಿದೆ.

ಕಳೆದ 5 ವರ್ಷಗಳಲ್ಲಿ ಈ ಶಕ್ತಿಗಳು ನಡೆಸಿದ ಎಲ್ಲಾ ಪಿತೂರಿಗಳನ್ನು ಸೋಲಿಸಿ ಮತ್ತೆ ಜನ-ಪರ ಆಡಳಿತದ ಎಡರಂಗವನ್ನು ಆಯ್ಕೆ ಮಾಡುವ ಅತ್ಯುನ್ನತ ಮಟ್ಟದ ರಾಜಕೀಯ ಪ್ರಜ್ಞಾವಂತಿಕೆಯನ್ನು ಮೆರೆದ ಈ ಪುಟ್ಟ ರಾಜ್ಯದ ಜನತೆ ಈಗಲೂ ಇಂಥ ಹೇಯ ಹುನ್ನಾರಗಳನ್ನು ಸೋಲಿಸುವಲ್ಲಿ ಯಶಸ್ವಿಯಾಗಲಿ ಎಂದು ಆಶಿಸೋಣ.

ದೇಶದೊಳಗೆ

ವಿಶ್ವ

ಬಿಜೆಪಿಯಿಂದ ಪಕ್ಷಾಂತರಕ್ಕೆ ಕಾನೂನುಬದ್ಧತೆ

ಅಧಿಕಾರಕ್ಕೆ ಬರಲು ಹಾಗೂ ಸಿಕ್ಕಿದ ಅಧಿಕಾರದ ಕುರ್ಚಿಗೆ ಅಂಟಿಕೊಳ್ಳಲು ನೈತಿಕತೆಯ ವಾರಸುದಾರ ತಾನೆಂದು ಬಡಾಯಿ ಕೊಚ್ಚಿಕೊಳ್ಳುವ ಭಾರತೀಯ ಜನತಾ ಪಕ್ಷ ಯಾವ ನೀಚ ಕೃತ್ಯಕ್ಕೂ ಇಳಿಯಲು ಹೇಸುವುದಿಲ್ಲ ಎನ್ನುವುದಕ್ಕೆ ಇತಿಹಾಸದ ಕಾಲಗರ್ಭವನ್ನೇನೂ ಬಗೆದು ನೋಡ ಬೇಕಾಗಿಲ್ಲ. ತೀರಾ ಈಚಿನ ಉದಾಹರಣೆಗಳೇ ನಮ್ಮ ಮುಂದಿವೆ. ಉತ್ತರ ಪ್ರದೇಶದ ಇತ್ತೀಚಿನ ವಿದ್ಯಮಾನ ಗಳೇ ಅದಕ್ಕೆ ಸಾಕ್ಷಿ.

ಎಲ್ಲವನ್ನು ಇಲ್ಲಿ ಮತ್ತೆ ಪ್ರಸ್ತಾಪಿಸು ವುದು ಬೇಡ. ಆದರೆ ಪ್ರಕರಣದ ಮುಂದುವರಿಕೆಯ ಪರಾಕಾಷ್ಠೆ ಎಂಬಂಥ ಒಂದು ಪ್ರಕರಣದ ವಿವರ ಇಲ್ಲಿದೆ.

ಕಲ್ಯಾಣ್ ಸಿಂಗ್ ಸರಕಾರ ಪಕ್ಷಾಂತರಿ ಗಳ ನೆರವಿನಿಂದ ನಡೆಯುತ್ತಿರುವ ಸರಕಾರ ವಷ್ಟೆ. ಕಾಂಗ್ರೆಸ್, ಜನತಾದಳ ಮತ್ತು ಬಹುಜನ ಸಮಾಜ ಪಕ್ಷದಿಂದ ಜಿಗಿದ ಸದಸ್ಯರ ಬೆಂಬಲದಿಂದ ಅದು 'ಉಸಿರಾ ಡುತ್ತಿದೆ'. ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಪಕ್ಷಾಂತರಿಗಳೇ ಅದರ ಪ್ರಮುಖ ಆಧಾರ ಸ್ತಂಭಗಳು. ಸರಕಾರಕ್ಕೆ ಬೆಂಬಲ ಕೊಟ್ಟ 19 ಬಿಎಸ್‌ಪಿ ಸದಸ್ಯರ ಪೈಕಿ ಮಂತ್ರಿ ಸ್ಥಾನಕೊಟ್ಟು ಬಿಜೆಪಿ ಅನೈತಿಕ ಮಾದರಿಯನ್ನು ಹಾಕಿ ಕೊಟ್ಟಿದೆ. ಇತರ ಪಕ್ಷಗಳ ಪಕ್ಷಾಂತರಿಗಳಿಗೂ ಅದು ಸಚಿವ ಸ್ಥಾನ ಕೊಟ್ಟಿದೆ.

ಕಳೆದ ವರ್ಷ ಅಕ್ಟೋಬರ್ 21 ರಂದು ಕಲ್ಯಾಣ್ ಸಿಂಗ್ ಸರಕಾರದ ವಿಶ್ವಾಸ ಮತದ ಸಂದರ್ಭದಲ್ಲಿ ಪಕ್ಷ ವಿಪ್ ಉಲ್ಲಂಘಿಸಿದ 12 ಸದಸ್ಯರು ಹಾಗೂ ಅನಂತರ ಪಕ್ಷಾಂತರ ಮಾಡಿದವರ ಸಹಿತ 19 ಜನರ ಸದಸ್ಯತ್ವವನ್ನು ಪಕ್ಷಾಂತರ ನಿಷೇಧ ಕಾನೂನಿನನ್ವಯ ಅನರ್ಹ ಗೊಳಿಸುವಂತೆ ಬಿಎಸ್‌ಪಿಯ ಅಂದಿನ ಶಾಸಕ ಪಕ್ಷ ನಾಯಕಿ ಮಾಯಾವತಿ ಸ್ಪೀಕರರಿಗೆ ಅರ್ಜಿ ಸಲ್ಲಿಸಿದ್ದರು.

ಬಿಎಸ್‌ಪಿಯುವರಾದ ಕೇಸರಿನಾಥ್ ತ್ರಿಪಾಠಿ ಉತ್ತರ ಪ್ರದೇಶದ ಅಸೆಂಬ್ಲಿಯ ಸ್ಪೀಕರ್. ಅನರ್ಹತೆ ಕೋರಿ ಸಲ್ಲಿಸಿದ ಅರ್ಜಿ ಯನ್ನು ಇತ್ಯರ್ಥಪಡಿಸುವುದನ್ನು ಮುಂದೂಡುತ್ತಾ ಬಂದಿದ್ದ ಅವರು ಕೊನೆಗೂ ಸುಮಾರು ಆರು ತಿಂಗಳ ನಂತರ ಮಾರ್ಚ್ 23 ರಂದು ತೀರ್ಪು ನೀಡಿದ್ದಾರೆ.

ಈ ತೀರ್ಪು ಬಿಜೆಪಿಯ ನೈಜ ಮುಖ ವನ್ನು ಅನಾವರಣಗೊಳಿಸಿದೆ. ಪಕ್ಷಾಂತರ ನಿಷೇಧ ಕಾನೂನಿನನ್ವಯ ತಪ್ಪಿತಸ್ಥ ಶಾಸಕರ ವಿರುದ್ಧ ಕ್ರಮಕೈಗೊಳ್ಳುವ ಬದಲು ಬಂಡಾಯ ಸಚಿವರಿಗೆ ಮಾನ್ಯತೆ ನೀಡುವ ಮೂಲಕ ಸ್ಪೀಕರ್ ತ್ರಿಪಾಠಿ ಪಕ್ಷಾಂತರಕ್ಕೆ ಪ್ರೋತ್ಸಾಹ ಹಾಗೂ ಪ್ರಚೋದನೆ ನೀಡಿದ್ದಾರೆ.

ಬಿಎಸ್‌ಪಿಯಲ್ಲಿ 67 ಶಾಸಕರಿದ್ದು ಮೂರನೇ ಒಂದರಷ್ಟು ಸದಸ್ಯರು ಹೊರ ಬಂದರೆ ಮಾತ್ರ ಅದಕ್ಕೆ ಕಾನೂನು ಬದ್ಧತೆ ಇರುತ್ತದೆ. ಹೀಗಾಗಿ ಪಕ್ಷಾಂತರ ಮಾಡಿದ 19 ಸದಸ್ಯರು ಸಹಜವಾಗಿಯೇ ಅನರ್ಹ ರಾಗಬೇಕಿತ್ತು. ಆದರೆ ನೈತಿಕತೆಯ, ನ್ಯಾಯ ಸಮ್ಮತತೆಯ ಅರ್ಥವನ್ನೇ ತನ್ನ ಶಬ್ದಕೋಶ ದಲ್ಲಿ ಮರೆತ ಬಿಜೆಪಿ ಪ್ರತಿನಿಧಿ ಎಲ್ಲಾ ಬಂಡುಕೋರರಿಗೆ ಮಾನ್ಯತೆ ಕೊಟ್ಟಿದ್ದಾರೆ.

ಕಾವಿಪಡೆಯ ಈ ಸ್ಪೀಕರ್ ಅರ್ಜಿ ದಾರರ ವಾದವನ್ನು ತಿರಸ್ಕರಿಸಿ ಪಕ್ಷಾಂತರಿ ಗಳ ಪರವಾಗಿ ಸ್ವತಃ ತಾವೇ ಮುತುವರ್ಜಿ ವಹಿಸಿ ಅವರಿಗೆ ಮನ್ನಣೆ ಕೊಟ್ಟಿರುವುದು ಈ ಪ್ರಕರಣದ ಇನ್ನೊಂದು ವಿಶೇಷಣೆ ಯಾಗಿದೆ.

23 ಕ್ಕೂ ಹೆಚ್ಚು ಶಾಸಕರು ಬಂಡು ಕೋರ ಜನತಾಂತ್ರಿಕ ಬಹುಜನ ಸಮಾಜ ಪಕ್ಷದ ಪರವಾಗಿ ಇರುವುದರಿಂದ ಬಿಎಸ್‌ಪಿ ಯಲ್ಲಿನ ಒಡಕಿಗೆ ನ್ಯಾಯ ಸಮ್ಮತತೆ ಇದೆ ಎಂದು ಸ್ಪೀಕರ್ ತನ್ನ ತೀರ್ಪಿನಲ್ಲಿ ಹೇಳಿದ್ದಾರೆ. ಅದೂ ಅಲ್ಲದೆ 1997 ಅಕ್ಟೋಬರ್ 21 ರ ಬಲಪರೀಕ್ಷೆ ವೇಳೆ ಬಿಎಸ್‌ಪಿ ಶಾಸಕರಿಗೆ ವಿಪ್ ಹೊರಡಿಸುವ ಅಧಿಕಾರ ಮಾಯಾವತಿಗೆ ಇತ್ತೆಂಬುದಕ್ಕೆ ಯಾವುದೇ ಪುರಾವೆ ಇಲ್ಲ ಎಂಬ ವಾದವನ್ನು ಅವರು ಮಂಡಿಸಿದ್ದಾರೆ!

ಜನವರಿಯಲ್ಲಿ ವಿಚಾರಣೆ ವೇಳೆ ತಮ್ಮ ವಾದ ಮಂಡಿಸಿದ ಜನತಾಂತ್ರಿಕ ಬಿಎಸ್‌ಪಿ ಯವರು ತಮಗೆ 26 ಶಾಸಕರ ಬೆಂಬಲ ವಿದೆ ಎಂದಿದ್ದರು. ಆದರೆ ಇದನ್ನು ಕನಿಷ್ಠ ಏಳು ಸದಸ್ಯರು ಪ್ರಶ್ನಿಸಿದ್ದು ತಾವು ಮೂಲ ಬಿಎಸ್‌ಪಿಯಲ್ಲೇ ಇದ್ದೇವೆ ಎಂದಿದ್ದಾರೆ. ಅಂದರೆ ಪಕ್ಷಾಂತರಿಗಳ ಸಂಖ್ಯೆ 19 ಕ್ಕೆ ಸೀಮಿತವಾಗಿದೆ. ಹೀಗಾಗಿ ಯಾವ ದೃಷ್ಟಿ ಯಲ್ಲಿ ನೋಡಿದರೂ ಈ 19 ಶಾಸಕರು ಅನರ್ಹ ರಾಗಲು ಅರ್ಹರೇ ಆಗಿದ್ದಾರೆ. ಈ ಹಗರಣ ದಲ್ಲಿ ಕಲ್ಯಾಣ್ ಸಿಂಗ್ ಸರಕಾರ ಅಲ್ಪಮತದ ಅಂಚಿಗೆ ಬರುವುದು ಖಚಿತ.

ಆದ್ದರಿಂದಲೇ ನಿಷ್ಪಕ್ಷಪಾತವಾಗಿ ವರ್ತಿಸ ಬೇಕಾದ ಸ್ಪೀಕರ್ ತಮ್ಮ ಹುದ್ದೆಯ ಘನತೆಯನ್ನು ಲೆಕ್ಕಿಸದೆ ಒಂದು ಪಕ್ಷದ ಅಡಿಯಾಳಿನಂತೆ ವರ್ತಿಸುವ ಪಾತ್ರ ವಹಿಸುವ ಮೂಲಕ ದೇಶದ ಸಂಸದೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಒಂದು ಕೆಟ್ಟ ಸಂಪ್ರದಾಯನ್ನು ಹಾಕಿ ಕೊಟ್ಟಿದ್ದಾರೆ. ಶೇಮ್ ಶೇಮ್ ಬಿಜೆಪಿ! ಶೇಮ್ ಶೇಮ್ ತ್ರಿಪಾಠಿ!!

"ಪ್ರಸ್ತುತದಲ್ಲಿ ಮೀಸಲಾತಿ ಅನಿವಾರ್ಯ"

ಮೀಸಲಾತಿ ತುಂಬಾ ಅನಿವಾರ್ಯ ಎಂದು ಎಸ್.ಎಫ್.ಐ ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್ ಹೇಳಿದರು. ಈಚೆಗೆ ಕೆ.ಎಂ. ದೊಡ್ಡಿಯಲ್ಲಿ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ. ನೇತೃತ್ವದಲ್ಲಿ ನಡೆದ ಮೀಸಲಾತಿ ಎಷ್ಟು ಸರಿ? ಎಂಬ ವಿಚಾರ ಸಂಕಿರಣದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡು ತ್ತಿದ್ದರು. ಮುಂದುವರಿದು ಮಾತನಾಡಿದ ಅವರು ಬಿ.ಜೆ.ಪಿ. ಯಂಥ ಕೆಲವು ಕೋಮು ವಾದಿ ಪಕ್ಷಗಳು ಮೀಸಲಾತಿ ಹೆಸರಲ್ಲಿ ರಾಜಕೀಯ ಮಾಡುತ್ತಿರುವುದನ್ನು ಅವರು ತೀವ್ರವಾಗಿ ಖಂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಭಾರತೀ ಕಾಲೇಜಿನ ಪ್ರಾಧ್ಯಾಪಕ ಪ್ರೊ|| ಪಿ.ವಿ. ಹನುಮಪ್ಪ ಅವರು ಇಂದಿನ ಪರಿಸ್ಥಿತಿ ಯಲ್ಲಿ ಮೀಸಲಾತಿಯ ಮುಂದುವರಿಕೆ ಅನಿ ವಾರ್ಯ, ಆದರೆ ಮೀಸಲಾತಿಯ ಪ್ರಯೋಜನ ಯಾರಿಗೆ ಸಿಗಬೇಕಿತ್ತೋ ಅವರಿಗೆ ಸಿಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದ ಅವರು ಇಂಥ ದುರ್ಬಳಕೆಯ ವಿರುದ್ಧ ಸರ್ಕಾರ ಕಟ್ಟೆಚ್ಚರ ವಹಿಸಬೇಕೆಂದರು ಬಿ.ಜಿ.ವಿ.ಎಸ್. ರಾಜ್ಯ ಸಹಕಾರ್ಯದರ್ಶಿ ಇ.ಬಸವರಾಜು ಡಿ.ವೈ.ಎಫ್.ಐ ಜಿಲ್ಲಾ ಸಂಚಾಲಕ ಕಾಂ|| ಪುಟ್ಟಮಾದು ಎಸ್.ಎಫ್.ಐ ಜಿಲ್ಲಾಧ್ಯಕ್ಷ ಕಾಂ|| ಟಿ.ಎಲ್. ಕೃಷ್ಣೇಗೌಡ ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡಿದರು. ಲಿಂಗರಾಜು ಸ್ವಾಗತಿಸಿ ರವಿ ವಂದನಾರ್ಪಣೆ ಮಾಡಿದರು

ಕಟ್ಟಿಗೆ ಕಾರಪೆಂಟರ್ ಕಾರ್ಮಿಕ ಸಂಘದ ರಚನೆ

ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲಿ ಸಿ.ಐ.ಟಿ.ಯು ಸಂಯೋಜಕ ಕಟ್ಟಿಗೆ ಕಾರ್ಮಿಕರ ಸಂಘವನ್ನು ಸಿ.ಐ.ಟಿ.ಯು ಜಿಲ್ಲಾ ಸಮಿತಿಯ ಸದಸ್ಯರಾದ ಕಾಂ|| ಪಿ.ಗಿರಿಯಪ್ಪರವರ ಅಧ್ಯಕ್ಷತೆ ಯಲ್ಲಿ ರಚಿಸಲಾಯಿತು. ಅಧ್ಯಕ್ಷರಾಗಿ ಶ್ರೀ ಸಕ ರೇಪ್ಪ, ಕಾರ್ಯದರ್ಶಿ ಯಾಗಿ ಹುಸೇನಪ್ಪ ತೆಗ್ಗಿನ ಹಳ್ಳಿ, ಉಪಾಧ್ಯಕ್ಷರಾಗಿ ಶಾಂತಯ್ಯ ಸ್ವಾಮಿ, ಸಹಾ ಕಾರ್ಯದರ್ಶಿಯಾಗಿ ಯುಸೂಫ್, ಖಜಾಂಚಿ ಯಾಗಿ ರಾಜಾಸಾಬ್ ಸಂಘಟನಾ ಕಾರ್ಯದರ್ಶಿ ಯಾಗಿ ಗೋವಿಂದಪ್ಪ ಮತ್ತು ಗೌರವ ಅಧ್ಯಕ್ಷರಾಗಿ ಪಿ. ಗಿರಿಯಪ್ಪ ಆಯ್ಕೆಯಾಗಿ ದ್ದಾರೆ. ಈ ಸಭೆಯಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದ ಕಾಂ|| ಮಲ್ಲಯ್ಯ ಜಾಲಹಳ್ಳಿ ಉಪಸ್ಥಿತರಿದ್ದು ಈ ಕಾರ್ಮಿಕರ ಸಂಘಕ್ಕೆ ಬೆಂಬಲ ಕೋರಿ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಬೇಕೆಂದು ಕರೆ ಕೊಟ್ಟರು.

.... ಮುಂದಾಳುವಿಗೆ ಶ್ರದ್ಧಾಂಜಲಿ

ಪುಟ 3 ರಿಂದ

ಈ ಸಭೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ವಿನೋಬಾ ಶ್ರೀನಿವಾಸ ಮೂರ್ತಿ, ಕಮ್ಯೂನಿಸ್ಟ್ ಮುಖಂಡರಾದ ಶ್ರೀನಿವಾಸರೆಡ್ಡಿ, ಪಕ್ಷದ ಸದಸ್ಯರು ಹಿತೈಷಿಗಳು ಮತ್ತಿತರರು ಭಾಗವಹಿಸಿದ್ದರು.

ತುಮಕೂರು

ಭಾರತ ದೇಶದ ಅಸಂಖ್ಯಾತ ಶೋಷಿತರ ದೀನ ದಲಿತರ ಅಭಿವೃದ್ಧಿಗೆ ಶ್ರಮಿಸಿದ ಭಾರತದ ವಿಮೋಚನಾ ಚಳುವಳಿ ಯಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡ ಹಾಗೂ ಎಡ ಚಳುವಳಿಯ ನೇತಾರ ಚಿಂತಕ, ಮುತ್ಸದ್ದಿ ಕಾಂ|| ಇ.ಎಂ.ಎಸ್ ರವರ ಬದುಕು ಅನು ಕರಣೀಯ ವಾಗಿದ್ದು, ಅವರ ಸರಳ ಸಜ್ಜನಿಕೆಯ ಜೀವನ ಎಂತಹವರಲ್ಲೂ ಆತ್ಮೀಯತೆ ಯನ್ನುಂಟು ಮಾಡುತ್ತದೆ ಎಂದು ಶ್ರೀಯುತ ಸಿ.ಯತಿರಾಜುರವರು ಅಭಿಪ್ರಾಯಪಟ್ಟರು.

ಅವರು ದಿ:20ರ ಸಂಜೆ ತುಮಕೂರು ನಗರದ ಪುರಭವನದ ಆವರಣದಲ್ಲಿ ಕಾಂ|| ಇ.ಎಂ.ಎಸ್ ಅಭಿಮಾನಿಗಳ ಬಳಗ ಏರ್ಪಡಿಸಿದ್ದ ಸಂತಾಪ ಸೂಚಕ ಸಭೆಯಲ್ಲಿ ಇ.ಎಂ.ಎಸ್‌ರ ಪರಿಚಯ ಮಾಡುತ್ತ ಮಾತನಾಡಿದರು.

ಭಾರತ ಮಣ್ಣಿನ ಲೆನಿನ್: ಕಾಂ|| ಇ.ಎಂ.ಎಸ್. ನಂಬೂದಿರಿ ಪಾಡ್‌ರವರು ಮಾರ್ಕ್ಸ್‌ವಾದವನ್ನು ಭಾರತದ ಪರಿಸ್ಥಿತಿಗೆ ಅನ್ವಯಿಸಿ, ಇಲ್ಲಿನ ಎಡ ಚಳುವಳಿ ಯನ್ನು ಕಟ್ಟಿ ಬೆಳೆಸಿದ ಅಪರೂಪ ಚೇತನ, ರಷ್ಯದ ಲೆನಿನ್‌ರ ಹಾಗೆ ಭಾರತದ ಲೆನಿನ್ ಇವರಾಗಿದ್ದರೆಂದು ಹಿರಿಯ ಕಾರ್ಮಿಕ ಮುಖಂಡ ಕಾಂ|| ಆರ್.ಕೆ. ನಾಯಕ್ ಅಭಿಪ್ರಾಯಪಟ್ಟರು. ಈ ಸಭೆಯನ್ನು ಉದ್ದೇಶಿಸಿ ಸಾಹಿತಿ ಶ್ರೀ.ವಿ.ಚಿಕ್ಕವೀರಯ್ಯ ರವರು ಮಾತನಾಡುತ್ತಾ. ಅಪಾರ ಸಾಮಾಜಿಕ ಕಾಳಜಿ ಹೋರಾಟದ ಅನುಭವಗಳನ್ನು ಹೊಂದಿದ್ದ ಹಾಗೂ ಚಾರಿತ್ರಿಕ ಪ್ರಜ್ಞೆಯನ್ನು ಹೊಂದಿದ್ದಂತಹ ಇವರು ಮೃತಪಟ್ಟಿದ್ದರಿಂದ ಬೌದ್ಧಿಕ ಜಗತ್ತಿಗೆ ಅಪಾರ ನಷ್ಟವುಂಟಾಗಿದೆ ಯೆಂದರು.

ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಂ|| ಮಹಮದ್ ದಸ್ತಗೀರ್‌ರವರು ಮಾತನಾಡಿ, ಕ್ರಾಂತಿಗೆ ಎಂದೂ ಸಾವಿಲ್ಲ, ಇ.ಎಂ.ಎಸ್ ರವರು ನಮ್ಮನ್ನಗಲಿದ್ದರೂ ಇವರು ಹಾಕಿಕೊಟ್ಟಿರುವ ಹಾದಿಯಲ್ಲಿ ನಾವು ಮತ್ತಷ್ಟು ಮುಂದುವರಿಯ ಬೇಕೆಂದು ಕರೆ ನೀಡಿದರು. ಅವರು ಕಟ್ಟ ಕಡೆಯವರೆಗೂ ಮಾರ್ಕ್ಸ್‌ವಾದದಲ್ಲಿ ಅಚಲ ನಂಬಿಕೆ ಹೊಂದಿದ್ದಲ್ಲದೆ ಮಾರ್ಕ್ಸ್‌ವಾದವನ್ನು ಭಾರತದ ಮಣ್ಣಿಗೆ ಹೊಂದುವಂತೆ ಸಾಕಷ್ಟು ಸಾಧನೆಗೆ ಶ್ರಮಿಸಿದರು ಎಂದು ತಿಳಿಸಿದರು.

ಸೈಯದ್ ಮುಜೀಬ್ ನಿರೂಪಿಸಿ, ಬಿ.ಉಮೇಶ ವಂದಿಸಿದರು. ಸಭೆಯಲ್ಲಿ ಒಂದು ನಿಮಿಷ ಕಾಲ ಮೌನ ಆಚರಿಸುವುದರ ಮೂಲಕ ಗೌರವ ಅರ್ಪಿಸಲಾಯಿತು. ಈ ಸಂತಾಪ ಸೂಚಕ ಸಭೆಯಲ್ಲಿ ಜಿಲ್ಲಾ ಬೀಡಿ ಕಾರ್ಮಿಕರ ಸಂಘ (ಸಿ.ಐ.ಟಿ.ಯು) ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ., ಸಿ.ಪಿ.ಐ(ಎಂ) ತುಮಕೂರು ಜಿಲ್ಲಾ ತಾಂತ್ರಿಕ ಸಂಸ್ಥೆಗಳ-ಬೋಧಕೇತರ ನೌಕರರ ಸಂಘ, ಆಟೋಚಾಲಕರ ಸಂಘ (ಎ.ಆರ್.ಡಿ.ಯು), ಎ.ಐ.ಟಿ.ಯು.ಸಿ, ಚಲನಾ, ಸಮುದಾಯ, ಜನರಲ್ ವರ್ಕರ್ಸ್ ಯೂನಿಯನ್ ಎಲ್.ಐ.ಸಿ, ಜಿ.ಐ.ಸಿ.ಯೂನಿಯನ್‌ನ ಪದಾಧಿಕಾರಿಗಳು ಭಾಗವಹಿಸಿದ್ದರು

ಉಡುಪಿ

ಇ.ಎಂ.ಎಸ್.ರ ನಿಧನದಿಂದಾಗಿ ಪಕ್ಷಕ್ಕೆ ಮತ್ತು ದೇಶಕ್ಕೆ ತುಂಬಲಾರದ ನಷ್ಟವುಂಟಾಗಿದೆ ಎಂದು ಉಡುಪಿ ತಾಲೂಕು ಕಮಿಟಿ ಶ್ರದ್ಧಾಂಜಲಿ ಸಲ್ಲಿಸಿತು.

ಹುಬ್ಬಳ್ಳಿಯಲ್ಲಿ ಶಾಂತಿ ನೆಲೆಸಲು ಕೋಮುವಾದಿ ವಾತಾವರಣ ಹೋಗಲಾಡಿಸಬೇಕು

ವರದಿ: ಸಿ.ಆರ್.ಭಟ್

ಹುಬ್ಬಳ್ಳಿಯಲ್ಲಿ ಹೋಳಿ ಹಬ್ಬದ ಆಚರಣೆಯ ಸಂದರ್ಭಗಳಲ್ಲಿ ಆಗಾಗ ಸಂಭವಿಸುತ್ತಿರುವ ಗುಂಪು ಘರ್ಷಣೆಗಳಿಂದಾಗಿ ನಗರದ ಶಾಂತಿಭಂಗವಾಗುತ್ತಿರುವುದನ್ನು ಖಾಯಂ ಆಗಿ ತಡೆಗಟ್ಟಲು ಇಲ್ಲಿಯ ಕೋಮುವಾದಿ ವಾತಾವರಣ ವನ್ನು ಹೋಗಲಾಡಿಸಬೇಕು ಎಂದು ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಛೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ ನಡೆದ ಶಾಂತಿ ಸಭೆಯಲ್ಲಿ ಸಿಪಿಐ(ಎಂ) ಧಾರವಾಡ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿ ಕರೆ ಕೊಟ್ಟರು. ಯಾವುದೇ ಗುಂಪು ಘರ್ಷಣೆಗಳು ಕೆಲವೇ ಕಿಡಿಗೇಡಿಗಳಿಂದ ಪ್ರಾರಂಭವಾಗುವುದಾದರೂ, ನಗರದ ಇತ್ತೀಚಿಗಿನ ವರ್ಷಗಳಲ್ಲಿ ಈದ್ಗಾ ಮೈದಾನದ ವಿವಾದದ ಮೂಲಕ ಬೆಳೆದು ಬಂದ ಕೋಮುವಾದಿ ವಾತಾವರಣದಿಂದಾಗಿ ಇಂತಹ ಗಲಭೆಗಳು ಶೀಘ್ರವಾಗಿ ಕೋಮು ಗಲಭೆಗಳ ಬಣ್ಣ ತಾಳುವುದೆಂದು ನಿತ್ಯಾನಂದ ಸ್ವಾಮಿ ತಮ್ಮ ಆತಂಕ ವ್ಯಕ್ತಪಡಿಸಿದರು. ಸಮಾಜಘಾತುಕ ಕಿಡಿಗೇಡಿಗಳನ್ನು ಶಾಂತಿಸಭೆಗಳಲ್ಲಿ ಖಂಡಿತ್ತಿರುವ ಕೆಲವು ರಾಜಕೀಯ ಪಕ್ಷಗಳು, ಹಿಂದಿನಿಂದ ಅವರ ಬೆನ್ನು ಚಪ್ಪರಿಸುತ್ತಿರುವ ದ್ವಿಮುಖ ನೀತಿಯನ್ನು ಅವರು ಖಂಡಿಸಿದರು.

ನಗರದ ಸೂಕ್ಷ್ಮ ಪ್ರದೇಶಗಳಲ್ಲಿ ಒಂದಾದ ಧಾಕಪ್ಪಗುಡಿ ಚೌಕದಲ್ಲಿ ಖಾಯಂ ಆಗಿ ಪೋಲೀಸ್ ಠಾಣೆ ಇದ್ದರೂ ಅಲ್ಲಿ ಪೋಲೀಸರೇ ಇರದಿರುವುದನ್ನು ನಿತ್ಯಾನಂದ ಸ್ವಾಮಿ ಟೀಕಿಸಿದರು. ಈ ಸಲ 18 ರಂದು ಸಂಜೆ ಅದೇ ಪ್ರದೇಶದಲ್ಲಿ ಹೋಳಿ ಮೆರವಣಿಗೆ ಹಾಗೂ ಕಾಮಣ್ಣನ ದಹನ ನಡೆಯುತ್ತಿದ್ದಾಗ ಮುಂಜಾಗ್ರತಾ ಕ್ರಮವಾಗಿ ಹೆಚ್ಚಿನ ಪೋಲೀಸ್ ಬಂದೋಬಸ್ತ್ ಇರದೇ ಇದ್ದುದೇ ಗುಂಪು ಘರ್ಷಣೆಗಳಿಗೆ ಮುಖ್ಯ ಕಾರಣ ಎಂದು ಸಭೆಯಲ್ಲಿ ಹಾಜರಿದ್ದ ಪೋಲೀಸ್ ಕಮಿಷನರ್ ಉಮಾಪತಿ ಅವರ ಗಮನ ಸೆಳೆದರು. ಇನ್ನು ಮುಂದೆಯಾದರೂ ಪೋಲೀಸ್ ಇಲಾಖೆ ಯವರು ಇಂತಹ ಸಂದರ್ಭಗಳಲ್ಲಿ ಜವಾಬ್ದಾರಿಕೆಯಿಂದ ಕಾರ್ಯನಿರ್ವಹಿಸಲು ಸಲಹೆ ಮಾಡಿದರು. ಗುಂಪು ಘರ್ಷಣೆಗಳಿಗೆ ಕಾರಣರಾದ ಕಿಡಿಗೇಡಿಗಳನ್ನು ಗುರುತಿಸಿ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳ ಬೇಕೆಂದರು. ದಿ. 18 ರಂದು ಮಧ್ಯರಾತ್ರಿ ಕಾಲಪೇಟೆಯಲ್ಲಿ ಹೊರ ಪ್ರದೇಶದಿಂದ ಬಂದಿದ್ದ ಪೋಲಿಸ್ ಪಡೆಯುವರು ಪಾನಮತ್ತರಾಗಿ ನಗರವಾಸಿಗಳ ಮನೆಗಳ ಮುಂದೆ ಬೆತ್ತಲೆ ಕುಣಿದಾಡಿದ ಮತ್ತು ಅಲ್ಪಸಂಖ್ಯಾತರ ಕೆಲವು ಮನೆಗಳಿಗೆ ಬಾಗಿಲು ಒಡೆದು ನುಗ್ಗಿ ಗಂಡಸರಿಗೆ, ಹೆಂಗಸರಿಗೆ, ಮಕ್ಕಳಿಗೆ, ಮುದುಕರಿಗೆ ಹೊಡೆದು ಬಡಿದು ಗಾಯಗೊಳಿಸಿದ, ಅವರ ಮನೆಗಳಲ್ಲಿರುವ ಟಿ.ವಿ., ಟೇಪ್ ರೆಕಾರ್ಡರ್, ಫೋನ್ ಇತ್ಯಾದಿಗಳನ್ನು ಒಡೆದು ಹಾಳು ಗೆಡವಿದ ದುರ್ಘಟನೆಗಳನ್ನು ನಿತ್ಯಾನಂದ ಸ್ವಾಮಿ ಖಂಡಿಸಿದರು. ತಪ್ಪಿತಸ್ಥ ಪೋಲೀಸರಿಗೆ ಕಠಿಣ ಶಿಕ್ಷೆ ವಿಧಿಸಲು ಮತ್ತು ಕಷ್ಟನಷ್ಟಗಳಿಗೆ ಒಳಗಾದ ನಾಗರಿಕರಿಗೆ ಸೂಕ್ತ ಪರಿಹಾರ ನೀಡಲು ಪೋಲೀಸ್ ಕಮಿಶನರ್‌ಗೆ ಒತ್ತಾಯಿಸಿದರು.

ಜಿಲ್ಲೆಯ ಉಸ್ತುವಾರಿ ಸಚಿವರಾದ ಎಸ್.ಎಸ್.ಪಾಟೀಲರ ಅಧ್ಯಕ್ಷತೆಯಲ್ಲಿ ಮತ್ತು ಮೂರು ಸಾವಿರ ಮಠದ ಸ್ವಾಮಿಗಳು ಭಾಗವಹಿಸಿದ್ದ ಶಾಂತಿಸಭೆ ಯಲ್ಲಿ ಶಾಸಕರು, ಸಂಸತ್ ಸದಸ್ಯರು, ಮಾಜಿ ಮಂತ್ರಿಗಳು ಹಾಗೂ ಶಾಸಕರು, ಮಹಾಪೌರರು, ಪುರಸಭಾ ಸದಸ್ಯರು, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಇತರರು ದೊಡ್ಡ ಸಂಖ್ಯೆಯಲ್ಲಿ ಹಾಜರಿದ್ದರು. ಸಿಪಿಐ(ಎಂ) ಪರವಾಗಿ ನಿತ್ಯಾನಂದ ಸ್ವಾಮಿ ಮತ್ತು ಸಿ.ಆರ್.ಭಟ್ ಸಭೆಯಲ್ಲಿ ಭಾಗವಹಿಸಿ ದ್ದರು. ಸಭೆ ಪ್ರಾರಂಭವಾಗುತ್ತಲೇ ಬಿಜೆಪಿ, ಕಾಂಗ್ರೆಸ್, ಜನತಾದಳದವರು ನಗರದಲ್ಲಿ ನಡೆದ ದುರ್ಘಟನೆಗಳ ಕುರಿತು ಆರೋಪ-ಪ್ರತ್ಯಾರೋಪಗಳಲ್ಲಿ ತೊಡಗಿದ್ದು, ಅದರಲ್ಲಿ ಬಿಜೆಪಿಯವರ ಕೈ ಮೇಲಾಗಿ ದೀರ್ಘ ಕಾಲದ ವರಗೆ ದಾಂಧಲೆ ನಡೆದು ಸಭೆಯ ಕಾರ್ಯಕಲಾಪಗಳು ಅಸ್ತವ್ಯಸ್ತಗೊಂಡವು. ನಂತರ ಪ್ರಕ್ಷುಬ್ಧ ವಾತಾವರಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಶಾಸಕ ಅಶೋಕ ಕಾಟ್ವೆ 'ಹೋಳಿ ಮೆರವಣಿಗೆ ನಡೆಸುವುದು ಹಿಂದುಗಳ ಧಾರ್ಮಿಕ ಹಕ್ಕು, ಅದನ್ನು ಯಾರು ತಡೆಯಲಾರರು, ಮುಸ್ಲಿಂರೂ ತಮ್ಮ ಹಬ್ಬಗಳನ್ನು ಆಚರಿಸುವಾಗ ದೊಡ್ಡ ಮೆರವಣಿಗೆಗಳನ್ನು ನಡೆಸುತಾರೆ...' ಎಂದು ಸವಾಲು ಎತ್ತಿ ಕಾಲುಕೆದರಿ ಜಗಳಕ್ಕೆ ಕರೆಯುವ ಧಾಟಿ ವಿಷಾದನೀಯವಾಗಿತ್ತು. ಗಲಭೆಗಳು ಏಕೆ ನಡೆಯುತ್ತಿವೆ, ಅವುಗಳನ್ನು ಹೋಗಲಾಡಿಸುವುದು ಹೇಗೆ ಎಂಬ ಕುರಿತು ಬಿಜೆಪಿ ಧುರೀಣರು ಚಿಂತಿಸು ವುದಿಲ್ಲ, ಗಲಭೆಗಳನ್ನು ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಹೇಗೆ ಬಳಸುವುದು ಎಂಬುದೇ ಅವರ ಕಾಳಜಿ ಆಗಿತ್ತೆಂದು ಕಂಡು ಬರುತ್ತಿತ್ತು. ಇನ್ನೊಂದೆಡೆ ಬಿಜೆಪಿ, ಕಾಂಗ್ರೆಸ್, ಜನತಾದಳದವರು ಮುಂದೆ ಶಾಂತಿ ಸಮಿತಿಗಳಲ್ಲಿ ರಾಜಕೀಯ ಪಕ್ಷದ ಪ್ರತಿನಿಧಿಗಳೇ ಇರಕೂಡದು, ಮೂರು ಸಾವಿರ ಮಠದ ಸ್ವಾಮಿಗಳೇ ಶಾಂತಿ ಸಮಿತಿಗಳ ಸದಸ್ಯರನ್ನು ಆರಿಸಲಿ ಎಂದು ಸಲಹೆ ಮಾಡುವ ಮೂಲಕ ತಮ್ಮ ಜವಾಬ್ದಾರಿಕೆಯನ್ನು ಜಾರಿಸಿಕೊಳ್ಳಲೂ ಪ್ರಯತ್ನಿಸುತ್ತಿದ್ದರು.

ದಿ. 20 ರಂದು ಸಂಜೆ ನಿತ್ಯಾನಂದ ಸ್ವಾಮಿ, ಸಿ.ಆರ್.ಭಟ್, ಬಿ.ಜಿ. ಗೊಂದಕರ್, ಕೆ.ಎಂ.ಸಿ.ಗೆ ಹೋಗಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಭೇಟಿ ಯಾಗಿ ಸಾಂತ್ವನ ಹೇಳಿದರು. ಶಿರಹಟ್ಟಿ ಯವರ ಮನೆಗೆ ಹೋಗಿ ಸಮಧಾನ ಹೇಳಿ ದರು. ಅವರು ಅನುಭವಿಸಿದ ಕಷ್ಟನಷ್ಟಗಳಿಗೆ ಸೂಕ್ತ ಪರಿಹಾರ ಪಡೆಯಲು ಪ್ರಯತ್ನಿಸು ವುದಾಗಿ ಭರವಸೆ ಇತ್ತರು.

ಗಲಭೆಗಳ ಕುರಿತು ಕಣ್ಣಾರೆ ಕಂಡವರಿಂದ

ದಾಕಪ್ಪ ಗುಡಿಯ ಮನೆ ಒಂದರಲ್ಲಿ ವಾಸಿಸುತ್ತಿರುವ ಸಿಪಿಐ(ಎಂ) ಜಿಲ್ಲಾ ಸಮಿತಿಯ ಸದಸ್ಯರೂ, ಸಿಐಟಿಯು ಜಿಲ್ಲಾ ಕಾರ್ಯದರ್ಶಿಗಳೂ ಆದ ಡಿ.ಜೆ. ಗೋಂದಕರ್ ದಿ 18 ರಂದು ಸಂಜೆ ದಾಕಪ್ಪ ಗುಡಿ ಚೌಕದಲ್ಲಿ ಹೋಳಿ ಹಬ್ಬದ ಆಚರಣೆಯ ಸಂದರ್ಭ ನಡೆದ ಗುಂಪು ಘರ್ಷಣೆಗಳನ್ನು ಕಣ್ಣಾರೆ ಕಂಡು ಇನ್ನಷ್ಟು ವಿವರಗಳನ್ನು ತಿಳಿಸಿರುತ್ತಾರೆ. ಆ ದಿನ ಸಂಜೆ ದಾಕಪ್ಪ ಗುಡಿ ಚೌಕದಲ್ಲಿ ಹೋಳಿ ಮೆರವಣಿಗೆಯನ್ನು ಸಮೀಪದ ಉರ್ದು ಶಾಲೆಯಲ್ಲಿ ಮಕ್ಕಳಿಗೆ ಪರೀಕ್ಷೆ ನಡೆಯುತ್ತಿ ದ್ದುದರಿಂದ ಆ ಪ್ರದೇಶ ಬಿಟ್ಟು ಮುಂದುವರಿ ಯಲು ಒಂದು ಗುಂಪು ಒತ್ತಾಯಿಸುತ್ತಿದ್ದು, ಹೋಳಿ ಆಚರಿಸುತ್ತಿದ್ದ ಗುಂಪು ಅದಕ್ಕೆ ಒಪ್ಪದ ಕಾರಣ, ವಾದ ವಿವಾದಗಳು ಪ್ರಾರಂಭವಾಗಿ, ಅನಿರೀಕ್ಷಿತವಾಗಿ ಕೆಲವು ಕಿಡಿಗೇಡಿ ಗಳು ಕಾಮಣ್ಣನ ಮೇಲೆ ಕಲ್ಲು ತೂರಾಟ ಪ್ರಾರಂಭಿಸಿ ದಾಗ ಎರಡು ಗಂಟೆಗಳ ಕಾಲ ಗುಂಪು ಘರ್ಷಣೆಗಳು ನಡೆದವು ಎಂದು ಗೋಂದಕರ್ ತಿಳಿಸುತ್ತಾರೆ. ಆ ಸಂದರ್ಭ ಪೋಲೀಸ್ ಬಂದೋಬಸ್ತ್ ಸಾಕಷ್ಟಿಲ್ಲದ ಕಾರಣ ಪರಿಸ್ಥಿತಿಯನ್ನು ಸಕಾಲದಲ್ಲಿ ನಿಯಂತ್ರಿಸಲಾಗಲಿಲ್ಲ ಎನ್ನುತ್ತಾರೆ. ಕಲ್ಲು ತೂರಾಟಗಳಿಂದ ಕೆಲಸ ಬಿಟ್ಟು ಮನೆಗಳಿಗೆ ಹೋಗುವವರು, ಮಕ್ಕಳನ್ನು ಶಾಲೆಯಿಂದ ಮನೆಗೆ ಕರೆದುಕೊಂಡು ಹೋಗುವವರು ಮತ್ತು ಸ್ಥಳದಲ್ಲಿರುವ ಪೋಲೀಸರು ಗಾಯಗೊಂಡರೆಂದು, ಅರ್ಧ ಗಂಟೆಕಾಲ ತಾನು ಎರಡೂ ಗುಂಪುಗಳಿಗೆ ಗಲಭೆಗಳನ್ನು ನಿಲ್ಲಿಸಲು ವಿನಂತಿಸಿದರೂ ಫಲಕಾರಿಯಾಗಲಿಲ್ಲ ಎಂದೂ ತಡವಾಗಿ ಬಂದ ಹೆಚ್ಚುವರಿ ಪೋಲೀಸ್ ಪಡೆ ಗುಂಡು ಹಾರಿಸಿ ಗಲಭೆ ನಿಲ್ಲಿಸಿ ಕಾಮದಹನ ಏರ್ಪಡಿಸಲು ನೆರವಾದರೆಂದೂ ನಂತರ ಗಾಯಗೊಂಡ ಜನರನ್ನು ಪೋಲೀಸರನ್ನು ತಮ್ಮ ಮನೆಯಲ್ಲಿ ಉಪಚರಿಸಿ ಆಸ್ಪತ್ರೆಗೆ ಕಳುಹಿಸಲು ನೆರವಾದು ದಾಗಿ ಗೊಂದಕರ್ ತಿಳಿಸಿದರು. ಅದೇ ದಿನ ಮಧ್ಯರಾತ್ರಿ ಬೇರೆ ಜಿಲ್ಲೆಯಿಂದ ಬಂದ ಕೆಲವು ಪೋಲಿಸರು ಕಾಲಪೇಟೆಯಲ್ಲಿ ಮನೆಗಳಿಗೆ ನುಗ್ಗಿ ನಡೆಸಿದ ದಾಂಧಲೆಗಳಿಂದ ಸಿಐಟಿಯು ಕಾರ್ಯಕರ್ತರಾದ ಯುಸುಫ್ ಶಿರಹಟ್ಟಿಯವರ ಮನೆಯಲ್ಲಿ ಮಹಿಳೆಯರು, ಮಕ್ಕಳು, ಮುದುಕರು ಗಾಯಗೊಂಡಿರುವರೆಂದು ಟಿ.ವಿ., ಟೇಪ್‌ರೆಕಾರ್ಡರ್, ಫೋಟೋಗಳು ಒಡೆದು ಹಾಳಾಗಿವೆ ಎಂದೂ ತಿಳಿಸಿದರು.

ಅಕ್ಕಿ ಆಲೂರು, ಹಾನಗಲ್‌ನಲ್ಲಿ ಗಲಭೆಗಳು

ಕಳೆದ ಒಂದು ವಾರದಿಂದ ಹಾವೇರಿ ಜಿಲ್ಲೆಯ ಅಕ್ಕಿ ಆಲೂರು ಮತ್ತು ಹಾನಗಲ್‌ನಲ್ಲಿ ಹೋಳಿ ಹಬ್ಬದ ಆಚರಣೆಯ ಸಂದರ್ಭ ಬಿಜೆಪಿಯ ಮತ್ತು ಸಂಘ ಪರಿವಾರದವರು ಅಲ್ಪಸಂಖ್ಯಾತ ಪೂಜಾಸ್ಥಳಗಳಿಗೆ ನುಗ್ಗಿ, ಅವರ ಪವಿತ್ರ ಗ್ರಂಥಗಳನ್ನು, ಪೂಜಾ ಸಾಮಗ್ರಿಗಳನ್ನು ಅಪಹರಿಸಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ ಎಂದು ವರದಿ ಆಗಿದೆ. ಅಕ್ಕಿ ಆಲೂರಿನ ಗ್ರಾಮ ಪಂಚಾಯತ್ ಸದಸ್ಯರೂ, ಸಿಪಿಐ(ಎಂ) ನ ಮುಖಂಡರೂ ಆದ ಫಕೀರಪ್ಪ ಹೋತನಹಳ್ಳಿ ಮತ್ತು ಎಂ.ಜನ್ನ ಈ ಪುಂಡಾಟಿಕೆಗಳು ಕೋಮುಗಲಭೆಗಳಾಗದಂತೆ ನೋಡಿಕೊಳ್ಳಲು ಶಾಂತಿ ಕಾಪಾಡಲು ಮಹತ್ವದ ಪಾತ್ರ ವಹಿಸುತ್ತಿದ್ದಾರೆ ಎಂದು ವರದಿ ಆಗಿದೆ. ಸಿಪಿಐ(ಎಂ) ನ ನಿತ್ಯಾನಂದ ಸ್ವಾಮಿ, ಸಿ.ಆರ್.ಭಟ್ ಮಹಾಂತೇಶ ದಿ. 21 ರಂದು ಅಕ್ಕಿ ಆಲೂರಿಗೆ ಹೋಗಿ ಅಲ್ಲಿಯ ಸಂಗಾತಿಗಳೊಂದಿಗೆ ಪರಿಸ್ಥಿತಿಯ ಸಮೀಕ್ಷೆ ನಡೆಸಿದ್ದಾರೆ.

ಯಶವಂತ ಪುರದಲ್ಲಿ ಎ.ಕೆ.ಜಿ. ದಿನಾಚರಣೆ



ಇಎಂಎಸ್ ಮತ್ತು ಎಕೆಜಿ

ಯಶವಂತಪುರದ ಎ.ಕೆ.ಜಿ.ಸ್ಮಾರಕ ಕೇಂದ್ರ ನಡೆಸುತ್ತಿರುವ ಎ.ಕೆ.ಜಿ. ವಾಚನಾಲಯ 22 ಮಾರ್ಚ್ 1998 ರಂದು ಸಂಜೆ 6 ಗಂಟೆಗೆ ಎ.ಕೆ.ಜಿ. ದಿನಾಚರಣೆಯನ್ನು ಆಚರಿಸಿತು. ಕಾರ್ಯದರ್ಶಿ ಶ್ರೀ ವೆಂಕಟಸುಬ್ಬಯ್ಯನವರು ಎಲ್ಲರನ್ನು ಸ್ವಾಗತಿಸಿದರು. ನಂತರ ದಿವಂಗತ ಕಾ. ಇ.ಎಂ.ಎಸ್ ಹಾಗೂ ಕಾಂ.ಎ.ಕೆ.ಜಿ. ಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತ ಸಭೆ 2 ನಿಮಿಷ ಮೌನವನ್ನು ತಾಳಿತು.

ನಂತರ ಡಾ|| ಪ್ರಕಾಶ್ ಸಿ.ರಾವ್ ಅವರು ಎ.ಕೆ.ಜಿ ಯವರ ಬಗ್ಗೆ ಮಾತನಾಡುತ್ತ ಸೂಕ್ತ ಶ್ರದ್ಧಾಂಜಲಿ ಎಂದರೆ ಗ್ರಂಥಾಲಯವನ್ನು ನವೀಕರಿಸುವುದು ಹಾಗೂ ಅನೇಕ ಕಾರ್ಯಕ್ರಮಗಳನ್ನು ಹೊಮ್ಮಿಕ್ಕೊಳ್ಳುವುದು ಎಂದರು. ಸಮಾಜದಲ್ಲಿನ ಘಟನೆಗಳನ್ನು ವಿಶ್ಲೇಷಿಸಿ ಜನಸಾಮಾನ್ಯರಿಗೆ ತಿಳಿಸುವ ಕಾರ್ಯಕ್ರಮವನ್ನು ಮೇಲಿಂದ ಮೇಲೆ ಹಮ್ಮಿ ಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಮುಖ್ಯಅತಿಥಿಯಾಗಿ ಬಂದಿದ್ದ ಖ್ಯಾತ ವಕೀಲ ಕಾಂ|| ನಾಗಮೋಹನ್ ದಾಸ್ ಅವರು ಕಾನೂನಿನಲ್ಲಿ ನವಚೈತನ್ಯ ಎಂಬ ವಿಷಯವಾದ ಭಾಷಣ ಮಾಡಿದರು. ನಂತರ ಕಾಂ ಚಟರ್ಜಿಯವರು ಕಾಂ|| ಗೋಪಾಲನ್ ಹಾಗೂ ಕಾಂ|| ಇ.ಎಂ.ಎಸ್ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತ ಕಾಂ ಮಾರ್ಕ್ಸ್ ಹಾಗೂ ಕಾಂ. ಎಂ.ಗೆಲ್ಸ್‌ಗೆ ಹೋಲಿಸಿದರು.

ಕಾಂ. ಜಗನ್ನಾಥ್ ನಂತರ ಮಾತನಾಡುತ್ತ ಕಾಂ|| ಗೋಪಾಲನ್ ಅವರನ್ನು ತಾವು ಕಂಡಂತೆ ವಿವರಿಸಿದರು. ಕಾಂ|| ಪಿ. ರಾಮಚಂದ್ರರಾವ್ ದೊದಲಿಗೆ ಕಾಂ.ಇ.ಎಂ.ಎಸ್ ಅವರ ಅಂತಿಮ ಸಂಸ್ಕಾರದ ವೇಳೆಯಲ್ಲಿ ನಡೆದ ಕಲವು ವಿಷಯಗಳನ್ನು ತಿಳಿಸಿದರು. ಕಾಂ|| ಗೋಪಾಲನ್ ಹಾಗೂ ಕಾ|| ಇ.ಎಂ.ಎಸ್ ರ ಜನಪರ ಹೋರಾಟದ ಬಗ್ಗೆ ಹೇಳುತ್ತ ಕಾಂ|| ಗೋಪಾಲನ್ ಹೋರಾಟದ ಆಚರಣೆಗೆ ಮಹತ್ವ ಕೊಟ್ಟಿದ್ದರೂ ತತ್ವವನ್ನು ಮರೆತಿರಲಿಲ್ಲ. ಹಾಗೆಯೇ ಕಾಂ|| ಇ. ಎಂ. ಎಸ್ ಒಬ್ಬ ಖ್ಯಾತ ಮಾರ್ಕ್ಸ್‌ವಾದಿ ತತ್ವಜ್ಞಾನಿಯಾಗಿದ್ದರೂ ಹೋರಾಟದ ಹಾದಿಯನ್ನು ಮರೆತಿರಲಿಲ್ಲ ಎಂದರು. ಕೊನೆಯಲ್ಲಿ ಕಾಂ. ರಾಜಪ್ಪನ್ ವಂದನಾರ್ಪಣೆ ಮಾಡಿದರು.

ಹುಮ್ನಾಬಾದ್ ತಾಲೂಕು ಗ್ರಾಮ ರೈತ ಘಟಕಗಳ ಪದಾಧಿಕಾರಿಗಳ ಆಯ್ಕೆ

ಹುಮನಾಬಾದ್ ತಾಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಸಭೆಗಳನ್ನು ನಡೆಸಿ ಆಯಾ ಗ್ರಾಮಗಳಲ್ಲಿ ಪ್ರಾಂತ ರೈತ ಸಂಘದ ಘಟಕ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸೋನಕೇರ ಘಟಕ

ಕಾಳಪ್ಪಾ ಅಧ್ಯಕ್ಷರು
ಘತ್ತುಪಟೇಲ ಉಪಾಧ್ಯಕ್ಷರು
ಶ್ರೀಪತಿರಾವ್ ಶಾಮರಾವ್ ಉಪಧ್ಯಾಕ್ಷರು
ಮನೋಹರರಾವ್ ಕಾರ್ಯದರ್ಶಿ
ಶರಣಪ್ಪಾ ಸಹ ಕಾರ್ಯದರ್ಶಿ
ರಾಜಪ್ಪಾ ಖಜಾಂಚಿ

ಘಟಕ ನೇಜವಾಳ:

ಶಿವಾಜಿರಾವ್ ಅಧ್ಯಕ್ಷರು
ಕಾಶಿನಾಥ ಉಪಾಧ್ಯಕ್ಷರು
ಸೋಪನರಾವ್ ಉಪಾಧ್ಯಕ್ಷರು
ದಾಮನರಾವ್ ಉಪಾಧ್ಯಕ್ಷರು
ಇಸ್ಮಾಯಿಲ್ ಉಪಾಧ್ಯಕ್ಷರು
ಧೂಳಪ್ಪಾ ಕಾರ್ಯದರ್ಶಿ
ವಿಜಯಕುಮಾರ ಸಹ ಕಾರ್ಯದಜರ್ಶಿ
ಸುರೇಶರೆಡ್ಡಿ ಸಹ ಕಾರ್ಯದರ್ಶಿ

ಘಟಕ ಗ್ರಾಮ ಹುಸ್ನೂಗೇರಾ

ತುಕಾರಾಮ್ ಅಧ್ಯಕ್ಷರು
ಬಾಬುರಾವ್ ಉಪಾಧ್ಯಕ್ಷರು
ಬಾಬುರಾವ್ ಮೈನಳ್ಳಿ ಉಪಾಧ್ಯಕ್ಷರು
ಅಶೋಕರೆಡ್ಡಿ ಕಾರ್ಯದರ್ಶಿ
ಗಣಪತಿ ಸಹ ಕಾರ್ಯದರ್ಶಿ
ಝುಗನಪ್ಪಾ ಖಜಾಂಚಿ

ರಾಜೀವ್ ಗಾಂಧಿ ಆರೋಗ್ಯ ವಿ.ವಿ: ಕೊನೆಗೂ ಬಂದ ವಿದ್ಯಾರ್ಥಿಪರ ತೀರ್ಪು

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ತಮ್ಮ ನ್ಯಾಯ ಸಮ್ಮತ ಬೇಡಿಕೆಗಳಿಗಾಗಿ 69 ದಿನಗಳ ಹೋರಾಟವನ್ನು ನಡೆಸಿದರು. ಧರಣಿ, ರಸ್ತೆ ತಡೆ, ವಾಹನಗಳ ಶುಚೀಕರಣ ರಾಜ್‌ಭವನ ಚಲೋ, ವಿ.ವಿ.ಗೆ ಮುತ್ತಿಗೆ ಇತ್ಯಾದಿ ಹೋರಾಟ ಗಳನ್ನು, ವೈದ್ಯಕೀಯ ಶಿಕ್ಷಣ ಸಚಿವರೊಂದಿಗೆ ಮಾತುಕತೆ, ರಾಜ್ಯಪಾಲರ ಆದೇಶದ ಮೇರೆಗೆ ಆರೋಗ್ಯ ಕಾರ್ಯದರ್ಶಿಗಳ ಮಧ್ಯಸ್ಥಿಕೆಯಲ್ಲಿ ಮಾತುಕತೆ ಇತ್ಯದಿಗಳನ್ನು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ನೇತೃತ್ವದ ರಾಜೀವ್ ಗಾಂಧಿ ಆರೋಗ್ಯ ವಿ.ವಿ. ವಿದ್ಯಾರ್ಥಿ ಗಳ ಕ್ರಿಯಾ ಸಮಿತಿಯಡಿಯಲ್ಲಿ ದಂತ ವೈದ್ಯಕೀಯ ಫಾರ್ಮಸಿ, ಪಿಸಿಯೋತೆರಾಪಿ, ನರ್ಸಿಂಗ್ ವಿಭಾಗಕ್ಕೆ ಸೇರಿದ 1000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಜ್ಯಾದ್ಯಂತ ನಡೆಸಿ ದರು. ಅನೇಕ ಬಾರಿ ಬಂಧನಕ್ಕೂ ಒಳಪಟ್ಟರು.

ಈ ಎಲ್ಲಾ ಸಂದರ್ಭದಲ್ಲೂ ವಿ.ವಿ.ಯ ಆಡಳಿತ ಹಾಗು ವಿ.ಸಿ.ಪರ ವಹಿಸಿದ ಸರ್ಕಾರ ವಿಶ್ವವಿದ್ಯಾಲಯಗಳು ಸ್ವಾಯುತ್ತ ಸಂಸ್ಥೆಗಳು ಅದರ ಆಡಳಿತದಲ್ಲಿ ನಾವು ಮಧ್ಯೆ ಪ್ರವೇಶಿಸಲು ಸಾಧ್ಯವಿಲ್ಲ ಎಂಬ ಮಾತುಗಳನಾಡುತ್ತಾ ವಿಶ್ವವಿದ್ಯಾಲಯ ಹಾಗು ಉಪಕುಲಪತಿಗಳ ಪರ ವಹಿಸಿದರು. ವಿದ್ಯಾರ್ಥಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ಅನುತ್ತೀರ್ಣಗೊಳಿಸಿದ ವಿ.ವಿ.ಯ ವಿದ್ಯಾರ್ಥಿ ವಿರೋಧಿ ಕ್ರಮಗಳನ್ನು ಬೆಂಬಲಿಸಿದರು.

ಸಮರ್ಪಕ ಆಡಳಿತ ವ್ಯವಸ್ಥೆಯಿಲ್ಲದೆ ಸರಿಯಾದ ಪಾಠ ಪ್ರವಚನ ಇರಲಿ ಪಠ್ಯಕ್ರಮವನ್ನು ಒಳಗೊಳ್ಳದೆ ದಿಢೀರನೆ ಪರೀಕ್ಷೆಗಳನ್ನು ನಡೆಸಿ ಪ್ರಶ್ನೆ ಪತ್ರಿಕೆಗಳಲ್ಲಿ ಪಠ್ಯಕ್ರಮದ ಹೊರಗಿನ ಪ್ರಶ್ನೆಗಳನ್ನು ಸರಿಯೆಂದು ಪ್ರತಿಪಾದಿಸುತ್ತಾ ವಿಶ್ವವಿದ್ಯಾಲಯವೇ ರೂಪಿಸಿದ ತೇರ್ಗಡೆ ನಿಯಮಾವಳಿಗಳನ್ನು ತಪ್ಪಾಗಿ ಅರ್ಥೈಸಿದ ವಿಶ್ವವಿದ್ಯಾಲಯದ ಕ್ರಮವನ್ನು ಬೆಂಬಲಿಸುತ್ತಾ 69 ದಿನಗಳ ಉದ್ದಕ್ಕೂ ವಿದ್ಯಾರ್ಥಿಗಳ ಹೋರಾಟವನ್ನು ಪುರಸ್ಕರಿಸದೆ ಕಡೆ ಪಕ್ಷ ಎಲ್ಲಾ ವಿ.ವಿ.ಗಳಲ್ಲಿರುವಂತೆ ಮರು ಮೌಲ್ಯಮಾಪನ ವ್ಯವಸ್ಥೆ ಕಲ್ಪಿಸಿ ಎಂಬ ಬೇಡಿಕೆಯನ್ನು ಸಾರಾ ಸಗಟಾಗಿ ತಿರಸ್ಕರಿಸಿ ಬೇಕಿದ್ದರೆ ಕೋರ್ಟಿಗೆ ಹೋಗಿ ಎಂಬ ಉಪ ಕುಲಪತಿ ಡಾ|| ಕಾಂತಾ ಜಾದವ್ ರವರ ಸವಾಲನ್ನು ಬೆಂಬಲಿಸಿದ, ರಾಜ್ಯ ಸರ್ಕಾರ ಹಾಗೂ ಕುಲಪತಿಗಳಾದ ರಾಜ್ಯಪಾಲರು ವಿದ್ಯಾರ್ಥಿಗಳ ಸಮಸ್ಯೆಯೊಂದಿಗೆ ಚೆಂಡಾಡಿದರು-ಅದಕ್ಕೆ ಅವರು ತಳೆದ ವಾದವೆಂದರೆ ಶೈಕ್ಷಣಿಕ ಸಂಸ್ಥೆಗಳ ಅದರಲ್ಲೂ ವಿಶ್ವವಿದ್ಯಾಲಯ ಸ್ವಾಯತ್ತತೆ.

ಈ ಹೋರಾಟಗಳ ಮಧ್ಯೆ ಮಾರ್ಚ್ ತಿಂಗಳ ಮಧ್ಯಂತರ ಪರೀಕ್ಷೆಗಳನ್ನು ನಿಗದಿಗೊಳಿಸಿದ ವಿಶ್ವವಿದ್ಯಾಲಯ ಅನುತ್ತೀರ್ಣರಾದ ವಿದ್ಯಾರ್ಥಿಗಳು ಅನುತ್ತೀರ್ಣರಾದ ತರಗತಿಗೆ ಮತ್ತೆ ಮರುಪ್ರವೇಶ ಪಡೆಯಬೇಕು, ಮರುಪರೀಕ್ಷೆ ತೆಗೆದುಕೊಳ್ಳಲು ಕನಿಷ್ಟ ಶೇ 80 ರಷ್ಟು ಹಾಜರಾತಿಯನ್ನು ಕಡ್ಡಾಯಗೊಳಿಸಿದ ಕಾರಣ ವಿದ್ಯಾರ್ಥಿಗಳು ಮತ್ತೆ ಪರೀಕ್ಷೆ ಕಟ್ಟಿ ತರಗತಿಗಳಿಗೆ ಹಾಜರಾಗಬೇಕಾಗಿ ಬಂದಿತು.

ಉಪಕುಲಪತಿಗಳ ಸವಾಲನ್ನು ಸ್ವೀಕರಿಸಿ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿ ಕ್ರಿಯಾ ಸಮಿತಿ ರಾಜ್ಯ ಉಚ್ಚ ನ್ಯಾಯಾಲಯದ ಬಾಗಿಲನ್ನು ಸಹ ತಟ್ಟಿದರು. ಕರ್ನಾಟಕ ರಾಜ್ಯ ಉಚ್ಚನ್ಯಾಯಾಲ ಯದ ಏಕ ಸದಸ್ಯ ನ್ಯಾಯ ಪೀಠವು, ವಿದ್ಯಾರ್ಥಿ ಗಳ ವಾದವನ್ನು ತಿರಸ್ಕರಿಸಿ ವಿಶ್ವವಿದ್ಯಾಲಯದ ಕ್ರಮವನ್ನು ಪುಷ್ಟೀಕರಿಸಿತು. ಇದರಿಂದ ಉತ್ತೇಜಿತರಾದ ಉಪಕುಲಪತಿ ಡಾ|| ಕಾಂತಾ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ|| ಶಂಕರ್ ನಾಯಕ್ ನ್ಯಾಯಾಲಯದ ತೀರ್ಪಿನೊಂದಿಗೆ ಸಮಸ್ಯೆ ಬಗೆಹರಿದಿದೆ. ವಿದ್ಯಾರ್ಥಿಗಳ ಬೇಡಿಕೆಗಳು ಆಧಾರರಹಿತ, ನ್ಯಾಯ ಸಮ್ಮತವಲ್ಲದವು ಎಂದು ಬಣ್ಣಿಸಿ ವಿದ್ಯಾರ್ಥಿ ಸಂಘಟನೆಗಳನ್ನು ದೂಷಿಸಿದರು.

ಏಕ ಸದಸ್ಯ ನ್ಯಾಯಪೀಠದ ತೀರ್ಪಿನ ಮೇಲೆ ವಿಭಾಗೀಯ ನ್ಯಾಯಪೀಠಕ್ಕೆ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೇಲ್ಮನವಿ ಸಲ್ಲಿಸಿದರು. ಮಾರ್ಚ್ 13 ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠವು ವಿದ್ಯಾರ್ಥಿಗಳ ಮೇಲ್ಮನವಿಯನ್ನು ಪುರಸ್ಕರಿಸಿ ವಿದ್ಯಾರ್ಥಿಗಳ ಪ್ರಮುಖ ಬೇಡಿಕೆಯಾದ ಉತ್ತೀರ್ಣತೆಯ ನಿಯಮಾವಳಿಯನ್ನು ವಿದ್ಯಾರ್ಥಿಗಳು ಅರ್ಥೈಸಿರುವ ರೀತಿಯಲ್ಲಿ ಅರ್ಥೈಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಈ ಹಿಂದೆ ನೀಡಿದ ಮೊದಲ ವರ್ಷದ ಫಲಿತಾಂಶವನ್ನು ಪುನರ್ ವಿಮರ್ಶಿಸಿ ಮರುಫಲಿತಾಂಶವನ್ನು ಘೋಷಿಸಬೇಕೆಂದು ವಿಶ್ವವಿದ್ಯಾಲಯಕ್ಕೆ ಆದೇಶವಿತ್ತಿದೆ. ನ್ಯಾಯಾಲಯದ ತೀರ್ಪಿನ ಮೇರೆಗೆ ಉತ್ತೀರ್ಣತೆಯ ನಿಯಮವನ್ನು ತಿಯರಿ ಮತ್ತು ಇಂಟರ್ನಲ್ಸ್ ಹಾಗು ಪ್ರಾಕ್ಟಿಕಲ್ ಮತ್ತು ಇಂಟರ್‌ನಲ್ಸ್ ಸೇರಿ ತಲಾ 90 ಅಂಕಗಳಿಗೆ 45 ಅಂಕಗಳನ್ನು ಪಡೆದರೆ, ಒಂದು ಪತ್ರಿಕೆಯಲ್ಲಿ ಸರಾಸರಿ ಶೇ. 50 ರಷ್ಟು ಅಂಕ ಪಡೆಯುವ ಮೂಲಕ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಾರೆ ಹಾಗಾಗಿ ಕೊನೆಗೂ ನ್ಯಾಯಾಲಯ ವಿದ್ಯಾರ್ಥಿಗಳ ವಾದವನ್ನು ಪುರಸ್ಕರಿಸಿ ನ್ಯಾಯ ಒದಗಿಸಿದೆ.

ದುರಾದೃಷ್ಟದ ವಿಷಯವೆಂದರೆ ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದಾಗಿ ನ್ಯಾಯಾಲಯದ ತೀರ್ಪಿನ ಪ್ರಕಾರ ಈಗಾಗಲೇ ಉತ್ತೀರ್ಣರಾಗಿರುವ ನೂರಾರು ವಿದ್ಯಾರ್ಥಿಗಳು ತೀರ್ಪು ಬಂದ ದಿನಗಳಲ್ಲಿ ಹಾಗೂ ಈಗ ಮರು ಪರೀಕ್ಷೆಯನ್ನು ಬರೆಯುವಂತಾ ಪರಿಸ್ಥಿತಿ ನಿರ್ಮಾಣವಾಗಿರುವದು. ಸರ್ಕಾರ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ವಿರೋಧಿ ಧೋರಣೆಯಿಂದಾಗಿ ರಾಜ್ಯಾದ್ಯಂತ ನೂರಾರು ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ 6 ತಿಂಗಳು ಗಳನ್ನು ಹಾಗೂ ಹಣವನ್ನು ಕಳೆದು ಕೊಳ್ಳಬೇಕಾಯಿತು.

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು ನ್ಯಾಯಾಲಯದ ತೀರ್ಪನ್ನು ಕೂಡಲೇ ಜಾರಿಮಾಡಬೇಕೆಂದು ಹಾಗೂ ವಿದ್ಯಾರ್ಥಿಗಳು ಈಗಾಗಲೇ ಕಳೆದುಕೊಂಡಿರುವ 6 ತಿಂಗಳ ಹಾಜರಾತಿಯನ್ನು ವಿದ್ಯಾರ್ಥಿಗಳಿಗೆ ನೀಡಬೇಕೆಂದು ವಿಶ್ವವಿದ್ಯಾಲಯವನ್ನು ಆಗ್ರಹಪಡಿಸುತ್ತದೆ. ಅದರ ಜೊತೆಯಲ್ಲಿಯೆ 2ನೇ ವರ್ಷದ ಪರೀಕ್ಷೆಗಳನ್ನು ನಿಗದಿತ ಸಮಯಕ್ಕಿಂತ ಮುಂದೆ ಹಾಕುವುದರ ಮೂಲಕ ಪರೀಕ್ಷೆಗಳಿಗೆ ತಯಾರಿ ನಡೆಸಲು ವಿದ್ಯಾರ್ಥಿ ಗಳಿಗೆ ಸೂಕ್ತ ಸಮಯಾವಕಾಶ ಕಲ್ಪಿಸಬೇಕಾಗಿ ವಿಶ್ವವಿದ್ಯಾಲಯ ಉಪ ಕುಲಪತಿ ಡಾ|| ಕಾಂತಾರವರನ್ನು ಒತ್ತಾಯಿಸುತ್ತದೆ.

"ಕುಟುಂಬ ಭಕ್ತಿ" ಕಾಂಗ್ರೆಸ್ಸನ್ನು ಉಳಿಸೀತೆ?

ಶ್ರೀಮತಿ ಸೋನಿಯಾಗಾಂಧಿಯವರು ಕಾಂಗ್ರೆಸ್ಸಿನ ಅತ್ಯುನ್ನತ ಸ್ಥಾನ ಅಲಂಕರಿಸಿರುವ ಬಗ್ಗೆ ಐಎನ್‌ಎನ್ ಸುದ್ಧಿ ಸಂಸ್ಥೆಯ ಮಾನಿನಿ ಚಟರ್ಜಿಯವರ ವಿಶ್ಲೇಷಣೆ

ಕಾಂಗ್ರೆಸ್(ಐ) ಅಧ್ಯಕ್ಷ ಸ್ಥಾನ ಹಾಗೂ ಕಾಂಗ್ರೆಸ್(ಐ) ಸಂಸದೀಯ ಪಕ್ಷದ(ಸಿ.ಪಿ.ಪಿ.) ಅಧ್ಯಕ್ಷ ಸ್ಥಾನಕ್ಕೆ ಸೋನಿಯಾಗಾಂಧಿ ನೇಮಕಗೊಂಡಿದ್ದಾರೆ. ಈ ದೇಶದಲ್ಲಿ ಅದೂ ಬಹುಶಃ ಇಡೀ ಜಗತ್ತಿನಲ್ಲಿ ಯಾರೇ ಆದರೂ ಯಾವುದೇ ಒಂದು ಪಕ್ಷದ ಅಧಿಕಾರ ಸ್ಥಾನವನ್ನು ಇಷ್ಟು ಶೀಘ್ರ ಗತಿಯಲ್ಲಿ ಗಳಿಸಿಕೊಂಡ ಪ್ರಕರಣ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಮದುವೆಯ ಸಂಬಂಧ ಹೊರತುಪಡಿಸಿ ರಾಜಕೀಯದೊಂದಿಗೆ ಇನ್ನಾವುದೇ ರೀತಿಯಲ್ಲಿ ನೇರ ಅನುಭವ ಅಥವಾ ಸಂಪರ್ಕ ಇಲ್ಲದ ವ್ಯಕ್ತಿಯೊಬ್ಬರು ಮೂರು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ 11 ವಾರಗಳಲ್ಲಿ ಪ್ರತಿಪಕ್ಷ ನಾಯಕತ್ವದ ಸ್ಥಾನ ಮತ್ತು ಭಾರತದ ಅತ್ಯಂತ ಹಳೆಯ ಹಾಗೂ ಈಚಿನವರೆಗಿನ ಅತ್ಯಂತ ದೊಡ್ಡ ರಾಜಕೀಯ ಸಂಘಟನೆಯ ನಾಯಕತ್ವವನ್ನು ಪಡೆದುಕೊಂಡಿದ್ದಾರೆ.

ಚುನಾವಣೆಯಲ್ಲಿ ತಾನು ಕಾಂಗ್ರೆಸ್ ಪಕದ ಪರವಾಗಿ ಪ್ರಚಾರ ನಡೆಸುವುದಾಗಿ ಸೋನಿಯಾಗಾಂಧಿ 1997 ಡಿಸೆಂಬರ್ 29ರಂದು ನಾಟಕೀಯ ಪ್ರಕಟಣೆ ನೀಡಿದ್ದರು. 1991ರ ಮೇ 21ರಂದು ರಾಜೀವಗಾಂಧಿಯವರ ಹತ್ಯೆ ನಡೆದ ತಮಿಳನಾಡಿನ ಶ್ರೀಪೆರಂಬುದೂರುನಿಂದ ಜನವರಿ 11ರಂದು ಆಕೆ ಪ್ರಚಾರವನ್ನು ಆರಂಭಿಸಿದ್ದರು. ಆದಾದ ಮೇಲೆ ಅವರು ದೇಶಾದ್ಯಂತ ಸಂಚರಿಸಿ ನೂರಾರು ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದ್ದರು. ಅವರ ಸಭೆಗಳಿಗೆ ದೊಡ್ಡ ಪ್ರಮಾಣದಲ್ಲಿ ಜನರು ಸೇರುತ್ತಿದ್ದರು. ಭಾರೀ ಚರ್ಚೆಗೆ ಒಳಗಾದ "ಸೋನಿಯಾ ಅಲೆ" ನಿಜವಾಗಿಯೂ ಪರಿಣಾಮ ಬೀರಿತೇ ಇಲ್ಲವೇ ಎನ್ನುವುದನ್ನು ಚುನಾವಣೆ ಫಲಿತಾಂಶದಿಂದ ಹೇಳಲಿಕ್ಕೆ ಬರುವುದಿಲ್ಲ. ಸೋನಿಯಾ ಪ್ರವೇಶದಿಂದ ಕಾಂಗ್ರೆಸ್ ಕಾರ್ಯಕರ್ತರಿಗೆ ಹೊಸ ಚೈತನ್ಯ ನೀಡಿತು, ಪಕ್ಷದಿಂದ ವಲಸೆ ಹೋಗುವುದು ನಿಂತಿತು ಎನ್ನುವುದು ಸ್ಪಷ್ಟ - ಆದರೆ ಅದು ಮತದಾರರ ಮೇಲೆ ಭಾರೀ ಪ್ರಭಾವನ್ನೇನೂ ಬೀರಲಿಲ್ಲ.

11ನೇ ಲೋಕಸಭೆಯಲ್ಲಿ ಕಾಂಗ್ರೆಸ್ ಹೊಂದಿದ್ದ 143 ಸ್ಥಾನಗಳು 1998ರ ಚುನಾವಣೆಯಲ್ಲಿ 140ಕ್ಕೆ ಇಳಿಯಿತು. ಹಾಗೂ ಅದರ ಮತಗಳ ಪಾಲು ಶೇಕಡ 28.8ರಿಂದ (1996) ಈ ಬಾರಿ ಶೇ. 25.4ಕ್ಕೆ ಇಳಿಯಿತು. ಎಲ್ಲಕ್ಕಿಂತ ಹೆಚ್ಚಾಗಿ ಸೋನಿಯಾ ಸಭೆಗಳಿಗೆ ಕಂಡುಬಂದ ಉತ್ಸಾಹದ ಪ್ರತಿಕ್ರಿಯೆ ಮತಗಳಾಗಿ ಪರಿವರ್ತನೆಗೊಳ್ಳಲಿಲ್ಲ.

ಸೋನಿಯಾ ಭೇಟಿ ಕೊಟ್ಟ 138 ಕ್ಷೇತ್ರಗಳ ಪೈಕಿ ಕೇವಲ 50ರಲ್ಲಿ ಕಾಂಗ್ರೆಸ್‌ಗೆ ಜಯ ಸಿಕ್ಕಿದೆ. ಮಹಾರಾಷ್ಟ್ರ, ರಾಜಾಸ್ಥಾನ ಮತ್ತಿತರ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ತೋರಿದ ಉತ್ತಮ ನಿರ್ವಹಣೆಗೂ ಸೋನಿಯಾ ಮ್ಯಾಜಿಕ್‌ಗೂ ಯಾವುದೇ ಸಂಬಂಧವಿಲ್ಲ. ಅದು ಹೆಚ್ಚಾಗಿ ಜನತೆಯಲ್ಲಿನ ವ್ಯವಸ್ಥೆ ವಿರೋಧಿ ಮನೋಭಾವ; ಹಾಗೂ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷವು ಸಮಾಜವಾದಿ ಪಕ್ಷ ಹಾಗೂ ರಿಪಬ್ಲಿಕನ್ ಪಕ್ಷದೊಂದಿಗೆ ಮಾಡಿಕೊಂಡ ಮೈತ್ರಿಯ ಫಲವಾಗಿದೆ.

ಹೀಗಿದ್ದಾಗ್ಯೂ, ಕಾಂಗ್ರೆಸ್‌ನ ಚುನಾವಣೆ ವಿಜಯಕ್ಕೆ ಸೋನಿಯಾರ 'ಭೀಮ ಪ್ರಯತ್ನಗಳೇ' ಕಾರಣ ಎಂದು ಕಾಂಗ್ರೆಸ್ ಕಾರ್ಯ ಸಮಿತಿ(ಸಿಡಬ್ಲ್ಯೂಸಿ) ಹೇಳಿದೆ. ಸೋನಿಯಾ ಅಲ್ಲಿದಿದ್ದರೆ ಕಾಂಗ್ರೆಸ್‌ಗೆ 140 ಸ್ಥಾನಗಳನ್ನು ಗೆಲ್ಲಲೂ ಆಗುತ್ತಿರಲಿಲ್ಲ ಎಂಬುದು ಕೆಲವು ವಲಯಗಳ ಅಭಿಪ್ರಾಯವಾಗಿದೆ.

ಇದು ಒಂದು ಚರ್ಚೆಯ ವಸ್ತುವಾಗಿ ಉಳಿಯಲಿದೆ. ವಾಸ್ತವವಾಗಿ ಕಾಂಗ್ರೆಸ್ ಪಕ್ಷದ ಗೆಲುವಿನ ಸ್ವರೂಪವನ್ನು ವಿಶ್ಲೇಷಿಸಿದರೆ ಬೇರೆ ಬೇರೆ ಕಡೆಗಳಲ್ಲಿ ಅದು ಹೊಂದಿದ್ದ ಮೈತ್ರಿಯೇ ಅದು ಹೆಚ್ಚು ಸ್ಥಾನಗಳನ್ನು ಪಡೆಯಲು ಕಾರಣ ಎನ್ನುವುದು ವೇದ್ಯವಾಗುತ್ತದೆ. ಈ ಪಕ್ಷ ಏಕಾಂಗಿಯಾಗಿ ಸ್ಪರ್ಧಿಸಿದ್ದ ದಕ್ಷಿಣ ಮತ್ತು ಉತ್ತರದಲ್ಲಿ ಕಳಪೆ ಪ್ರದರ್ಶನ ನೀಡಿದೆ. ಉದಾಹರಣೆಗೆ, ಸೋನಿಯಾ ಗಾಂಧಿ ಶ್ರೀಪೆರಂಬುದೂರಿನಲ್ಲಿ ಭಾವಾವೇಶಪೂರಿತ ಪ್ರಚಾರವನ್ನು ಪ್ರಾರಂಭಿಸಿದ್ದ ತಮಿಳುನಾಡಿನಲ್ಲಿ ಕಾಂಗ್ರೆಸ್‌ಗೆ ಒಂದು ಸ್ಥಾನವೂ ಸಿಕ್ಕಿಲ್ಲ. ನೆಹರೂ-ಗಾಂಧಿ ಕುಟುಂಬದ ರಾಜಕೀಯ ಕ್ಷೇತ್ರದ ಕೇಂದ್ರ ಸ್ಥಾನ ಎಂದು ಪರಿಗಣಿತವಾಗಿರುವ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಒಂದೇ ಒಂದು ಸ್ಥಾನ ಗೆಲ್ಲದೆ ಸೋತು ಹೈರಾಣಾಗಿದೆ.

ಆಕರ್ಷಕ ವ್ಯಕ್ತಿತ್ವದಿಂದ ಉದ್ಧಾರದ ನಂಬಿಕೆ

ವಿಶ್ಲೇಷಣೆ ಏನೇ ಇರಲಿ, 'ಕುಟುಂಬ' ಪಕ್ಷದ ನಾಯಕ ಸ್ಥಾನಕ್ಕೆ ಬಂದರೆ ಮಾತ್ರವೇ ಪಕ್ಷವನ್ನು ಉಳಿಸಬಹುದಾಗಿದೆ ಎಂಬುದು ಕಾಂಗ್ರೆಸ್ ಪಕ್ಷದ ನಂಬಿಕೆಯಾಗಿದೆ ಎನ್ನುವುದು ವಾಸ್ತವ ಸಂಗತಿ. ನರಸಿಂಹ ರಾವ್ ಮತ್ತು ಸೀತಾರಾಮ್ ಕೇಸರಿ ಅವರ ಸಪ್ಪೆ ನಾಯಕತ್ವದ ನಂತರ 'ಆಕರ್ಷಕ ವ್ಯಕ್ತಿತ್ವ' ತುಂಬಿದ ಸೋನಿಯಾ ಗಾಂಧಿ ಹಾಗೂ ಅಂದವಾಗಿ ಕಾಣುವ ಆಕೆಯ ಮಕ್ಕಳು ಅಧಃಪತನಗೊಳ್ಳುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ನವಚೈತನ್ಯ ಮತ್ತು ಸ್ಫೂರ್ತಿ ತುಂಬಬಲ್ಲರು ಎಂಬುದು ಕಾಂಗ್ರೆಸಿಗರ ಆಶಾವಾದವಾಗಿದೆ.

ಹೊಗಳುಭಟ್ಟಂಗಿತನ ಸರಾಸರಿ ಎಲ್ಲಾ ಕಾಂಗ್ರೆಸ್ ಸದಸ್ಯರ ಜಾಯಮಾನವಾಗಿದೆ. ತಮ್ಮ 'ಸರ್ವೋನ್ನತ ನಾಯಕಿ' ಯತ್ತ ಅವರೀಗ ತಲೆಬಾಗಿ ಕಾಯುತ್ತಿದ್ದಾರೆ. ಕಾಂಗ್ರೆಸಿಗರ ಈ ವ್ಯಕ್ತಿ ಪೂಜೆಯ ಪ್ರವೃತ್ತಿಯಿಂದಾಗಿಯೇ ಸೀತಾರಾಮ್ ಕೇಸರಿಯವರ ಅವಮಾನಕರ ನಿರ್ಗಮನದ ನಂತರ ಸೋನಿಯಾ ಕಾಂಗ್ರೆಸ್ ಅಧ್ಯಕ್ಷೆಯಾದರು ಹಾಗೂ ಸಂಸತ್ತಿನ ಯಾವುದೇ ಸದನದ ಸದಸ್ಯೆಯಾಗಿರದ ಆಕೆಗೆ ಸಿ.ಪಿ.ಪಿ. ಅಧ್ಯಕ್ಷ ಸ್ಥಾನ ಕೊಡಿಸಲು ಪಕ್ಷದ ಸಂವಿಧಾನವನ್ನು ಕ್ಷಿಪ್ರವಾಗಿ ತಿದ್ದುಪಡಿ ಮಾಡಲಾಯಿತು. ಕಾಂಗ್ರೆಸ್‌ಗೆ ಹೆಚ್ಚು ಸ್ಥಾನಗಳನ್ನು ಗಳಿಸಿಕೊಡುವಲ್ಲಿ ಶರದ್ ಪವಾರ್ ಯಶಸ್ವಿಯಾದರೂ ಅವರನ್ನು ಹೊಸ ಮೇಡಂನ 'ಕೃಪೆ'ಯಿಂದ ಕೇವಲ ಲೋಕಸಭೆಯಲ್ಲಿ ಪಕ್ಷದ ನಾಯಕನ ಸ್ಥಾನಕ್ಕೆ ಸೀಮಿತಗೊಳಿಸಲಾಗಿದೆ.

ಸವಾಲುಗಳು

ಕಾಂಗ್ರೆಸ್ ಪಕ್ಷ ಮಾತ್ರವಲ್ಲದೆ ಇಡೀ ದೇಶಕ್ಕೆ ನಿರ್ಣಾಯಕವಾಗಿರುವ ಕಾಲಘಟ್ಟದಲ್ಲಿ ಸೋನಿಯಾ ಉನ್ನತ ಸ್ಥಾನಕ್ಕೆ ಏರಿದ್ದಾರೆ. ಕಾಂಗ್ರೆಸ್ ಪಕ್ಷ ಈಗಲೂ ಜಾತ್ಯಾತೀತ ಶಕ್ತಿಗಳ ಅತಿದೊಡ್ಡ ಭಾಗವಾಗಿದೆ ಹಾಗೂ ಅದು ಈಗ ಅಧಿಕಾರ ಪಡೆದಿರುವ ಆರ್.ಎಸ್.ಎಸ್.-ಬಿ.ಜೆ.ಪಿ.-ವಿ.ಹೆಚ್.ಪಿ. ಕೂಟದ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಸೋನಿಯಾ ತನ್ನ ಪ್ರಚಾರ ಭಾಷಣದಲ್ಲಿ ಎಡ ಪಂಥಿಯರ ಸಹಿತ ಸಂಯುಕ್ತರಂಗದ ವಿರುದ್ಧ ಟೀಕೆ ಮಾಡಿದ್ದರೂ ಕೋಮುವಾದಿ ಶಕ್ತಿಗಳ ವಿರುದ್ಧವೇ ಅವರ ದಾಳಿ ಕೇಂದ್ರೀಕೃತವಾಗಿತ್ತು. ಮುಖ್ಯವಾಗಿ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರ ಭಾರತದ ಮೂಲಕ್ಕೆ ಬಿ.ಜೆ.ಪಿ. ಕೂಟದಿಂದ ಎದುರಾಗಿರುವ ಅಪಾಯಗಳ ಬಗ್ಗೆ ಸೋನಿಯಾ ತನ್ನ ಭಾಷಣಗಳಲ್ಲಿ ಎಚ್ಚರಿಕೆ ನೀಡುತ್ತಿದ್ದರು.

ಇಷ್ಟೊಂದು ತೀಕ್ಷ್ಣ ಪ್ರಚಾರ ನಡುವೆಯೂ ಬಿ.ಜೆ.ಪಿ. ಮತ್ತದರ ಮಿತ್ರಪಕ್ಷಗಳು ಮೇಲುಗೈ ಪಡೆದಿವೆ. ಅಷ್ಟಾದರೂ ಕಾಂಗ್ರೆಸ್ ಪಕ್ಷದ ಅವನತಿಗೆ ನಿಜವಾದ ಕಾರಣವನ್ನು ವಿಶ್ಲೇಷಿಸುವಲ್ಲಿ ಸೋನಿಯಾ ಆಸಕ್ತರಾಗಿಲ್ಲ. ಸರಿಯಾದ ನಾಯಕತ್ವ ಇಲ್ಲದಿರುವುದೇ, ಅಥವಾ ತನ್ನ ದಿವಂಗತ ಪತಿಯ ಕುಟುಂಬದವರ ನಾಯಕರ ಅನುಪಸ್ಥಿತಿಯೇ ಪಕ್ಷದ ದುಸ್ಥಿತಿಗೆ ಕಾರಣ ಎಂದು ಸೋನಿಯಾ ನಂಬಿರುವಂತೆ ಕಾಣುತ್ತದೆ. 'ಸೂಕ್ತ ನಾಯಕತ್ವ'ದಲ್ಲಿ ಕಾಂಗ್ರೆಸ್ ಪಕ್ಷ ಪುನರುಜ್ಜೀವನಗೊಳ್ಳುತ್ತದೆ ಎಂದು ಆಕೆ ಪ್ರಚಾರ ಭಾಷಣಗಳಲ್ಲಿ ಹೇಳುತ್ತಿದ್ದರು. ಈಗ, ಸ್ವತಃ ಆಕೆಯೇ ನಾಯಕ ಪಟ್ಟ ಪಡೆದಿರುವುದರಿಂದ 'ಸರಿಯಾದ' ನಾಯಕರು ಎಂಬ ಆಕೆಯ ಮಾತಿನ ಅರ್ಥವೇನಾಗಿತ್ತು ಎಂಬುದು ಸ್ಪಷ್ಟವಾಗಿದೆ.

ಆದರೆ ಇಂದಿರಾಗಾಂಧಿ ಅಥವಾ ರಾಜೀವ ಗಾಂಧಿಯವರ ದುರಂತ ಸಾವೇ ಪಕ್ಷದ ಅವನತಿಗೆ ಕಾರಣವಲ್ಲ. ಅದಕ್ಕಿಂತ ಗಹನವಾದ ಕಾರಣವಿದೆ.

ನಿಜ ಹೇಳಬೇಕೆಂದರೆ ತಥಾಕಥಿತ ಆಕರ್ಷಕ ವ್ಯಕ್ತಿತ್ವ ತುಂಬಿದ ಇಂದಿರಾ ಮತ್ತು ರಾಜೀವ್ ಗಾಂಧಿಯವರ ನಾಯಕತ್ವದಲ್ಲೇ ಅವಸಾನ ಆರಂಭವಾಗಿತ್ತು. ಪಕ್ಷ ಮತ್ತು ರಾಜಕಾರಣವನ್ನು ಪ್ರಜಾಸತ್ತಾತ್ಮಕಗೊಳಿಸುವಲ್ಲಿ ಕಾಂಗ್ರೆಸ್‌ನ ವೈಫಲ್ಯ, ದೇಶದ ಜನ ಸಮುದಾಯಕ್ಕೆ ಕೊಟ್ಟ ಆಶ್ವಾಸನೆಗಳನ್ನು ಪೂರೈಸುವಲ್ಲಿ ಅದರ ವೈಫಲ್ಯ ಮತ್ತು ದೇಶದ ಜಾತ್ಯಾತೀತ ಅಜೆಂಡಾಕ್ಕೆ ದೃಢವಾದ ಬದ್ಧತೆ ತೋರಲು ಅದು ವಿಫಲವಾಗಿದ್ದೇ ಅನೇಕ ವರ್ಷಗಳಿಂದ ಈ ಪಕ್ಷ ದುರ್ಬಲಗೊಳ್ಳುವ ಪ್ರಕ್ರಿಯೆ ಅನುಭವಿಸಲು ಕಾರಣವಾಗಿದೆ.

ಅಪಶಕುನದ ಆರಂಭ

ಜಾತ್ಯಾತೀತತೆ ಪ್ರಶ್ನೆಯನ್ನು ಸೋನಿಯಾ ಹೇಗೆ ನಿಭಾಯಿಸುತ್ತಾರೆ ಎನ್ನುವುದನ್ನು ಕಾದು ನೋಡಬೇಕಿದೆ. ಹಾಗೂ ಉದಾರೀಕರಣ ಅಜೆಂಡಾಕ್ಕೆ ಪಕ್ಷದ ಪೂರ್ಣಬೆಂಬಲವನ್ನು ಅವರು ಮುಂದುವರಿಸುತ್ತಾರೋ ಪುನರ್ ಪರಿಶೀಲಿಸುತ್ತಾರೋ ಎನ್ನುವುದನ್ನು ನೋಡಬೇಕಾಗಿದೆ.

ಆದರೆ ಪ್ರಜಾಸತ್ತಾತ್ಮಕ ಕಾರ್ಯ ನಿರ್ವಹಣೆಗೆ ಸಂಬಂಧಿಸಿ ಹೇಳುವುದಾದರೆ ಸೋನಿಯಾ ಅಪಶಕುನದ ಆರಂಭ ಮಾಡಿದ್ದಾರೆ. ಆಕೆ ಚಕ್ರವರ್ತಿನಿಯಂತೆ ವರ್ತಿಸತೊಡಗಿದ್ದಾರೆ. ತನ್ನ ನಿವಾಸದಲ್ಲಿ ಅದಾಲತ್‌ಗಳನ್ನು ನಡೆಸುತ್ತಿದ್ದಾರೆ. ಹಾಗೂ ಪಕ್ಷದ ಎಲ್ಲಾ ನೀತಿ ನಿರ್ಧಾರಗಳನ್ನು ತಾನೇ ಕೈಗೊಳ್ಳುತ್ತಿದ್ದಾರೆ. ಸೋನಿಯಾ ತನ್ನ ಅತ್ತೆಯ 'ಹಾದಿ'ಯಲ್ಲೇ ನಡೆಯತೊಡಗಿದ್ದಾರೆ. ಆದರೆ ಇಂದಿರಾ ಗಾಂಧಿಯಾದರೋ ಪಕ್ಷದ ಮೇಲೆ ಹಿಡಿತ ಸಾಧಿಸಲು ಅನೇಕ ವರ್ಷಗಳನ್ನು ತೆಗೆದುಕೊಂಡರು. ಅವರು ಆ ಸ್ಥಾನಕ್ಕೆ ಬರಲು ಭಾರೀ ಹೋರಾಟವನ್ನು ನಡೆಸಬೇಕಾಯಿತು. ಆದರೆ ಗೃಹಿಣಿ ಸ್ಥಾನದಿಂದ ಸುಪ್ರೀಂ ನಾಯಕಿಯ ಸ್ಥಾನವನ್ನು ಗಳಿಸುವ ಕಾರ್ಯವನ್ನು ಸೋನಿಯಾಗಾಂಧಿ ಆಶ್ಚರ್ಯಕರ ವೇಗದಲ್ಲಿ ಸಾಧಿಸಿದರು.


ಮದುವೆ ಮೂಲಕ ನೆಹರೂ-ಗಾಂಧಿ ಕುಟುಂಬದೊಂದಿಗೆ ತನಗಿರುವ ಸಂಬಂಧವನ್ನೇ ರಾಜಕಾರಣದಲ್ಲಿ ಬಂಡವಾಳ ಮಾಡಿಕೊಂಡ ಸೋನಿಯಾ ಕಾಂಗ್ರೆಸ್ ಸರಕಾರಗಳ ಸಾಧನೆಗಳೂ ತನ್ನ ಕುಟುಂಬದ ಸಾಧನೆಗಳಂತೆ ಪ್ರಚಾರ ಮಾಡಿದರು. ಇನ್ನೊಂದು ಅಂಶವೆಂದರೆ ಸೋನಿಯಾ ಪ್ರಚಾರ ಸಭೆಗಳಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರಿಗೆ ಅಂಥ ಸ್ಥಾನಮಾನವೇನು ಸಿಗಲಿಲ್ಲ. ಅದೆಲ್ಲ ಸಿಕ್ಕಿದ್ದು ಆಕೆಯ ಮಗಳು ಮತ್ತು ಮಗನಿಗೆ; ಹಾಗೂ ಕೆಲವೊಮ್ಮೆ ಆಕೆಯ ಅಳಿಯನೂ ಮಿಂಚಿದ.

ಆದರೆ, ಕಾಂಗ್ರೆಸ್ ಪಕ್ಷವನ್ನು ಪುನರುಜ್ಜೀವನಗೊಳಿಸಲು ಹಾಗೂ ಜಾತ್ಯಾತೀತ ಶಕ್ತಿಗಳಿಗೆ ನವಚೈತನ್ಯ ತುಂಬಲು ಕುಟುಂಬ ಪೂಜೆ ಯಾವ ರೀತಿಯಿಂದಲೂ ಸಹಾಯಕವಾಗುವುದಿಲ್ಲ. ಕಾಂಗ್ರೆಸ್ ಪಕ್ಷ ಗಂಭೀರವಾಗಿ ತನ್ನನ್ನು ತಾನು ಪುನರ್‌ರಚಿಸಿಕೊಳ್ಳಬೇಕು. ಹಾಗೂ ನೀತಿಗಳನ್ನು ಬದಲಾಯಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಸರಕಾರದಲ್ಲೇ ಆಗಲಿ ಪ್ರತಿಪಕ್ಷದಲ್ಲೇ ಆಗಲಿ - ಒಂದೇ ಪಕ್ಷದ ಪ್ರಾಬಲ್ಯದ ಕಾಲ ಮುಗಿದುಹೋಯಿತು ಎನ್ನುವುದನ್ನು ಕಾಂಗ್ರೆಸ್ ಪಕ್ಷ ಅರಿಯಬೇಕು. ಮಿತ್ರರನ್ನು ಗಳಿಸಲು, ಹಾಗೂ ಅವರನ್ನು ಅಡಿಯಾಳುಗಳಂತೆ ಅಲ್ಲ-ಬದಲಾಗಿ ಸಮಾನರಂತೆ ಗೌರವಿಸಲು ಕಲಿಯಬೇಕು. ಹಾಗೆ ಆಗಬೇಕಾದರೆ ಸ್ವತಃ ಸೋನಿಯಾ ಗಾಂಧಿಯವರೇ ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸುವ ಕಲೆಯನ್ನು ಮೊದಲು ಕಲಿತುಕೊಳ್ಳಬೇಕು. 'ಸರ್ವೋನ್ನತ ನಾಯಕರ' ಯುಗ ಮುಗಿದು ಹೋಗಿರುವುದರಿಂದ ಹಳೆ ಶೈಲಿಯ ಕಾರ್ಯವೈಖರಿಯಿಂದ ಆಕೆ ಕಾಂಗ್ರೆಸನ್ನು ಪುನರುಜ್ಜೀವನಗೊಳಿಸಲಾರರು.

ಅನು: ವಿಶ್ವ

ವಾರದ ವ್ಯಂಗ್ಯ ಚಿತ್ರ

ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್




ಮತ್ತೊಂದು ಮುಖವಾಡ......

ಸಿಪಿಐ(ಎಂ) ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರೆಸಿ' ಸಂಪಾದಕೀಯ

ಬಿಜೆಪಿ ಈಗ ಇನ್ನೊಂದು ಮುಖವಾಡ ಹಾಕಿಕೊಂಡಿದೆ. ಅದು ತನ್ನ ಮಿತ್ರಪಕ್ಷಗಳೊಂದಿಗೆ ಪ್ರಕಟಿಸಿದ 'ರಾಷ್ಟ್ರೀಯ ಅಜೆಂಡಾ'ದಲ್ಲಿ ತುಂಬಿರುವ ವಿರೋಧಾಭಾಸಗಳು ಹಾಗೂ ಚರ್ವಿತಚರ್ವಣಗಳ ನಡುವೆ, ಮೋಸದ ರಾಜಿಗಳ ನಡುವೆ ಕಾಣುವ ಒಂದು ಅನಿಷ್ಟಕಾರಿ ಲಕ್ಷಣವೆಂದರೆ ಭಾರತದ ಸಂವಿಧಾನವನ್ನು ವಿಮರ್ಶಿಸಲು ಒಂದು ಆಯೋಗ ನೇಮಿಸಲಾಗುವುದೆಂಬ ಘೋಷಣೆ. ಇದು ಧರ್ಮನಿರಪೇಕ್ಷ ಪ್ರಜಾ ಸತ್ತಾತ್ಮಕ ಗಣತಂತ್ರಕ್ಕೊಂದು ಅಪಾಯಕಾರಿ ಬೆಳವಣಿಗೆ. ಏಕೆಂದರೆ ಬಿಜೆಪಿ ಹಾಗೂ ಅದರ ಗುರು ಆರ್.ಎಸ್.ಎಸ್. ಇದುವರೆಗೂ ಭಾರತೀಯ ಸಂವಿಧಾನ 'ಅಹಿಂದೂ ಸಂವಿಧಾನ' ಎಂದು ಹೇಳಿಕೊಂಡು ಬಂದಿವೆ. ಇತ್ತೀಚೆಗೆ ಸುಪ್ರೀಂಕೋರ್ಟ್ ಅದರ ಮೂಲಭೂತ ಲಕ್ಷಣ ಎಂದು ಎತ್ತಿಹಿಡಿದ ಧರ್ಮನಿರಪೇಕ್ಷ ಅಡಿಗಲ್ಲನ್ನು ಅವು ಸದಾ ನಿಸ್ಸಂದಿಗ್ಧವಾಗಿ ವಿರೋಧಿಸಿಕೊಂಡು ಬಂದಿವೆ. ಧರ್ಮನಿರಪೇಕ್ಷತೆಯ ವಿರುದ್ಧ ಇಂತಹ ಕರ್ಕಶ ವಿರೋಧ ಹಿನ್ನೆಲೆಯಲ್ಲಿ ಸಂವಿಧಾನದ ವಿಮರ್ಶೆಗೊಂದು ಸಮಿತಿ ರಚಿಸುವ ನಿಜ ಉದ್ದೇಶ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸುವ ಬಿಜೆಪಿ- ಆರ್‌ಎಸ್‌ಎಸ್ ನ ಮರೆಯಲ್ಲಿರುವ ಅಜೆಂಡಾವನ್ನು ಕ್ರಮೇಣ ತೆರೆದಿಡುವುದೇ ಆಗಿದೆಯೆಂದು ಕಾಣುತ್ತದೆ.


370ನೇ ಕಲಮಿನ ಬಗ್ಗೆ ಬಿಜೆಪಿಯದ್ದು ಕರ್ಣಕಠೋರ ವಿರೋಧ. ಅಷ್ಟೇ ಅಲ್ಲ ಅದು ರಾಜ್ಯಗಳ ಭಾಷಾವಾರು ವಿಂಗಡಣೆಯನ್ನು ವಿರೋಧಿಸಿರುವ ಪಕ್ಷ; ಅಲ್ಪ ಸಂಖ್ಯಾತರಿಗೆ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ, ಅವುಗಳ ಆಡಳಿತ ನಡೆಸುವ ಹಕ್ಕು ನೀಡುವ 30ನೇ ಕಲಮನ್ನು ಅದು ವಿರೋಧಿಸುತ್ತದೆ. ಒಟ್ಟಾರೆಯಾಗಿ ನಮ್ಮ ಗಣತಂತ್ರದ ಧರ್ಮನಿರಪೇಕ್ಷ ಸತ್ವಗಳನ್ನೆಲ್ಲಾ ವಿರೋಧಿಸುವ ಪಕ್ಷ ಅದು. ಭಾರತೀಯ ಸಂವಿಧಾನದ ಮೂಲಾಧಾರದ ಮೇಲೆ ಈ ರೀತಿ ದಾಳಿ ಮಾಡುವುದೇ ಈ 'ರಾಷ್ಟ್ರೀಯ ಅಜೆಂಡಾ' ಮರೆಮಾಚಿರುವ ಒಂದು ಪ್ರಮುಖ ನೀತಿ.

ಹಿಟ್ಲರ್ ಕೂಡಾ 'ರಾಷ್ಟ್ರೀಯ ಸಮಾಜವಾದ'ದ ಮುಖವಾಡ ಧರಿಸಿ ಜನಬೆಂಬಲ ಗಳಿಸಿದ ಎಂಬ ಸಂಗತಿಯನ್ನು ಇಲ್ಲಿ ನೆನಪಿಸಿಕೊಳ್ಳುವುದು ಅಪ್ರಸ್ತುತವಾಗಲಾರದು, ಆತ ಅಧಿಕಾರ ವಹಿಸಿಕೊಂಡ ಕೂಡಲೇ ಮಾಡಿದ ಮೊದಲ ಕೆಲಸವೆಂದರೆ ಎಲ್ಲಾ ನಿರ್ಣಯಾಧಿಕಾರಗಳು ತನ್ನ ಆಪ್ತ ಕೂಟದ ಕೈಯಲ್ಲಿರುವಂತೆ ಸಂವಿಧಾನವನ್ನು ತಿದ್ದುಪಡಿ ಮಾಡಿದ್ದು. ನಿಜವಾಗಿಯೂ ಸತತವಾಗಿ ಹಿಟ್ಲರನಿಂದ ಸ್ಫೂರ್ತಿ ಪಡೆಯುವಲ್ಲಿ ಆರ್.ಎಸ್.ಎಸ್. ಮತ್ತು ಬಿಜೆಪಿ ಪ್ರದರ್ಶಿಸುತ್ತಿರುವ ಜಿಗುಟುತನ ನಿಜಕ್ಕೂ ಆಶ್ಚರ್ಯಕಾರಿ.



ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಬಾಯ್ತುಂಬ ಮಾತನಾಡುವ ಬಿಜೆಪಿಯ ಈಗಿನ ಮಿತ್ರರೂ ಇಂತಹ ಅಪಾಯಕಾರಿ ಪ್ರಯತ್ನವನ್ನು ಅನುಮೋದಿಸಿದ್ದಾರೆಂದರೆ ನಿಜಕ್ಕೂ ಆಶ್ಚರ್ಯದ ಸಂಗತಿ. ದಾರಿತಪ್ಪಿಸುವ 'ಜನಪ್ರಿಯ' ಘೋಷಣೆಗಳನ್ನು ಹುಟ್ಟುಹಾಕುವ ಚಾಳಿಯ ಶ್ರೀಮತಿ ಮಮತಾ ಬ್ಯಾನರ್ಜಿ '78 ಹೊಲಿಗೆಗಳಿರುವ ಹಳೆಯ ಸೀರೆಗಿಂತ ಒಂದು ಹೊಸ ಸೀರೆಯೇ ವಾಸಿ' ಎಂದಿದ್ದಾರಂತೆ. ಅಂದರೆ ಈಗಿನ ಸಂವಿಧಾನದಲ್ಲಿ 78 ತಿದ್ದುಪಡಿಗಳಾಗಿವೆ ಎಂಬುದು ಆಕೆಯ ಸೂಚ್ಯಾರ್ಥ. ಒಂದೆಡೆ ಕೋಮುವಾದಿ ಶಕ್ತಿಗಳು ಈ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ನಾಶಮಾಡುವ, ನಮ್ಮ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಅಡಿಗಲ್ಲಿನ ಶಕ್ತಿಯನ್ನು ಹ್ರಾಸಗೊಳಿಸುವತ್ತ ಒಂದು ಉನ್ಮತ್ತ, ಅಸಹ್ಯಕರ ಸೀರೆಯನ್ನು ನೇಯುತ್ತಿರುವಾಗ ಭಾರತ ತನ್ನ ಸೀರೆಯನ್ನು ಕಳಚಿ ಹಾಕಬೇಕು ಎಂದು ಶ್ರೀಮತಿ ಬ್ಯಾನರ್ಜಿ ಬಯಸುತ್ತಿದ್ದಾರೆ.

ಇದಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ. ಸಂಸತ್ತಿನಲ್ಲಿ ಹಾಗೂ ಅಗತ್ಯವಿದ್ದರೆ ಜನಗಳ ನಡುವೆ ಒಂದು ಸಂಪೂರ್ಣ ಹಾಗೂ ಆಮೂಲಾಗ್ರ ಚರ್ಚೆಯಿಲ್ಲದೆ ಸಂವಿಧಾನದ ವಿಮರ್ಶೆಗೆ ಸಮಿತಿಯನ್ನು ರಚಿಸಲು ಬಿಡಬಾರದು. ಕೋಮುವಾದಿ-ಫ್ಯಾಸಿಸ್ಟ್ ವಾದದ ಆರ್.ಎಸ್.ಎಸ್.ನ ರಾಜಕೀಯ ಅಂಗ ಆಗಿರುವ ಬಿಜೆಪಿ ದೇಶದ ಧರ್ಮನಿರಪೇಕ್ಷ ಪ್ರಜಾಪ್ರಭುತ್ವವಾದಿ ಗಣತಂತ್ರವನ್ನು ಹೈಜಾಕ್ ಮಾಡಲು ಬಿಡಬಾರದು. ○



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27